ಜನವರಿ 18, 2026
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್ 2020

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ವಾಲ್ಮೀಕಿ ಸಮುದಾಯ ಕೆಂಡಾಮಂಡಲ

# ರಿಪಬ್ಲಿಕ್ ಬಳ್ಳಾರಿಗಾಗಿ ಶುರುವಾಯ್ತಾ ರೆಡ್ಡಿ v/s ರೆಡ್ಡಿ ವಾರ್!





## ಮೃತನ ದೇಹಕ್ಕೆ 2 ಬಾರಿ ಪೋಸ್ಟ್ ಮಾರ್ಟಂ?!



## ಆನೇಕಲ್ ರೌಡಿ ಸಲಗನ ಶಿಷ್ಯವೇ ಕಟ್!





## ಚೆನ್ನಿಪುರದೊಡ್ಡಿ ಡೇರಿ ಮಾಲೀಕ ಕಗ್ಗೊಲೆ!

## 'ಟಾಕ್ಸಿಕ್' ಟೀಸರ್ ಕನ್ನಡಿಗರ ಶಾಕ್!



## ಟ್ರಬಲ್ ಶೂಟರ್ ಡಿಕೆಶಿ ಸಿಎಂ ಆಗೋದು ಡೌಟ್!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಹಳೇ ವಿದ್ಯಾರ್ಥಿಗಳನ್ನು ಸೇರಿಸಿ ದೇಗುಲ ಮಠದಲ್ಲಿ ಸಮಾವೇಶ ನಡೆಸಿದ್ದು....

ಕನಕಪುರದ ಶ್ರೀದೇಗುಲ ಮಠ ಒಂದು 700 ವರ್ಷಗಳ ಇತಿಹಾಸವಿರುವ ಪ್ರಸಿದ್ಧ ಮಠವಾಗಿದ್ದು, ದೇವರು (ದೇಗುಲ) ಮತ್ತು ಗುರು ಸ್ಥಾನ (ಮಠ) ಎರಡರ ಸಂಯೋಜನೆಯಾಗಿದೆ! ಸುತ್ತಮಲಿನ ದೇವಾನುದೇವತೆಗಳ ಉತ್ಸವ ಮೂರ್ತಿಗಳು ಇಲ್ಲಿಗೆ ಬರುವುದರಿಂದಲೂ ಈ ಹೆಸರು ಬಂದಿದೆ.ಇದು ಶಿಕ್ಷಣ, ಸಾಮಾಜಿಕ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದು, ಹಲವು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ.



ಆದಿ ನಿರ್ವಾಣ ಸ್ವಾಮಿಗಳಿಂದ ಪ್ರಾರಂಭವಾದ ಈ ಮಠಕ್ಕೆ ಸುಮಾರು 700 ವರ್ಷಗಳ ಇತಿಹಾಸವಿದೆ.ಏಳೆಂಟು ತಲೆಮಾರುಗಳಿಂದ ಮಠವು ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದು, 45 ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ.ಸದ್ಯ, ಶಶಿಕುಮಾರ್ ಅವರು ನೂತನ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಚನ್ನಬಸವಶ್ರೀಗಳು ಪಟ್ಟಾಧಿಕಾರ ಸ್ವೀಕರಿಸಿದ್ದಾರೆ.



ಶ್ರೀ ಮಠದ ಬಗ್ಗೆ ಇಷ್ಟೆಲ್ಲಾ ಯಾಕೆ ಬರೆಯಬೇಕಾಯ್ತು ಅಂದ್ರೆ, ನಮ್ಮ ಸಂಪಾದಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಇದೇ ಮಠದ ವಿದ್ಯಾರ್ಥಿಯಾಗಿ ಬೆಳೆದವರು. ಅವರದ್ದು ಅಪ್ಪಟ ಮಠ ಪರಂಪರೆ. ಕನಕಪುರ ತಾಲೂಕಿನ ಸಂತೆ ಕೋಡಿಹಳ್ಳಿತವರು ಮನೆಯಾದರೂ, ಅವರು ಬೆಳೆದದ್ದೆಲ್ಲ ಕನಕಪುರದಲ್ಲೇ. ರಾಜಕಾರಣಿ ಆಗಬೇಕೆಂದು ಬಯಸಿ ಕೊನೆಗೆ ಪತ್ರಕರ್ತರಾದವರು ಶ್ರೀ ಎಂ. ಮಲ್ಲಿಕಾರ್ಜುನ ಯ್ಯ! ಅವರು 'ಪೊಲೀಸ್ ನ್ಯೂಸ್' ಜೊತೆಗೆ ಹತ್ತಾರು ಮಾಸಿಕ, ಪಾಕ್ಷಿಕ ಹಾಗೂ ದೈನಂದಿನ ಪತ್ರಿಕೆಗಳನ್ನು ಹೊರತಂದು ಅಷ್ಟು ಬ್ಯುಸಿ ಆದರೂ.... ತಾವು ನಡೆದು ಬಂದ ದಾರಿಯನ್ನ ಎಂದೂ ಮರೆಯಲಿಲ್ಲ.

ಅದಕ್ಕೆ ಸಾಕ್ಷಿ ಶ್ರೀ ದೇಗುಲ ಮಠದಿಂದ 'ದೇಗುಲ ಪ್ರಭೆ' ಪ್ರಕಟಣೆ ಹಾಗೂ ಅಲ್ಲಿ ವಿದ್ಯಾಭ್ಯಾಸ ಮಾಡಿ ಹೊರಗೆ ಹೋಗಿದ್ದ ಹಳೆಯ ವಿದ್ಯಾರ್ಥಿಗಳನ್ನು ಒಟ್ಟಿಗೆ ಸೇರಿಸಿ 'ಹಳೆಯ ವಿದ್ಯಾರ್ಥಿಗಳ ಸಂಘ' ಸ್ಥಾಪಿಸಿ, ಅದರ

☞ 3

# ಫ್ಯಾಮಿಲಿ ಸ್ಟಾರ್ ಹಾಲಿವುಡ್ ಸ್ಟಾರ್ ಆದ ಅಂತ ಖುಷಿಪಡಬೇಕೆ ಅಥವಾ...



ಸಂಪಾದಕ
**ಎಂ. ರಾಹುಲ್**

ರಾಕಿಂಗ್ ಸ್ಟಾರ್ ಯಶ್ ಹುಟ್ಟುಹಬ್ಬದಂದೇ ರಿಲೀಸ್ ಆದ 'ಟಾಕ್ಸಿಕ್' ಟೀಸರ್ ಹಲವು ಕಾರಣಗಳಿಂದ ಗಮನ ಸೆಳೆಯುತ್ತಿದೆ.ಇದು ಕನ್ನಡ ಸಿನಿಮಾ ಆದರೂ, ಇಡೀ ಟೀಸರಿನಲ್ಲಿ ಒಂದೇ ಒಂದು ಕನ್ನಡ ಸಂಭಾಷಣೆ ಇಲ್ಲ! ಸಿನಿಮಾ ಸ್ಟೈಲ್ ಇರೋದು ಹಾಲಿವುಡ್ ಸ್ಟೈಲಿನಲ್ಲಿ!! ಮೇಕಿಂಗ್ ಅಷ್ಟೇ ಅಲ್ಲ, ಚಿತ್ರದ ಪ್ರಣಯ ದೃಶ್ಯಗಳೂ ಹಾಲಿವುಡ್ ಶೈಲಿಯಲ್ಲೇ ಇವೆ! ಟೀಸರ್ ರಿಲೀಸ್ ಆಗುವವರೆಗೂ ಯಶ್ ನೋಡುವುದಕ್ಕೆ ಕಾತುರ ಪಡುತ್ತಿದ್ದವರು ಈಗ ಟೀಸರ‍ರ್ ನಲ್ಲಿ ಬರುವ ಬ್ಲ್ಯಾಕ್ ಕಾರಿನಲ್ಲಿ ಕಾಮೋದ್ವಾರ ಹೊಮ್ಮಿಸಿರುವ ಚೆಲುವೆಯ ಹುಡುಕಾಟದಲ್ಲಿದ್ದಾರೆ!

ಯಶ್ ಇದುವರೆಗೆ ಸ್ಕ್ರೀನ್ ಮೇಲೆ ನಟಿಯೊಬ್ಬರಿಗೆ ಕಿಸ್ ಕೂಡಾ ಮಾಡಿಲ್ಲ. ಆತ ಅಪ್ಪಟ ಫ್ಯಾಮಿಲಿ ಮ್ಯಾನ್! ಆದರೆ 'ಟ್ಯಾಕ್ಸಿಕ್'ನಲ್ಲಿ ಗಡಿದಾಟಿಯೇ ರೊಮ್ಯಾನ್ಸ್ ಮಾಡಿದ್ದಾರೆ! ಪಕ್ಕಾ ಹಾಲಿವುಡ್ ಸ್ಟೈಲ್!! ನೋಡಿದವರು, ಇದು ಅತಿ ಆಯ್ತು, ಇದು ಕನ್ನಡದ ಟೇಸ್ಟ್ ಅಲ್ಲ, ಸಂಸಾರ ಸಮೇತ ನೋಡೋಕೆ ಆಗಲ್ಲ... ಎಂದು ಕಮೆಂಟ್ ಹಾಕುತ್ತಿದ್ದಾರೆ! ಇವರ ಮಧ್ಯೆ ಆ ಕಾರ್ ಸೀನ್‌ನಲ್ಲಿದ್ದ ಬ್ಯೂಟಿ ಯಾರು ಎಂದು ಹುಡುಕಾಡುವವರೂ ಜಾಸ್ತಿಯಾಗಿದ್ದಾರೆ!

'ರಾಯ'ನ ಪಾತ್ರಧಾರಿ ಯಶ್ ಇಲ್ಲಿ ರೊಮ್ಯಾನ್ಸ್ ಮಾಡಿರುವುದು ಕಿಯಾರಾ ಅಡ್ವಾಣಿ, ನಯನತಾರ, ರುಕ್ಮಿಣಿ ವಸಂತ್, ತಾರಾ ಸುತಾರಿಯಾ, ಹ್ಯುಮಾ ಕುರೇಶಿ ಇವರ್ಯಾರ ಜೊತೆಯಲ್ಲೂ ಅಲ್ಲ.....ರೊಮ್ಯಾನ್ಸ್ ಮಾಡಿರುವುದು ನಟೇಲಿ ಬರ್ನ್ ಎಂಬ ಹಾಲಿವುಡ್ ನಟಿಯ ಜೊತೆ! ಈ ನಟೇಲಿ ಬರ್ನ್, ಉಕ್ರೇನ್ ಮೂಲದ ಚಲುವೆ.

'ಬಾರ್ನ್ ಟು ಬರ್ನ್' ಎಂಬ ಸಂಸ್ಥೆಯ ಸಿಇಓ. ಆರ್ಕ್ಟಸ್ ಸ್ಟುಡಿಯೋ ಮತ್ತು ಟೆಲಿವಿಷನ್ ಅಕಾಡೆಮಿಯ ಸದಸ್ಯೆ. ಆಕೆ ಸಿನಿಮಾಗಳಿಗೆ ಕಥೆ ಬರೆಯುತ್ತಾರೆ. 'ಹೆವನ್' ಹೆಸರಿನ ಪ್ರೊಡಕ್ಷನ್ ಹೌಸ್ ಹೊಂದಿರುವ ನಟೇಲಿ ಬರ್ನ್, ಆಕ್ಸೆಲರೇಷನ್, ಫೋರ್ಟ್ರೆಸ್, ದಿ ಪಿಜ್ಜಾ ಟ್ರಾಪ್, ಲವ್ ಹರ್ಟ್, ದಿ ಎನ್‌ಫೋರ್ಸರ್, ಡೆವಿಲ್ಸ್ ಹೋಪ್, ಡೌನ್ ಹಿಲ್.. ಮುಂತಾದ ಸಿನಿಮಾಗಳನ್ನು ನಿರ್ಮಿಸಿದ್ದಾಳೆ. ಹೀರೋಯಿನ್ ಕೂಡ ಆಗಿರುವ ನಟೇಲಿ ಬರ್ನ್, ದಿ ಎಕ್ಸ್‌ಪೆಂಡೆಬಲ್ಸ್ 3, ಮೆಕ್ಯಾನಿಕ್ ರಿಸರಕ್ಷನ್, ಫಾರ್ಸಸ್ಟ್ರೆಸ್, ಕಾಫಿ ಡೇಟ್, ಇನ್ ದಿ ನೇಮ್ ಆಫ್ ಕಿಂಗ್, ಮಮುಲಾ, ಮೊದಲಾದ ಸಿನಿಮಾಗಳಲ್ಲಿ ನಟಿಸಿದ್ದಾಳೆ.

ನನಗೆ ರೊಮ್ಯಾನ್ಸ್ ಸೀನ್ ಮಾಡಲು ಸಂಕೋಚವಾಗುತ್ತೆ ಎನ್ನುತ್ತಿದ್ದ ಯಶ್,ಈಗ ಬರ್ನ್ ಬ್ಯೂಟಿ ಯೊಂದಿಗೆ ಖುಲ್ಲಂ ಖುಲ್ಲಾ ಓಪನ್ ಆಗಿಯೇ ರೊಮ್ಯಾನ್ಸ್ ಮಾಡಿದ್ದಾರೆ! ಯಶ್ ಮೊನ್ನೆ ಮೊನ್ನೆ ಜನವರಿ 8 ರಂದು ತಮ್ಮ 40ನೇ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ. ಈ ಜನ್ಮದಿನದ ಪ್ರಯುಕ್ತ ಅಭಿಮಾನಿಗಳಿಗೆ ಅವರು ಟ್ಯಾಕ್ಸಿಕ್ ಟೀಸರ್ ಗಿಫ್ಟ್ ನೀಡಿದ್ದಾರೆ. ಮಲೆಯಾಳಂ ಚಿತ್ರರಂಗದ ಪ್ರತಿಭಾವಂತ ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶನ ಮಾಡುತ್ತಿರುವ ಈ ಸಿನಿಮಾ ಸಖತ್ ಅದ್ದೂರಿಯಾಗಿ ಮೂಡಿಬರುತ್ತಿದೆ.

ಯಶ್ ನಟನೆಯ ಸಿನಿಮಾಗಳಿಗೆ ಫ್ಯಾಮಿಲಿ ಆಡಿಯನ್ಸ್ ಜಾಸ್ತಿಯೇ ಇದ್ದಾರೆ. ಅವರೆಲ್ಲ ಇದೀಗ 'ಟಾಕ್ಸಿಕ್' ಟೀಸರ್ ನೋಡಿ ಹೌಹಾರಿದ್ದಾರೆ! ಹಾಲಿವುಡ್ ಲೆವೆಲ್‌ನಲ್ಲಿ ಈ ಟೀಸರ್ ಮೂಡಿಬಂದಿದೆ. ಟೀಸರ್ ಈ ರೀತಿ ಇರಲಿದೆ ಎಂಬ ಸುಳಿವು ಇಲ್ಲದೇ





ಕುಟುಂಬ ಸಮೇತರಾಗಿ ಟಿವಿಯಲ್ಲಿ ನೋಡಿದವರೆಲ್ಲ ಕಂಗಾಲಾಗಿದ್ದಾರೆ!

ಯಶ್ ಅವರು ಫ್ಯಾಮಿಲಿ ಸ್ಟಾರ್. ಈವರೆಗೂ ಅವರು ಕುಟುಂಬ ಸಮೇತರಾಗಿ ಕುಳಿತು ನೋಡುವಂತಹ ಸಿನಿಮಾಗಳನ್ನೇ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಫ್ಯಾಮಿಲಿ ಆಡಿಯನ್ಸ್ ಜಾಸ್ತಿ ಇದ್ದಾರೆ. ಹುಟ್ಟುಹಬ್ಬದ ಪ್ರಯುಕ್ತ ಟೀಸರ್ ಬಿಡುಗಡೆ ಆಗುತ್ತದೆ ಎಂದಾಗ ಫ್ಯಾಮಿಲಿ ಆಡಿಯನ್ಸ್ ಕೌತುಕದಿಂದ ಕಾದಿದ್ದರು. ಆದರೆ ಟೀಸರ್ ನೋಡಿದಾಗ ಎಲ್ಲರಿಗೂ ಶಾಕ್ ಎದುರಾಯಿತು. ಹಾಲಿವುಡ್ ನಟಿಯ ಜೊತೆ ಯಶ್ ಅವರು ತುಂಬಾ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಹಸಿಬಿಸಿ ದೃಶ್ಯದಲ್ಲಿ ಅವರು ನಟಿಸಿದ್ದಾರೆ. ಟೀಸರ್‌ನಲ್ಲಿ ಈ ರೀತಿಯ ದೃಶ್ಯ ಇರಬಹುದು ಎಂದು



ಫ್ಯಾಮಿಲಿ ಆಡಿಯನ್ಸ್ ಕಿಂಚಿತ್ತೂ ನಿರೀಕ್ಷಿಸಿರಲಿಲ್ಲ. ಮನೆಯಲ್ಲಿ ಕುಳಿತು, ಟಿವಿಯಲ್ಲಿ ಫ್ಯಾಮಿಲಿ ಸಮೇತರಾಗಿ ಟೀಸರ್ ವೀಕ್ಷಿಸಿದ ಪ್ರೇಕ್ಷಕರು ಒಮ್ಮೆಲೇ ಶಾಕ್ ಆಗಿದ್ದಾರೆ. 'ಕನ್ನಡದ ಪ್ರೇಕ್ಷಕರು ಇದನ್ನು ಊಹಿಸಿರಲಿಲ್ಲ' ಎಂದು ಅನೇಕರು ಕಮೆಂಟ್ ಮಾಡುತ್ತಿದ್ದಾರೆ.

'ಕಾರ್ ದೃಶ್ಯ ನಿಜಕ್ಕೂ ಅನಿರೀಕ್ಷಿತವಾಗಿತ್ತು. ಫ್ಯಾಮಿಲಿ ಜೊತೆ ಕುಳಿತು ನೋಡಿದವರ ಪಾಡು ಏನಾಗಿರಬಹುದು ಅಂತ ಊಹಿಸಿ' ಎಂಬಿತ್ಯಾದಿ ಕಮೆಂಟ್‌ಗಳು ಕೂಡ ಬಂದಿವೆ. ಟೀಸರ್ ಈ ರೀತಿ ಇದ್ದರೆ ಒಟ್ಟಾರೆ ಸಿನಿಮಾ ಹೇಗಿರಬಹುದು ಎಂಬ ಕೌತುಕ ಮೂಡಿದೆ.

ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ 'ಟಾಕ್ಸಿಕ್' ಸಿನಿಮಾ ಸಿದ್ಧವಾಗುತ್ತಿದೆ. ಇದು ಹಾಲಿವುಡ್ ರೀತಿಯ ಮೇಕಿಂಗ್ ಇರುವ ಸಿನಿಮಾ. ಸಿನಿಮಾದಲ್ಲಿನ ದೃಶ್ಯಗಳು ಕೂಡ ಹಾಗೆಯೇ ಇರಲಿವೆ ಎಂಬುದಕ್ಕೆ ಟೀಸರ್‌ನಲ್ಲಿ ಸಾಕ್ಷಿ ಸಿಕ್ಕಿದೆ. ಈವರೆಗೂ ಟಟಾಕ್ಸಿಕ್‌ಟ ಸಿನಿಮಾದ ಕಥೆ ಏನು ಎಂಬುದು ಎಲ್ಲಿಯೂ ರಿವೀಲ್ ಆಗಿಲ್ಲ. ಆದರೆ ಇದು ಯಾವ ರೀತಿಯ ಸಿನಿಮಾ ಎಂಬುದರ ಝಲಕ್ ಅಷ್ಟೇ ಕಾಣಿಸಿದೆ.

ಇವತ್ತು ಜಗತ್ತನ್ನು ಕಾಡುತ್ತಿರುವ ಡ್ರಗ್ಸ್ ಸುತ್ತಾ ಚಿತ್ರಕತೆ ಸುತ್ತಿಕೊಂಡಿದೆ ಅನ್ನೋದು ನಮ್ಮ ಊಹೆ. ಆದರೆ, ಅದರಾಚೆಗೂ ಇನ್ನೇನೋ ಇರಬಹುದಾ... ಅನ್ನೋದು ಈಗಿನ ಟೀಸರ್ ನಲ್ಲಿ ಎದ್ದು ಕಾಣುತ್ತಿದೆ..... ಒಂದಂತೂ ಸತ್ಯ. ಯಶ್ ಅವರ ಈ ಹೊಸ ಸಾಹಸ ಜಗತ್ತನ್ನೇ ಗೆಲ್ಲಬಹುದು. ಆದರೆ, ಕನ್ನಡ ಕುಟುಂಬಗಳನ್ನು ಗೆಲ್ಲಲಾರದು! ಈ ಸತ್ಯ ಯಶ್ ಗೆ ತಿಳಿದಿಲ್ಲವಾ....

ಅಥವಾ ಹಾಲಿವುಡ್ ಸ್ಟಾರ್ ಆಗುವ ಹುಮ್ಮೇದಿಯಲ್ಲಿ ಕನ್ನಡಿಗರನ್ನು ಕಡೆಗಣಿಸಿದ್ದಾರಾ....?! ಯಶ್ ಮಹತ್ವಕಾಂಕ್ಷಿ ನಿಜ, ಹಾಗಂತ ಓರ್ವ ಕನ್ನಡಿಗನಾಗಿ ನಮ್ಮ ಸಂಸ್ಕಾರ ಸಂಸ್ಕೃತಿಗೆ ಅಪಚಾರ ಮಾಡೋದು ಸರಿಯೇ??

ಹಾಲಿವುಡ್ ಅಂದರೆ ಅಲ್ಲಿ explicit scene ಇರಲೇ ಬೇಕು, ಮತ್ತದನ್ನ ಮನೆಯವರ ಕಣ್ಣು ತಪ್ಪಿಸಿ ಕದ್ದು ಮುಚ್ಚಿ ನೋಡಬೇಕು... ಹಾಲಿವುಡ್ ಲೆವೆಲ್ ಗೆ ನಮ್ಮರೊಬ್ಬರು ಬೆಳೆದರು ಅಂತ ಸಂಭ್ರಮಿಸುವ ಕೆಲವರಿಗೆ ದೊಡ್ಡ ನಮಸ್ಕಾರ! ಅಮೆರಿಕ ಯುರೋಪ್ ಗಳ ರಸ್ತೆಗಳಲ್ಲಿ ಬಹಿರಂಗವಾಗಿ ಚುಂಬಿಸುವ ದೃಶ್ಯ ಸರ್ವೇ ಸಾಮಾನ್ಯ. ಆದ್ರೆ ಸಿವಿಕ್ ಸೆನ್ಸ್ ನಮ್ಮ ಸೋ ಕಾಲ್ಡ್ ಕಲ್ಚರ್ ಜನರಿಗಿಂತ ಹೆಚ್ಚಾಗೆ ಇದೆ! ಹಾಲಿವುಡ್ ನವರನ್ನ ಮೆಚ್ಚಿಸೋಕೆ ಫ್ಯಾಂಟಸಿ ಹೆಸರಲ್ಲಿ ವಲ್ಗ್ಯಾರಿಟಿ ಇಂಟ್ರೋ ಇರುವ ಯಶ್ ಎಂಟ್ರಿಯನ್ನ ಹಾಲಿವುಡ್ ಜನ ಒಪ್ಪಿಕೊಳಾರಾ?! ಅದನ್ನ ಕಾಲವೇ ಹೇಳುತ್ತೆ!

ಇಲ್ಲಿನ ಮಣ್ಣಿನ ಮಗನಾಗಿ ಬೆಳೆದ ಮಾತ್ರಕ್ಕೆ ನಮ್ಮ ನಿಮ್ಮ ಮೂಗಿನ ನೇರಕ್ಕೆ ಒಬ್ಬ ನಟನಾಗಿ ಉಳಿಯಬೇಕು ಅನ್ನೋ ಸದ್ವಿಚಾರ probably ರಾಜ್ ಕುಮಾರ ಹಾಗೂ ತಕ್ಕ ಮಟ್ಟಿಗೆ ಅಪ್ಪುವಿನ ಜೊತೆಗೆ ಕೊನೆಯಾಯಿತು ಅನಿಸುತ್ತೆ! ಟ್ಯಾಕ್ಸಿಕ್ ಟೀಸರ್ ನೋಡಿ ಕನ್ನಡಿಗರು ಕಸಿವಿಸಿ ಗೊಂಡಿದ್ದರೆ, ಸುದೀಪ್, ಕೊಬ್ರಿ, ಮಂಜು ಮುಂತಾದವರು ಅತನನ್ನು ಭೇಷ್ ಎಂದು ಹೊಗಳುತ್ತಿದ್ದಾರೆ! ಹಾಲಿವುಡ್ ಜನರಿಗಾಗಿ ಮಾಡುವ ಪಕ್ಕಾ ಬಿಸಿನೆಸ್ ಮೈಂಡ್‌ಗಳನ್ನ ತಲೆ ಮಲೆ ಹೊತ್ತು ಭಾಗ್ಯದ ದೇವರುಗಳಂತೆ ಬಿಂಬಿಸುವ ವ್ಯರ್ಥ ಪ್ರಯತ್ನ ಯಾಕೆ ಅಂತ.

ಒಬ್ಬ ಕಲಾವಿದ ತಾನೇನು ಮಾಡಬೇಕು ಮಾಡಬಾರದು ಅನ್ನೋದು ಅವನ ವೈಯಕ್ತಿಕ ಆಯ್ಕೆ ಅದಕ್ಕೂ ಮಡಿಗಣ್ಣಿನ ಲೇಪನ ಅನವಷ್ಯಕ! ಆದರೆ ಮಾಸ್ ಫಾಲೋಯಿಂಗ್ ಇರುವ ಇಂತಹ ಜನರಿಗೆ ಕನಿಷ್ಟ ಸಾಮಾಜಿಕ ಪ್ರಜ್ಞೆ ಇಲ್ಲದಿರುವುದು ವಿಪರ್ಯಾಸ!! ಯಾವುದೇ Desclaimer ಇಲ್ಲದೇ ಯುಟ್ಯೂಬ್ ನಲ್ಲಿ ಹೀಗೆ ಹರಿಬಿಟ್ಟ ಟ್ರೇಲರ್ ಅದಾಗಲೇ20 ಕೋಟಿ ವೀವ್ಸ್ ಪಡೆದಾಗಿದೆ...

ಅಲ್ಲಿಗೆ ಅವರುಗಳು ಅಂದುಕೊಂಡ ರೀತಿಯಲ್ಲೇ ಪ್ರಚಾರ ಕೂಡ ಸಿಕ್ಕಿಯಾಗಿದೆ. ಸತ್ಯ ಹರಿಶ್ಚಂದ್ರ ಹಾಗೂ ಸಂಪೂರ್ಣ ರಾಮಾಯಣ ಸಿನಿಮಾ ನೋಡಿ ಹರಿಶ್ಚಂದ್ರ ರಾಮನ ಜಪ ಮಾಡಿಕೊಂಡು ಗಳಿಸಿದ ಪಾಪ ಪುಣ್ಯವನ್ನು ನಾಳೆ 'ಟ್ಯಾಕ್ಸಿಕ್' ನೋಡಿ ಪರಿಹರಿಸಿಕೊಳ್ಳಬೇಕೇ....

-ಸಂ.

2 ☞

ಮೂಲಕ ಶ್ರೀ ಮಠದಲ್ಲಿ ಆಗಾಗ ಸಮಾವೇಶ ಹಮ್ಮಿಕೊಂಡದ್ದು. 1999 ರಲ್ಲಿ ಶ್ರೀ ಮಠದಲ್ಲಿ ಹಳೇ ವಿದ್ಯಾರ್ಥಿಗಳು ಹಾಗೂ ಮಠದ ಅಭಿಮಾನಿಗಳನ್ನು ಒಟ್ಟಿಗೆ ಸೇರಿಸಿ ಸಮಾವೇಶ ಹಮ್ಮಿಕೊಂಡು ಅತ್ಯಂತ ಯಶಸ್ವಿಯಾಗಿ ನಡೆಸಿದ್ದರು.

ಅವತ್ತು ಅಲ್ಲಿ ನಾಡಿನ ವಿವಿಧಕ್ಷೇತ್ರಗಳಲ್ಲಿ ಗಣ್ಯರು, ವಿವಿಧ ಮಠಗಳ ಮಠಾಧಿಪತಿಗಳು ಹಾಜರಿದ್ದು ಸಮಾವೇಶ ಅತ್ಯಂತ ಯಶಸ್ವಿಯಾಗಿ ನಡೆದಿತ್ತು. ನಮ್ಮ





ಸಂಪಾದಕರು ಮಾಡಿದ್ದ ಈ ಕಾರ್ಯಕ್ಕೆ ಹೊರ ದೇಶ, ಹೊರ ರಾಜ್ಯಗಳಿಂದಲೂ ಭಕ್ತರಿಂದ ಪ್ರಸಂಸೆ ಹರಿದು ಬಂದಿತ್ತು. ಮಾತ್ರವಲ್ಲ, ಅವರೊಂದಿಗೆ ಕಾಯಕ ಮಾಡುತ್ತಿದ್ದ ನಮಗೂ ಮಠ ಪರಂಪರೆ ಬದುಕು ಬಹಳ ಇಷ್ಟವಾಗಿ, ಅದೇ ರೂಢಿಯೂ ಆಗಿ ಹೋಯಿತು! ಇವತ್ತು ಈ ಫೋಟೋಗಳನ್ನು ನೋಡ್ತಾ ನೋಡ್ತಾ ಹಳೆಯದ್ದೆಲ್ಲ ನೆನಪಾಯಿತು!!

# ರೌಡಿ ಶೀಟರ್ ನಿಂದಲೇ ರೌಡಿಯ ಕಿಡ್ನಾಪ್ - ಮರ್ಮಾಂಗ ಸ್ಕ್ರಾಪ್!
# ಆನೇಕಲ್ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಗ್ಯಾಂಗ್‌ವಾರ್ ರೀಸ್ಟಾರ್ಟ್!!

**ರೌಡಿ ಕಾರ್ತಿಕ್ ಹೀಲಲಿಗೆ ಬಳಿಯಿದ್ದ ತನ್ನ ಪ್ರೇಯಸಿಯ ಮನೆಗೆ ಹೋಗಿದ್ದನ್ನು ಖಚಿತ ಪಡಿಸಿಕೊಂಡು, ಫಾಲೋ ಅಪ್ ಮಾಡಿ ಅವನನ್ನು ತಮಿಳುನಾಡಿನ ಹೊಸೂರು ಕಡೆಗೆ ಎತ್ತಾಕಿಕೊಂಡು ಹೋಗಿ, ಮರ್ಮಾಂಗ ಕಟ್ ಮಾಡಿ, ಕೈ ಬೆರಳು ತುಂಡರಿಸಿ ಭಾರಿ ಚಿತ್ರಹಿಂಸೆ ನೀಡಿ, ಯಾವುದೋ ವಿಷಯ ಬಾಯಿ ಬಿಡಿಸುವ ಪ್ರಯತ್ನ ಮಾಡಿದ್ದಾರೆನ್ನಲಾಗುತ್ತಿದೆ! ಮರ್ಮಾಂಗ ಕಟ್ ಮಾಡಲು ಅನೈತಿಕ ಸಂಬಂಧವೂ ಕಾರಣವಾಗಿರಬಹುದೆಂಬ ಶಂಕೆ ಇದೆ! ಕಾರ್ತಿಕ್‌ನನ್ನು ಹೊಸೂರಿನ ನಿರ್ಜನ ಪ್ರದೇಶದಲ್ಲಿ ಹಿಡಿದಿಟ್ಟುಕೊಂಡು, ಇವನಿಂದ ಹಿಂದೆ ಕೊಲೆಯಾಗಿದ್ದ ಪುರಸಭಾ ಸದಸ್ಯ ಸ್ಕ್ರಾಪ್ ರವಿಯ ಕಡೆಯವರಿಗೆ ಫೋನ್ ಮಾಡಿ 'ನಿಮ್ಮ ಎದುರಾಳಿ ಇಲ್ಲೇ ನಮ್ಮ ಬಳಿ ಇದ್ದಾನೆ, ಸುಫಾರಿ ಹಣ ಕೊಟ್ರೆ ನಾವೇ ಕೊಲೆ ಮಾಡಿ ಬಿಸಾಕ್ತೀವಿ' ಎಂದು ಕೇಳಿ, ವ್ಯವಹಾರ ಕುದುರದೆ ಕಾರ್ತಿಕ್‌ನನ್ನು ರಸ್ತೆಬದಿಯಲ್ಲಿ ಬಿಸಾಡಿ ಹೋಗಿದ್ದಾರೆ ಎನ್ನಲಾಗುತ್ತಿದೆ!!**


ರೌಡಿ ಕಾರ್ತಿಕ್ ಅಲಿಯಾಸ್ ಜೆ.ಕೆ.


ರೌಡಿಶೀಟರ್ ಗಂಗಾ

**ಬೆಂಗಳೂರು**
✍ ಹೆಚ್.ಕೆ. ಮಹದೇವ್

ಆನೇಕಲ್‌ನ ಕಾರ್ತಿಕ್ ಅಲಿಯಾಸ್ ಜೆಕೆ ಎಂಬ ಸಮಾಜಘಾತುಕನನ್ನು ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿದ್ದ ಕಾರಣದಿಂದ ರೌಡಿ ಶೀಟರ್ ಮಾಡಲಾಗಿತ್ತು. ಆನೇಕಲ್‌ನ ಕುಖ್ಯಾತ ರೌಡಿಯಾಗಿದ್ದ ಬೆಸ್ತಮಾನಹಳ್ಳಿ ಸುನಿಲನ ಕೊಲೆ ಕೇಸಿನಲ್ಲಿ ರೌಡಿ ಮನೋಜ್ ಅಲಿಯಾಸ್ ಗಾಂಜಾ ಮನುವಿನ ಸಹಚರನಾಗಿದ್ದ ಈ ಕಾರ್ತಿಕ್ ನಂತರ ಆನೇಕಲ್ ಪಟ್ಟಣದ ಪುರಸಭಾ ಸದಸ್ಯ ರವಿ ಅಲಿಯಾಸ್ ಸ್ಕ್ರಾಪ್ ರವಿಯನ್ನು ಅವನ ಮನೆ ಬಳಿಯೇ ಕೊಲೆ


ಮರ್ಮಾಂಗ ಕತ್ತರಿಸಿರುವುದು

ಮಾಡಿದ್ದ! ಅವತ್ತು ಅವನ ಕಾಲಿಗೆ ಪೊಲೀಸರು ಗುಂಡು ಹೊಡೆದು ಪರಪ್ಪನ ಅಗ್ರಹಾರ ಬಂದೀಖಾನೆ ಸೇರಿಸಿದ್ದರು.

**ಇನ್‌ಸ್ಟಾಗ್ರಾಮ್ ಟಾಕ್ ವಾರ್!**

ಆನೇಕಲ್ ರೌಡಿ ಗಾಂಜಾ ಮನುವಿನ ಬಲಗೈ ಬಂಟ ರೌಡಿ ಶೀಟರ್ ಗಂಗ ಎಂಬಾತನಿಗೂ ಇದೇ ಕಾರ್ತಿಕ್‌ಗೂ ಸೋಷಿಯಲ್ ಮೀಡಿಯಾ ಇನ್‌ಸ್ಟಾಗ್ರಾಮ್‌ನಲ್ಲಿ ಟಾಕ್ ವಾರ್ ನಡೆದು ಒಬ್ಬರಿಗೊಬ್ಬರು ಕತ್ತಿ ಮಸೆಯುತ್ತಾ ಹೊಡೆದಾಕುವ ಚಾಲೆಂಜಿಂಗ್ ಮಾತುಕತೆಗಳಾಗಿದ್ದವು! ಪೊಲೀಸರು ಆ ಆಡಿಯೋಗಳನ್ನು ಡಿಲೀಟ್ ಮಾಡಿಸಿದ್ರು!

ರೌಡಿ ಗಂಗನ ಜೊತೆಗೆ ಸ್ನೇಹದಿಂದ ಇದ್ದ ಸ್ಕ್ರಾಪ್ ರವಿಯನ್ನು ಕಾರ್ತಿಕ್ ಕೊಂದಿದ್ದು ಗಂಗನಲ್ಲಿ ಆಕ್ರೋಶ ಉಂಟುಮಾಡಿತ್ತು. ರೌಡಿ ಕಾರ್ತಿಕ್ ಜೈಲಿನಿಂದ ಹೊರ ಬರುವುದನ್ನೆ ಕಾಯುತ್ತಿದ್ದ ಗಂಗನ ಗ್ಯಾಂಗ್ ಹೊಂಚು ಹಾಕಿ ಕಾದಿತ್ತು. ರೌಡಿ ಕಾರ್ತಿಕ್ ಮೊನ್ನೆ ರಾತ್ರಿ ಸೂರ್ಯ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಹೀಲಲಿಗೆ ಬಳಿಯಿದ್ದ ತನ್ನ ಪ್ರೇಯಸಿಯ ಮನೆಗೆ ಹೋಗಿದ್ದನ್ನು ಖಚಿತ ಪಡಿಸಿಕೊಂಡು, ಫಾಲೋ ಅಪ್ ಮಾಡಿ ಅವನನ್ನು ತಮಿಳುನಾಡಿನ ಹೊಸೂರು ಕಡೆಗೆ ಎತ್ತಾಕಿಕೊಂಡು ಹೋಗಿ, ಕಾರ್ತಿಕ್‌ನ ಮರ್ಮಾಂಗ ಕಟ್ ಮಾಡಿ, ಕೈ ಬೆರಳು ತುಂಡರಿಸಿ


ಕಿಲ್ಲರ್ ರವಿಪ್ರಸಾದ್ ರೆಡ್ಡಿ

ಭಾರಿ ಚಿತ್ರಹಿಂಸೆ ನೀಡಿ, ಯಾವುದೋ ವಿಷಯ ಬಾಯಿ ಬಿಡಿಸುವ ಪ್ರಯತ್ನ ಮಾಡಿದ್ದಾರೆನ್ನಲಾಗುತ್ತಿದೆ!

ಮರ್ಮಾಂಗ ಕಟ್ ಮಾಡಲು ಅನೈತಿಕ ಸಂಬಂಧವೂ ಕಾರಣವಾಗಿರಬಹುದೆಂಬ ಶಂಕೆ ಇದೆ! ಜೆಕೆ ಕಾರ್ತಿಕ್‌ನನ್ನು ಹೊಸೂರಿನ ನಿರ್ಜನ ಪ್ರದೇಶದಲ್ಲಿ ಹಿಡಿದಿಟ್ಟುಕೊಂಡು, ಇವನಿಂದ ಹಿಂದೆ ಕೊಲೆಯಾಗಿದ್ದ ಪುರಸಭಾ ಸದಸ್ಯ ಸ್ಕ್ರಾಪ್ ರವಿಯ ಕಡೆಯವರಿಗೆ ಫೋನ್ ಮಾಡಿ 'ನಿಮ್ಮ ಎದುರಾಳಿ ಇಲ್ಲೇ ನಮ್ಮ ಬಳಿ ಇದ್ದಾನೆ, ಸುಫಾರಿ ಹಣ ಕೊಟ್ರೆ ನಾವೇ ಕೊಲೆ ಮಾಡಿ ಬಿಸಾಕ್ತೀವಿ!' ಎಂದು ಕೇಳಿದ್ದಾರೆ ಎನ್ನಲಾಗುತ್ತಿದೆ!! ಆಗ ಸ್ಕ್ರಾಪ್ ರವಿ ಕಡೆಯವರಿಗೂ ಈ ಗಾಂಜಾ ಗ್ಯಾಂಗ್‌ನ ರೌಡಿ ಗಂಗನಿಗೂ ವ್ಯವಹಾರ ಕುದುರದೆ ಇದ್ದುದರಿಂದ ಅರೆಜೀವವಾಗಿ ಬಿದ್ದಿದ್ದ ರೌಡಿ ಕಾರ್ತಿಕ್‌ನನ್ನು ಹೊಸೂರಿನ ಬಳಿ ರಸ್ತೆಬದಿಯಲ್ಲಿ ಎಸೆದು ಹೋಗಿದ್ದಾರೆ ಎನ್ನಲಾಗಿದೆ!

**ಗ್ಯಾಂಗ್ ವಾರ್ ಮುನ್ಸೂಚನೆ!**

ರೌಡಿ ಕಾರ್ತಿಕ್‌ಗೆ ಕೆಲ ಅವಿವೇಕಿಗಳು 'ಸಲಗ... ಸಲಗ' ಎನ್ನುತ್ತಿದ್ದರು. ಈಗ ಸಲಗನ ಸಾಮಾನೇ ಕಟ್ ಆಗಿದೆ! ಸದ್ಯ, ಸ್ಕ್ರಾಪ್ ರೌಡಿ ಕಾರ್ತಿಕ್ ಹೊಸೂರಿನ ಖಾಸಗಿ ನರ್ಸಿಂಗ್ ಹೋಂನಲ್ಲಿ ಪ್ರಥಮ ಚಿಕಿತ್ಸೆ ತೆಗೆದುಕೊಂಡು ನಂತರ ಚಂದಾಪುರದಲ್ಲಿರುವ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ದಾಖಲಾಗಿ ಕರುಣಾಜನಕ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ! ರೌಡಿ ಕಾರ್ತಿಕ್ ಮೈಮೇಲೆ ಚಾಕುವಿನಿಂದ ಬಲವಾಗಿ ತಿವಿದಿರುವ ಗಾಯಗಳಿದ್ದು ಭಯಬೀತಳಾಗಿರುವ ಆತನ ಹೆಂಡತಿ ಕಂಪ್ಲೇಂಟ್ ಕೊಡದಿದ್ದರೂ ಪೊಲೀಸರೇ ಸುಮೋಟೋ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವ ಸಾಧ್ಯತೆ ಇದೆ! ಏಕೆಂದರೆ ಆನೇಕಲ್ ಈಗ ಕ್ರೈಂ ಕ್ಯಾಪಿಟಲ್ ಆಗಿ ಕನ್ವರ್ಟ್ ಆಗಿ ಹೋಗಿದೆ! ಕಳೆದ ನವೆಂಬರ್ ಒಂದೇ ತಿಂಗಳಲ್ಲಿ ಎಂಟು ಕೊಲೆಗಳಾಗಿ ಇಡೀ ಆನೇಕಲ್ ಜನರು ಭಯಭೀತರಾಗಿ ತತ್ತರಿಸಿ ಹೋಗಿದ್ದಾರೆ! ಮೇಲ್ನೋಟಕ್ಕೆ ಇದು ಹಳೇ ದ್ವೇಷದ ಹಿನ್ನೆಲೆಯಲ್ಲಿ ನಡೆದಿರುವ ಘಟನೆಯಂತೆಯೇ ಕಾಣುತ್ತಿದೆಯಾದರೂ, ಮುಂದಾಗುವ ಎರಡೂ ರೌಡಿ ಗ್ರೂಪ್‌ಗಳ ನಡುವಿನ ಭೀಕರ ಗ್ಯಾಂಗ್‌ವಾರ್‌ನ ಮುನ್ಸೂಚನೆಯಂತೆ ಭಾಸವಾಗುತ್ತಿದೆ!!


ಎಸ್ಪಿ ಸಿ.ಕೆ. ಬಾಬಾ

ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡು ಈ ಗಾಂಜಾ ಗ್ಯಾಂಗ್‌ಅನ್ನು ಮಟ್ಟಹಾಕದಿದ್ದರೆ, ಆನೇಕಲ್ ವ್ಯಾಪ್ತಿಯಲ್ಲಿ ಇನ್ನೂ ಎಷ್ಟು ಹೆಣ ಬೀಳಲಿವೆಯೋ? ಎಷ್ಟು ಲೀಟರ್ ರಕ್ತ ಹರಿಯಲಿದೆಯೋ ಬಲ್ಲವರಾರು?

**ಆನೇಕಲ್ ಈಗ ಮನಿ ಪ್ಲಾಂಟ್!**

ಬೆಂಗಳೂರು ನಗರದ ಹೊರ ವಲಯದಲ್ಲಿ ವೇಗವಾಗಿ ಬೆಳೆಯುತ್ತಿರುವ ಆನೇಕಲ್ ತಾಲೂಕಿನಲ್ಲಿ ಒಂದೇ ತಿಂಗಳಲ್ಲಿ ಬರೋಬ್ಬರಿ ಎಂಟು ಮರ್ಡರ್ ನಡೆದಿವೆ! ಆನೇಕಲ್ ಈಗ ಮನೀ ಪ್ಲಾಂಟ್! ಕೈ ಇಟ್ಟ ಕಡೆಯಲ್ಲೆಲ್ಲಾ ಕಾಸು! ಕಾಂಪೌಂಡ್ ಕೆಡವಿದ್ರೂ ಕಾಸು! ಬೇಲೆ ಸುತ್ತಿದ್ರು ಕಾಸು! ಇಲ್ಲಿನ ಭೂಮಿಗೆ ಬಂಗಾರದ ಬೆಲೆ ಬಂದಿದೆ. ಮನುಷ್ಯನೊಳಗಿನ ಮನುಷ್ಯತ್ವ, ಮಾನವೀಯ ಸಂವೇದನೆ ಒಳ್ಳೇತನ ದಿನೇ ದಿನೇ ಸತ್ತು ಹೋಗ್ತಿದೆ!


ಕಾರ್ತಿಕ್‌ನಿಂದ ಕೊಲೆಯಾದ ಕೌನ್ಸಿಲರ್ ರವಿ

ದುಡ್ಡೇ ದೊಡ್ಡಪ್ಪ ಎನ್ನುವ ಈ ಕಾಲಘಟ್ಟದಲ್ಲಿ ಆನೇಕಲ್‌ನಂತಹ ಯಾವ ಊರಾದರೂ ಹಾಳಾಗದೇ ಇರದು... ಇಂಡಸ್ಟ್ರೀಸ್ ಹಬ್ ಆಗಿರುವ ಆನೇಕಲ್ ತಾಲೂಕಿನಲ್ಲಿ ವಿಲ್ಲಾಗಳು, ಅಪಾರ್ಟ್‌ಮೆಂಟ್‌ಗಳು, ಐಷಾರಾಮಿ ಬಿಡಿಎ ಲೇಔಟ್‌ಗಳು ತಲೆ ಎತ್ತಿನಿಂತಿವೆ. ಪಕ್ಕದಲ್ಲಿ ತಮಿಳುನಾಡಿನ ಇಂಡಸ್ಟ್ರಿಯಲ್ ಟೌನ್ ಹೊಸೂರು ಅಂಟಿಕೊಂಡೇ ಬೆಳೆದು ನಿಂತಿದೆ. ಭತ್ತ, ರಾಗಿ ಬೆಳೆಯುತ್ತಿದ್ದ ಹೊಲಗದ್ದೆಗಳಲ್ಲೀಗ ಕಾಂಕ್ರೀಟ್ ಕಾಡೇ ಎದ್ದು ನಿಂತಿದೆ. ಕೆರೆ ಕುಂಟೆಗಳು ಮಂಗಮಾಯವಾಗಿವೆ. ರಾಜಕೀಯ, ರೌಡಿಸಂ ಒಂದಕ್ಕೊಂದು ಬೆರೆತು ದುಡ್ಡು ಮಾಡುವ ದಂಧೆಯಾಗಿ ರೂಪುಗೊಂಡಿರುವುದರಿಂದ, ಇವರಿಗೆ ಕೆಲ ಖಾಕಿ ಖೂಳರು ಎಂಜಲು ಕಾಸಿಗಾಗಿ ಸಾಥ್ ನೀಡುತ್ತಿರುವುದರಿಂದ ಈ ಭಾಗದ ಜನರು ದಿನನಿತ್ಯ ಆತಂಕದಲ್ಲೇ ಬದುಕುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ! ದಿನೇ ದಿನೇ ರೌಡಿಗಳ ಅಡ್ಡೆ ಆಗುತ್ತಿರುವ ಆನೇಕಲ್ ತಾಲೂಕು ತಮಿಳುನಾಡು ಗಡಿಯಿಂದ ಕೇವಲ 5 ಕಿ.ಮೀ. ದೂರದಲ್ಲಿದೆ. ಬೆಂಗಳೂರಿನಿಂದ 55 ಕಿ.ಮೀ. ದೂರದಲ್ಲಿರುವ ಆನೇಕಲ್ ಒಂದು ಕಾಲದಲ್ಲಿ ರೇಷ್ಮೆ ವಸ್ತ್ರ ತಯಾರಿಕೆ ಹೆಸರುವಾಸಿಯಾಗಿತ್ತು. 530 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದ ಆನೇಕಲ್ ತಾಲ್ಲೂಕನ್ನು ಕರ್ನಾಟಕದ ರಾಗಿಯ ಕಣಜವೆಂದು ಕರೆಯಲಾಗುತ್ತಿತ್ತು!

ಒಂದು ಕಾಲಕ್ಕೆ ಗಡಿನಾಡ ಕನ್ನಡಿಗರೆ ಬಹುಸಂಖ್ಯಾತರಾಗಿದ್ದ ಆನೇಕಲ್‌ನಲ್ಲಿ ಅನೇಕ ಐತಿಹಾಸಿಕ ಹಾಗೂ ನೈಸರ್ಗಿಕ ತಾಣಗಳೂ ಇವೆ. ಆದರೀಗ ಬೆಂಗಳೂರು ಜಿಲ್ಲೆಯ ಈಶಾನ್ಯದಲ್ಲಿರುವ ಈ ಪಟ್ಟಣದಲ್ಲಿ ಈಗ ಗಾಂಜಾ ಮಾರಾಟ, ಕೊಲೆ ಸುಲಿಗೆ, ಕಿಡ್ನಾಪ್ ಸುಪಾರಿ ಕಿಲ್ಲರ್‌ಗಳ ಹಾವಳಿ ಮಿತಿ ಮೀರಿ ಬೆಳೆದು ನಿಂತಿದೆ. ಸುಮಾರು 700ಕ್ಕೂ ಹೆಚ್ಚು ರೌಡಿಗಳು ಇದೇ ತಾಲೂಕಿನಲ್ಲಿದ್ದಾರೆಂದರೇ ಈ ತಾಲೂಕಿನ ಕ್ರೈಂ ರೇಟ್ ಇನ್ನೆಷ್ಟು ಉತ್ತುಂಗದಲ್ಲಿ ಈಗ ಇರಬಹುದೆಂದು ನೀವೇ ಊಹಿಸಿಕೊಳ್ಳಿ!

ಸದಾ ಜನಜಾಗೃತಿಯ ತೇರನ್ನು ಎಳೆಯಲು ಸಜ್ಜಾಗಿದ್ದ ಸಾಮಾಜಿಕ ಹೋರಾಟಗಾರರ ತವರು ನೆಲದಂತಿದ್ದ ಆನೇಕಲ್‌ನಲ್ಲಿ ಹಲವಾರು ದಲಿತ ಹೋರಾಟಗಾರು ವಿಭಿನ್ನವಾದ ಚಳುವಳಿಗಳನ್ನು ರೂಪಿಸಿ ರಾಜ್ಯಾದ್ಯಂತ ಮಾದರಿಯಾಗಿ ನಿಂತಿದ್ದರು. ಯುವಕರಿಗೆ ನೈತಿಕತೆಯ ಜೀವನದ ಪಾಠಗಳನ್ನು ಹೇಳಿಕೊಟ್ಟಿದ್ದ ಅದೇ ಹೋರಾಟಗಾರರೀಗ ಅವರದೇ ಊರುಗಳ ಯುವಕರು ಕ್ರಿಮಿನಲ್ ಮೊಕದ್ದಮೆಗಳನ್ನು ಮೈಮೇಲೆ ಎಳೆದುಕೊಂಡು ಪೊಲೀಸ್ ಠಾಣೆಗಳ ಎದುರು ಅಲೆಯುತ್ತಿರುವುದನ್ನು, ಕಾಲಿಗೆ ಗುಂಡು ಹೊಡೆಸಿಕೊಂಡು ಅಂಗವಿಕಲರಾಗುತ್ತಿರುವುದನ್ನು, ನೋಡಿ ಕೈಚೆಲ್ಲಿ ಕುಳಿತಿದ್ದಾರೆ.

ಹರಿದು ಬರುತ್ತಿರುವ ಅಕ್ರಮ ಹಣದ ಆಸೆಗೆ ರೌಡಿಸಂ ಅನ್ನೇ ಆದರ್ಶವೆಂದು ಸ್ವೀಕರಿಸಿರುವ ಆನೇಕಲ್ ಸ್ಥಳೀಯ ಹುಡುಗರ ದಂಡನ್ನು ಹಾದಿ ತಪ್ಪಿಸುವ

☞ 5

4
ಪ್ರಯತ್ನವನ್ನು ಅವರದೇ ಸಮುದಾಯದ ರಾಜಕಾರಣಿಗಳು ರಿಯಲ್ ಎಸ್ಟೇಟ್ ವ್ಯವಹಾರಸ್ಥರು ಮಾಡುತ್ತಿದ್ದಾರೆ. ಪುಡಾರಿಗಳ ಲಿಟಿಗೇಶನ್ ಜಮೀನುಗಳಿಗೆ ಕಾಂಪೌಂಡ್ ನಿರ್ಮಿಸಿ ಚಿಲ್ಲರೆ ಕಾಸು ಬಾಚಿಕೊಳ್ಳುವುದೇ ನಮ್ಮ ಕಾಯಕ ಎಂದು ತಿಳಿದಿರುವ ಕೆಲವು ಮೂರ್ಖ ಯುವಕರು ತಮ್ಮ ಅಮೂಲ್ಯವಾದ ಸಮಯವನ್ನು ರೌಡಿಸಂಗೆ ಮೀಸಲಿಟ್ಟು ಸಂಪೂರ್ಣವಾಗಿ ಇಡೀ ಜೀವನವನ್ನೇ ಹಾಳು ಮಾಡಿ ಕೊಳ್ಳುತ್ತಿದ್ದಾರೆ. ಆನೇಕಲ್ ಯುವಕರನ್ನು ರೌಡಿ ಚಟುವಟಿಕೆಯಲ್ಲಿ ತೊಡಗುವಂತೆ ಹಿಂದೆ ಮುಂದೆ ನಿಂತು ಮಾರ್ಗದರ್ಶನ ಮಾಡುತ್ತಿರುವವರ ಪಟ್ಟಿಯಲ್ಲಿ ಕೆಲವು ಭ್ರಷ್ಟ ಖಾಕಿ ಪೊಲೀಸ್ ಅಧಿಕಾರಿಗಳು, ಕ್ರೈಂ ಪೊಲೀಸ್ ಸಿಬ್ಬಂದಿಗಳು ಇದ್ದಾರೆಂಬುದು ನಾಚಿಕೆಗೇಡಿನ ಸಂಗತಿ. ಆನೇಕಲ್, ಸರ್ಜಾಪುರ, ಅತ್ತಿಬೆಲೆ , ಹೆಬ್ಬಗೋಡಿ, ಸೂರ್ಯ ಸಿಟಿ, ಎಲೆಕ್ಟ್ರಾನಿಕ್ ಸಿಟಿ, ಜಿಗಣಿ, ಬನ್ನೇರುಘಟ್ಟ ವ್ಯಾಪ್ತಿಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿಯೂ ಇತ್ತೀಚೆಗೆ ಚೈನ್ ಸ್ನಾಚಿಂಗ್, ಬೈಕ್ ಕಳ್ಳತನ, ಮೊಬೈಲ್ ರಾಬರಿ, ಕಿಡ್ನಾಪ್, ಕೊಲೆ, ಹಪ್ತಾ ವಸೂಲಿ, ಗಾಂಜಾ ಪೆಡ್ಲಿಂಗ್ ಪ್ರಕರಣಗಳು ಪ್ರಕರಣಗಳು ಮರುಕಳಿಸುತ್ತಿವೆ. ದೇಶದ ವಿವಿಧ ರಾಜ್ಯಗಳಿಂದ ಬಂದು ನೆಲೆಸಿರುವ ಕ್ರಿಮಿನಲ್‌ಗಳು ಸಮಾಜಘಾತುಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಸಾರ್ವಜನಿಕರ ನೆಮ್ಮದಿ ಶಾಂತಿ ಹಾಳುಗೆಡವುತ್ತಿದ್ದಾರೆ.

ಆನೇಕಲ್ ವ್ಯಾಪ್ತಿಯ ಮಸಾಜ್ ಪಾರ್ಲರ್ ಸ್ಪಾಗಳ ಒಟ್ಟು ಮಾಸಿಕ ಕಲೆಕ್ಷನ್ ಎಷ್ಟು ಲಕ್ಷಗಳು ಎಂದು ಸಾರ್ವಜನಿಕವಾಗಿ ಚರ್ಚೆ ಆಗಿತ್ತು! ಕಳೆದ ವರ್ಷ ರೇವ್ ಪಾರ್ಟಿ ಕೋಟ್ಯಾಂತರ ರೂಪಾಯಿ ಅಂತರ್‌ರಾಜ್ಯ ಡ್ರಗ್ಸ್ ಪಾರ್ಟಿಯ ಹೆಸರಲ್ಲಿ ನಡೆಯುತ್ತಿದ್ದ ಹೈಟೆಕ್ ವೇಶ್ಯಾವಾಟಿಕೆ ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸದ್ದು ಮಾಡಿತ್ತು!

ಆನೇಕಲ್ ಅಲೆಯನ್ಸ್ ಕಾಲೇಜಿನ ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಇಡೀ ಗ್ರಾಮಾಂತರ ವಿಭಾಗಕ್ಕೆ, ಗಡಿನಾಡಿನಿಂದ ಕರ್ನಾಟಕದ ರಾಜಧಾನಿ ಬೆಂಗಳೂರಿನ ಒಳಕ್ಕೂ ಕಚ್ಚಾ ಗಾಂಜಾ ಪೆಡ್ಲಿಂಗ್ ಮಾಡುತ್ತಿರುವ ರೌಡಿ ಗ್ಯಾಂಗುಗಳನ್ನು ಆನೇಕಲ್ ಪೊಲೀಸರೇ ಸಾಕುತ್ತಿದ್ದಾರೆಂಬ ಸಾರ್ವಜನಿಕರ ಕಾಲ್ಪನಿಕ ಪ್ರಶ್ನೆಗೆ ಪೊಲೀಸ್ ಇಲಾಖೆ ಏನು ಹೇಳುತ್ತದೆ? ಆನೇಕಲ್ ಹೊರ ಹೊಲಯದ ತೋಟದ ಮನೆಗಳಲ್ಲಿ ಕಾಡುಗಳಲ್ಲಿ ಈಗಲೂ ನಿತ್ಯ ನಡೆಯುತ್ತಿರುವ ಅಂದರ್ ಬಾಹರ್ ಇಸ್ಪೀಟ್ ಅಡ್ಡೆಗಳ ಮೇಲೆ ರೈಡ್ ಮಾಡೋಕೆ ಯಾಕೆ ಆಗ್ತಿಲ್ಲ ಅಂತಿದ್ದಾರೆ ಜನ ? ಅಕ್ರಮ ಗ್ಯಾಸ್ ಸಿಲಿಂಡರ್ ಫಿಲ್ಲಿಂಗ್ ಮಾಫಿಯಾ, ಭೂಗಳ್ಳರು, ಮಗಳ್ಳರು ಪೊಲೀಸರ ಜೊತೆಗೆ ಸೇರಿಕೊಂಡು ಬಿಸಿನೆಸ್ ಮಾಡುತ್ತಿದ್ದಾರೆ ಅಂತಲೂ ಬೀದಿ ಬೀದಿಗಳಲ್ಲಿ ಗಾಳಿ ಸುದ್ದಿ ಹರಿದಾಡುತ್ತಿದೆ! ನಿಜಾ ಏನೂ ಅಂತ ಎಲ್ಲರಿಗೂ ಗೊತ್ತಿದೆ!! ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಬೇಕಾದ ಪೊಲೀಸರೇ ಕ್ರಿಮಿನಲ್‌ಗಳ ಜೊತೆ ಶಾಮೀಲಾದರೇ ಸಮಾಜದ ಗತಿ ಏನು?!

**ನವೆಂಬರ್‌ನಲ್ಲೇ ಬರೋಬ್ಬರಿ 8 ಕೊಲೆ!**

ಆನೇಕಲ್ ತಾಲೂಕಿನ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕಳೆದ ನವೆಂಬರ್ ಒಂದೇ ತಿಂಗಳಲ್ಲಿ ಬರೋಬ್ಬರಿ 8 ಕೊಲೆಗಳು ನಡೆದಿರುವುದು ಪೊಲೀಸರಿಗೂ ದೊಡ್ಡ ತಲೆನೋವಾಗಿರೋದು ಸುಳ್ಳಲ್ಲ! ಆನೇಕಲ್ ತಾಲೂಕಿನ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ (3), ಹೆಬ್ಬಗೋಡಿ ಠಾಣೆ ವ್ಯಾಪ್ತಿಯಲ್ಲಿ (2), ಸರ್ಜಾಪುರ ಠಾಣೆ ವ್ಯಾಪ್ತಿಯಲ್ಲಿ (2), ಬನ್ನೇರುಘಟ್ಟ ಠಾಣೆ ವ್ಯಾಪ್ತಿಯಲ್ಲಿ (1) ಒಟ್ಟು 8 ಕೊಲೆಗಳು ನಡೆದಿವೆ. ಹಣ, ಪ್ರೇಮ, ಕುಟುಂಬ ಕಲಹ, ಸಣ್ಣ ವಿವಾದ ಎಲ್ಲಕ್ಕೂ ಜೀವ ಬಲಿಯಾಗಿದೆ.




ಅತ್ತಿಬೆಲೆ ಠಾಣಾ ವ್ಯಾಪ್ತಿಯಲ್ಲಿ ಐಟಿ ಉದ್ಯೋಗಿ ಶ್ರೀನಾಥ್ ರನ್ನು ದೃಶ್ಯ ಸಿನಿಮಾ ಸ್ಟೈಲ್‌ನಲ್ಲಿ ಆತನ ಸೋದರ ಸಂಬಂಧಿ ಪ್ರಭಾಕರ್ ಮತ್ತು ಸಹಚರ ಜಗದೀಶ್ ಕೊಂದು ಮನೆಯೊಳಗೆಯೇ ಹೂತಿದ್ದರು! ಬಾರ್ ಗೇಟ್ ಬಳಿ ತಮಿಳುನಾಡು ಮೂಲದ ಬಲರಾಮುನ್ ಎಂಬಾತನನ್ನು ಕ್ಷುಲ್ಲಕ ಕಾರಣಕ್ಕೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಬಸವರಾಜ್ ಎಂಬ ಗಂಡಸು ಪಾದರಸ ಇಂಜೆಕ್ಷನ್ ನೀಡಿ ತನ್ನ ಪತ್ನಿ ವಿದ್ಯಾಳನ್ನು ಕೊಂದಿದ್ದ. ಹೆಬ್ಬಗೋಡಿ ಠಾಣಾ ವ್ಯಾಪ್ತಿಯಲ್ಲಿ ಒಬ್ಬನಿಂದಲೇ ಡಬ್ಬಲ್ ಮರ್ಡರ್ ಆಗಿತ್ತು. ರವಿಪ್ರಸಾದ್ ರೆಡ್ಡಿ ಎಂಬಾತ ಹಣ ಲಪಟಾಯಿಸಲಿಕ್ಕಾಗಿ ತನ್ನ ಸ್ನೇಹಿತ ಮಾದೇಶ್ ಮತ್ತು ಅಂಗಡಿ ಓನರ್ ಬಾಲಪ್ಪ ರೆಡ್ಡಿ ಇಬ್ಬರನ್ನು ಚಾಕುವಿನಿಂದ ಕೊರಳು ಸಿಗಿದು ಕೊಂದಿದ್ದ! (ಹೆಬ್ಬಗೋಡಿ ಇನ್ಸ್‌ಪೆಕ್ಟರ್ ಸೋಮಶೇಖರ್ ಕೊಲೆಗಡುಕ ರವಿಪ್ರಸಾದ್ ರೆಡ್ಡಿ ಕಾಲುಗಳಿಗೆ ಗುಂಡು ಹೊಡೆದು ಮಂಡಿಗಳನ್ನು ಪುಡಿ ಪುಡಿ ಮಾಡಿ ಜೈಲು ವಾರ್ಡ್‌ಗೆ ರವಾನಿಸಿದ್ರು... ಇದೊಂದೇ ಸಮಾಧಾನ)

ಸರ್ಜಾಪುರ ಠಾಣಾ ವ್ಯಾಪ್ತಿಯಲ್ಲಿ 2 ಕೊಲೆಗಳಾಗಿವೆ. ದೀಪ ಎಂಬ ವಂಚಕಿ ಕಜ್ಜಾಯ ಕೊಡ್ತೀನಿ ಎಂದು ವೃದ್ಧೆ ಭದ್ರಮ್ಮನನ್ನು ಮನೆಗೆ ಕರೆದೊಯ್ದು ಚಿನ್ನಾಭರಣಕ್ಕಾಗಿ ಕೊಂದು ಹಾಕಿದ್ದಳು! ಅಕ್ರಮ ಸಂಬಂಧದಲ್ಲಿದ್ದ ಮಹಿಳೆಯ ಪತಿಯೇ ಅವಳ ಪ್ರಿಯಕರ ರಾಜೇಶ್‌ನ್ನು ಕೊಲೆ ಮಾಡಿದ್ದ! ಇನ್ನು ಬನ್ನೇರುಘಟ್ಟ ಠಾಣಾ ವ್ಯಾಪ್ತಿಯಲ್ಲಿ ತಮ್ಮ ಧನರಾಜ್ ನೀಡುತ್ತಿದ್ದ ಕಿರುಕುಳ ಸಹಿಸದೆ ಅಣ್ಣ ಶಿವರಾಜ್, ತನ್ನ ಸ್ನೇಹಿತರ ಜೊತೆಗೂಡಿ ಚಾಕುವಿನಿಂದ ಇರಿದು ಕೊಂದಿದ್ದ! ಯಾಕಿಷ್ಟು ಕೊಲೆಗಳಾಗಿವೆ? ಏನಕ್ಕೆ ಹೀಗೆ ಕೊಲೆಗಳಾಗುತ್ತಿವೆ? ಎಂಬ ವಿಚಾರದ ಹಿಂದೆ ಹೋದರೇ ಹಲವಾರು ವಿಚಿತ್ರವಾದ ಕಾರಣಗಳು ತೆರೆದುಕೊಳ್ಳುತ್ತವೆ!

ಆನೇಕಲ್ ತಾಲೂಕು ಕಳೆದ 56 ವರ್ಷಗಳಲ್ಲಿ ತೀವ್ರ ನಗರೀಕರಣಕ್ಕೊಳಗಾಗಿದೆ. ಐಟಿ ಕಾರಿಡಾರ್, ಕೈಗಾರಿಕಾ ಪ್ರದೇಶಗಳು, ಅಪಾರ್ಟ್‌ಮೆಂಟ್‌ಗಳು ಸರಣಿ ಸರಣಿ ಬೆಳೆದಿವೆ. ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳ ಮಿಶ್ರಣದಿಂದ ಇಲ್ಲಿ ಸಾಮಾಜಿಕ ಒತ್ತಡ ಹೆಚ್ಚಾಗಿದೆ. ಅನಧಿಕೃತ ಬಾರ್‌ಗಳು, ಮದ್ಯದ ಅಂಗಡಿಗಳ ಸಂಖ್ಯೆ ಹೆಚ್ಚಾಗಿದೆ. ಭೂ ವಿವಾದ, ಹಣದ ವ್ಯವಹಾರ, ಪ್ರೇಮ ಪ್ರಕರಣಗಳು, ಕುಟುಂಬ ಕಲಹ ಇವೆಲ್ಲವೂ ಕೊಲೆಗಳಿಗೆ ಕಾರಣವಾಗುತ್ತಿವೆ....

**ಆಕಾಶಕ್ಕೇರಿದೆ ರಿಯಲ್ ಎಸ್ಟೇಟು! ಕ್ರೈಂ ರೇಟು!!**

ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಜಿಗಣಿ ಕೈಗಾರಿಕಾ ಪ್ರದೇಶ ಮತ್ತು ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಪ್ರದೇಶದ ಕೈಗಾರಿಕಾ ಪ್ರದೇಶಗಳು, ಈಗ ಅನೌನ್ಸ್ ಆಗಿರುವ ಸರ್ಜಾಪುರ ಕೈಗಾರಿಕಾ ಪ್ರದೇಶದ ಜೊತೆಗೆ ಆನೇಕಲ್ ತಾಲ್ಲೂಕಿಗೆ ಹೊಂದಿಕೊಂಡಿರುವ ಎಲೆಕ್ಟ್ರಾನಿಕ್ ಸಿಟಿಯಿಂದ ಸ್ವಲ್ಪವೇ ದೂರದಲ್ಲಿರುವ ಹೊಸೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಪ್ರಸ್ತಾಪ ಘೋಷಣೆಯಾಗಿದೆ! ಒಂದೊಮ್ಮೆ ಹೊಸೂರು ವಿಮಾನ ನಿಲ್ದಾಣ ಕಾರ್ಯರೂಪಕ್ಕೆ ಬಂದರೆ ಆಗ ದಕ್ಷಿಣ ಮತ್ತು ಆಗ್ನೇಯ ಬೆಂಗಳೂರು ವಲಯದಲ್ಲಿ ರಿಯಾಲ್ಟಿಯ ಹೊಸ ಶಕೆ ಆರಂಭ ವಾಗಲಿದೆ!


ಡಿವೈಎಸ್ಪಿ ಅವರಿಂದ ರೌಡಿಗಳಿಗೆ ಕ್ಲಾಸ್!

ಪ್ರಸ್ತಾವಿತ ಹೊಸೂರು ವಿಮಾನ ನಿಲ್ದಾಣ, ಆ ಭಾಗದಲ್ಲಿ ರಿಯಲ್ ಎಸ್ಟೇಟ್ ತೀವ್ರಗತಿಯ ಪ್ರಗತಿ ಕಾಣಲು ಉತ್ತುಂಗಕ್ಕೆ ಹೋಗಲು ಕಾರಣವಾಗಲಿದೆ. ತಮಿಳುನಾಡು ರಾಜ್ಯ ಸರಕಾರದ ಈ ನಿರ್ಧಾರವು ಬೆಂಗಳೂರು ನಿವಾಸಿಗರಲ್ಲಿ ಖುಷಿಯ ಮನಸ್ಥಿತಿ ಮೂಡಿಸಿದೆ. ಬೆಂಗಳೂರು ನಗರದಿಂದ ಕೇವಲ 40 ಕಿ.ಮೀ. ದೂರದಲ್ಲಿರುವ ಹೊಸೂರು ವಾಹನ ದಟ್ಟಣೆ ರಹಿತ ಅತ್ಯುತ್ತಮ ರಸ್ತೆ ಸಂಪರ್ಕ ಹೊಂದಿರುವುದು ಇದರ ಹಿಂದಿನ ಮುಖ್ಯ ಕಾರಣವಾಗಿದೆ.

ದೇಶದೊಳಗೆ ಕೆಲಸದ ನಿಮಿತ್ತ ಆಗಾಗ ವಿಮಾನ ಯಾನ ಹೆಚ್ಚು ಮಾಡಬೇಕಾದ ಐಟಿ ಉದ್ಯೋಗಿಗಳಲ್ಲಿ ನಿರಾಳತೆ ಮೂಡಿಸಲಿದೆ. ಕೇಂದ್ರದ ಉಡಾನ್ ಯೋಜನೆಯಡಿ ಇಲ್ಲಿಂದ ವಾಣಿಜ್ಯ ವಿಮಾನಯಾನ ಆರಂಭವಾದರೆ ದಕ್ಷಿಣ ಮತ್ತು ಪೂರ್ವ ಬೆಂಗಳೂರು ಅದರಲ್ಲೂ ಮುಖ್ಯವಾಗಿ ಎಲೆಕ್ಟ್ರಾನಿಕ್ ಸಿಟಿ ಮತ್ತು ಸುತ್ತಲಿನ ಪ್ರದೇಶಗಳ ಉದ್ಯೋಗಿಗಳು ತುಂಬಾ ಲಾಭ ಪಡೆಯಲಿದ್ದಾರೆ. ಕೋರಮಂಗಲ, ಹೆಚ್‌ಎಸ್‌ಆರ್‌ಬಡಾವಣೆಗಳ ವಾಣಿಜ್ಯ ಚಟುವಟಿಕೆಗಳು ಗರಿಗೆದರಲಿವೆ.

ಎಲೆಕ್ಟ್ರಾನಿಕ್ ಸಿಟಿಯು ದೇಶದ ಅತಿ ದೊಡ್ಡ ತಂತ್ರಜ್ಞಾನ ಪಾರ್ಕ್ ಆಗಿದೆ. ಈ ಕಿರು ಮಾರುಕಟ್ಟೆಯು ದಿನೇ ದಿನೇ ಬೆಳೆಯುತ್ತಿದ್ದು, ಸಾಕಷ್ಟು ಭೂಮಿ ಲಭ್ಯತೆ ಕೂಡ ಇಲ್ಲಿದೆ. ಈಗ ವಿಮಾನ ನಿಲ್ದಾಣವಾದರೆ ಆಗ ವಸತಿ ಮತ್ತು ವಾಣಿಜ್ಯ ರಿಯಾಲ್ಟಿ ಹೊಸೂರು ಸುತ್ತಮುತ್ತಲಿನ ಭಾಗದಲ್ಲಿ ಇನ್ನಷ್ಟು ವೇಗದ ಅಭಿವೃದ್ಧಿ ಕಾಣಲಿದೆ. ಮುಖ್ಯವಾಗಿ ಅಫರ್ಡಬಲ್ ಮತ್ತು ಮಧ್ಯಮ ಆದಾಯ ವರ್ಗದ ವಸತಿ ಪ್ರಾಜೆಕ್ಟ್‌ಗಳಿಗೆ ಇದು ಹೇಳಿ ಮಾಡಿಸಿದ ಜಾಗವಾಗಿದೆ. ವಿಲ್ಲಾ ಮತ್ತು ನಿವೇಶನಗಳ ಪ್ರಾಜೆಕ್ಟ್‌ಗಳ ಅಭಿವೃದ್ಧಿಗೆ ಇದು ಈಗಾಗಲೇ ಸಾಕ್ಷಿಯಾಗಿದೆ.

ಆನೇಕಲ್ ತಾಲ್ಲೂಕು ಸಧ್ಯಕ್ಕೆ ರಿಯಲ್ ಎಸ್ಟೇಟ್ ಉದ್ಯಮಿಗಳ ಪಾಲಿನ ಅಕ್ಷಯ ಪಾತ್ರೆಯಂತಾಗಿದೆ ದಿನಬೆಳಗಾದರೆ ಭೂಮಿ ಬೆಲೆ ಕೋಟಿ ಕೋಟಿ ರೂಪಾಯಿ ಡಬಲ್ ತ್ರಿಬಲ್ ರೇಟುಗಳಲ್ಲಿ ಏರಿ ಆಕಾಶಕ್ಕೆ ಹಾರುತಿದೆ. ಹಣಕಾಸಿನ ವ್ಯವಹಾರ ವಹಿವಾಟು ನಡೆಯುವ ಜಾಗದಲ್ಲಿ ಸಹಜವಾಗಿಯೇ ಕ್ರಿಮಿನಲ್ ಚಟುವಟಿಕೆಗಳು ಸದ್ದಿಲ್ಲದೆ ಮೊಳಕೆಯೊಡೆದು ಹೆಮ್ಮರವಾಗುತ್ತವೆ.

**ಈ ಭಾಗಕ್ಕೆ ಖಡಕ್ ಪೊಲೀಸ್ ಆಫೀಸರ್ಸ್ ಬೇಕು...**

ಯಾಕೋ ಬರ್ತಾ ಬರ್ತಾ ಕರ್ನಾಟಕದಲ್ಲಿ ರೌಡಿಸಂ ಜಾಸ್ತಿ ಆಗ್ತಾನೇ ಇದೆ. ಈ ಬಗ್ಗೆ ಸರ್ಕಾರ ತಲೆಕೆಡಿಸಿ ಕೊಳ್ಳುತ್ತಿಲ್ಲ, ಪೊಲೀಸ್ ಇಲಾಖೆ ಏಕೋ ಏನೋ ಕಣ್ಣು ಮುಚ್ಚಿಕೊಂಡು ಕುಂತಿದೆ! ಎನ್ಕೌಂಟರ್ ಆರ್ಡರ್ ಯಾಕೆ ತಗೊಂಡ್ ಬರ್ತಾ ಇಲ್ಲ? ಇದರಿಂದಲೇ ಪುಡಿ ರೌಡಿಗಳಿಗೂ ಕಾನೂನು ಭಯನೇ ಇಲ್ಲ!

ಪುಡಿ ರೌಡಿ ಪ್ರಜ್ವಲ್ ಅಲಿಯಾಸ್ ಕೊತ್ವಾಲ್ ಎಂಬಾತ ಕುಡಿದ ಮತ್ತಿನಲ್ಲಿ ತನ್ನ ಸ್ನೇಹಿತನ ಜೊತೆಗೆ ಪಾನಿಪುರಿ ತಿನ್ನೋಕೆ ಅಂತ ಬಂದಿದ್ದವನು ಪಾನಿಪುರಿ ತಿಂದು ದುಡ್ಡು ಕೊಡದೆ ಬಡಪಾಯಿ ವ್ಯಾಪಾರಿಯ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಅಂಗಡಿಯನ್ನ ಧ್ವಂಸ ಮಾಡಿ ಹೋಗಿದ್ದು,ಅದಾದ ಬಳಿಕ ಮತ್ತೆ ಪಾನಿಪುರಿ ವ್ಯಾಪಾರಿಯ ಮನೆಯ ಬಳಿ ಡ್ರ್ಯಾಗರ್ ಹಿಡಿದುಕೊಂಡು ಬಂದು ಪೊಲೀಸ್‌ಗೆ ಕಂಪ್ಲೇಂಟ್ ಕೊಟ್ರೆ ಕೊಲೆ ಮಾಡೋದಾಗಿ ಧಮ್ಕಿ ಹಾಕಿ ಧುರುಳರು ಅಲ್ಲಿಂದ ಎಸ್ಕೇಪ್ ಆಗಿದ್ದಾರೆ!

ದೂರು ನೀಡುವಂತೆ ತಿಳಿಸಿದವರ ಮನೆಗೆ ಹೋಗಿ ಡ್ರ್ಯಾಗನ್ ಹಿಡಿದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದು, ಪುಂಡರ ಅಟ್ಟಹಾಸ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ! ಇನ್ನು, ಈ ಘಟನೆಯಿಂದ ಆತಂಕಗೊಂಡ ಸ್ಥಳೀಯರು ಹೆಬ್ಬಗೋಡಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ.ಇಂಥ ಪ್ರಕರಣಗಳನ್ನೆಲ್ಲ ಪೊಲೀಸ್ ಇನ್ಸ್ ಪೆಕ್ಟರ್ರೇ ಅಟೆಂಡ್ ಮಾಡಲು ಸಾಧ್ಯವಿಲ್ಲ, ಕ್ರೈಂ ಕಾನ್ಸ್‌ಟೇಬಲ್‌ಗಳು ನೋಡುತ್ತಾರೆ. ಕಾನೂನು ಅನ್ನೋದು ಕರೆಕ್ಟ್ ಆಗಿ ಪಾಲನೆ ಆಗಿದಿದ್ರೆ ಇವೆಲ್ಲ ಹೇಗೆ ಸಾಧ್ಯ? ಲಂಚ ಎಲ್ಲಿ ಜಾಸ್ತಿ ಸಿಗುತ್ತೆ ಅನ್ನುವ ಹುಡುಕಾಟದಲ್ಲಿ ಕೆಲವು ಕಡು ಭ್ರಷ್ಟ ಪೊಲೀಸ್ ನವರ ಕಾಣಿಕೆಯೇ ಈ ಪುಡಿ ರೌಡಿಗಳ ದೊಂಬರಾಟ ಅಟ್ಟಹಾಸ!! ಇನ್ನೊಂದು ವಿಚಾರ.....

ತಮಿಳುನಾಡಿಗೆ ಅಕ್ರಮವಾಗಿ ಕಳ್ಳತನದಲ್ಲಿ ಮಾರಾಟಕ್ಕೆ ಹೋಗುತ್ತಿದ್ದ ಗುಟ್ಕಾ ಪಾನ್ ಮಸಾಲಗಳ ದೊಡ್ಡ ದೊಡ್ಡ ಲಾರಿಗಳನ್ನೇ ಹಿಂದೆ ಬಿದ್ದು ಕಿಡ್ನಾಪ್ ಮಾಡಿಕೊಂಡು ಕೃಷ್ಣಗಿರಿ ಕಾಡಿನೊಳಕ್ಕೆ ಕರೆದುಕೊಂಡು ಹೋಗಿ ಮಾರಕಾಸ್ತ್ರಗಳಿಂದ ಹೊಡೆದು ಬೆದರಿಕೆ ಹಾಕಿ

15

## ಗಾಂಜಾ ಗ್ಯಾಂಗ್ ನಲ್ಲಿ ಬಿರುಕು?!

ಆನೇಕಲ್‌ನ ಹಾಲಿ ಡಾನ್ ಮನೋಜ್ ಅ|| ಗಾಂಜಾ ಮನು ವಿಗಾಗಿ ರೌಡಿ ಬೆಸ್ತಮಾನಹಳ್ಳಿ ಸುನಿಲನ ವಿಕೆಟ್ ಹೊಡೆದು ಕೊಟ್ಟಿದ್ದು ಇದೇ 'ಸಲಗ' ಜೆ.ಕೆ. ಕಾರ್ತಿಕ್ ಗ್ಯಾಂಗ್! ಆ ಕೇಸಿನಲ್ಲಿ ಎ1 ಆಗಿ ಹೆಸರು ಮಾಡಿಕೊಂಡು ಆನೇಕಲ್ ಅಂಡರ್ ವರ್ಲ್ಡ್ ಆಳಲು ಕುಳಿತವನು ಅವನ ಗುರು ಮನೋಜ್ ಅ|| ಗಾಂಜಾ ಮನು ಎಂಬ ಪೊಲೀಸಪ್ಪನ ಮಗ!!


ಈಗ ಸೆಟ್ಲ್‌ಮೆಂಟು, ಕಾಂಪೌಂಡ್, ಹಪ್ತಾ ವಸೂಲಿ ಮೂಲಕ ದುಡ್ಡು ಕಾಸು ಮಾಡಿಕೊಂಡು ಹಳೇ ಗ್ಯಾಂಗ್ ಅನ್ನು ದೂರವಿಟ್ಟಿರೋ ಗಾಂಜಾ ಮನು, ಹೊಸ ಪಡ್ಡೆಗಳಾದ ಗಂಗಾ, ಸುನಿಲ್ ಹಾವೇರಿ, ತುಕ್ಡೇ, ಕಿಶೋರ್ ಮುಂತಾದವರ ಟೀಮ್ ಬೆಳೆಸಿಕೊಂಡು ಬಿಜೆಪಿ ಕಾಂಗ್ರೆಸ್ ಎರಡೂ ಪಕ್ಷಗಳ ಪುಡಾರಿಗಳ ಬೆನ್ನಹಿಂದೆ ನಿಂತುಕೊಂಡು ಇಡೀ ಆನೇಕಲ್‌ಅನ್ನೇ ಕ್ರೈಂ ಕ್ಯಾಪಿಟಲ್ ಮಾಡಲು ಹೊರಟಿದ್ದಾನೆ!

ಇನ್ನೊಂದು ಪ್ರಮುಖ ಸಂಗತಿ ಏನೆಂದರೆ, ಆನೇಕಲ್ ಹಾಲಿ ಡಾನ್ ಗಾಂಜಾ ಮನು ಗ್ಯಾಂಗ್'ಲ್ಲಿ ಬಿರುಕು ಬಿಟ್ಟಿರೋ ಸುದ್ದಿ ಇದೆ! ಪುರಸಭಾ ಸದಸ್ಯ ಸ್ಕ್ರಾಪ್ ರವಿ ಕೊಲೆಯ ತನಕ ಒಟ್ಟಿಗೆ ಇದ್ದ ಗಾಂಜಾ ಮನು ಮತ್ತು ಇದೇ ಸಲಗ ಜೆ.ಕೆ. ಕಾರ್ತಿಕ್, ಅದೊಂದು ಕೊಲೆಯಿಂದ ದೂರವಾಗಿ ಒಬ್ಬರಿಗೊಬ್ಬರು ದುಷ್ಮನ್ ಗಳಾಗಿ ಕತ್ತಿ ಮಸೆಯುವಂತೆ ಮಾಡಿರುವುದೇ ಗಾಂಜಾ ಮನೋಜ್ ಬಲಗೈ ಬಂಟ ರೌಡಿ ಗಂಗಾ!! ಇದೀಗ ಒಂದು ಕಾಲದ ಸ್ನೇಹಿತ ಜೆಕೆಯನ್ನು ಕಿಡ್ನಾಪ್ ಮಾಡಿ ಆತನ ಮರ್ಮಾಂಗ ಕತ್ತರಿಸಿದ್ದಾನೆ ಎಂದರೆ, ಇದರ ಹಿಂದೆ ನಂಬರ್ 2 ಪಟ್ಟದ ಹಿತಾಸಕ್ತಿ ಇತ್ತಾ? ಅಥವಾ ಹೆಣ್ಣಿನ ವಿಚಾರದಲ್ಲಿ ಸಾಮಾನ್ ಕಟ್ ಮಾಡಲಾಗಿದೆಯಾ?? ಕಾಲವೇ ತಿಳಿಸಬೇಕಿದೆ...

## ಚಿತ್ರದುರ್ಗ : ಹೊಸದುರ್ಗ ತಾಲ್ಲೂಕಿನ ಅತಿಘಟ್ಟದಲ್ಲಿ ನಡೆದ ಅಮಾನವೀಯ ಕೃತ್ಯ!

# ‘ತನಗೆ ಯಾಕೆ ಮದುವೆ ಮಾಡುತ್ತಿಲ್ಲ’ ಎಂದು ಜಗಳ ಕಾಯ್ದು ಮಲಗಿದ್ದ ತಂದೆಯ ತಲೆಗೆ ಕಬ್ಬಿಣದ ರಾಡ್‌ನಿಂದ ಥಳಿಸಿ ಕೊಂದ ಕುಲಪುತ್ರ!

**ಅಂದ ಹಾಗೆ ಆತ 36 ವರ್ಷದ ತರುಣ. ಯಾಕೋ... ಏನೋ ಆತನಿಗೆ ಮದುವೆಯ ಯೋಗ ಕೂಡಿ ಬಂದಿರಲಿಲ್ಲ. ಅದಾಗಲೇ ಆತನ ವಾರಿಗೆ ಸ್ನೇಹಿತರೆಲ್ಲ ಮದುವೆಯಾಗಿ ಎಂಟತ್ತು ವರ್ಷ ಸಂಸಾರ ನಡೆಸಿ ಎರಡು-ಮೂರು ಮಕ್ಕಳ ತಂದೆಯಾಗಿದ್ದರು. ಇದರಿಂದ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದ ತರುಣ. ಪ್ರತಿನಿತ್ಯ ತನ್ನ ತಂದೆಯೊಡನೆ ‘ತನಗ್ಯಾಕೆ ಹೆಣ್ಣು ನೋಡಿ ಮದುವೆ ಮಾಡುತ್ತಿಲ್ಲ’ ಎಂದು ಜಗಳ ಮಾಡುತ್ತಿದ್ದನು. ಮದುವೆ ವಿಚಾರವಾಗಿ ಕುಟುಂಬಸ್ಥರೆಲ್ಲರೂ ಸೇರಿ ಸಮಾಧಾನ ಮಾಡಿದರೂ ಸುಮ್ಮನಾಗದೇ ತನ್ನ ತಂದೆಯ ಮೇಲೆ ಆಕ್ರೋಶಗೊಂಡಿದ್ದನು. ಇತ್ತೀಚಿಗೆ ಮದುವೆ ವಿಚಾರವಾಗಿ ಜಗಳ ಮಾಡುವುದನ್ನು ನಿಲ್ಲಿಸಿರಲಿಲ್ಲ. ಅಂದು ರಾತ್ರಿ ಮನೆಯಲ್ಲಿ ಮಲಗಿದ್ದ ತಂದೆಯ ತಲೆಗೆ ಕಬ್ಬಿಣದ ರಾಡ್‌ನಿಂದ ಬಲವಾಗಿ ಥಳಿಸಿ ಕೊಲೆಗೈದು ಪರಾರಿ ಆದನು. ಪ್ರಕರಣ ದಾಖಲಿಸಿಕೊಂಡ ಚತುರ ಮತ್ತು ಧಾಡಸಿ ಸಿಪಿಐ ರಮೇಶಗೌಡ ಕೆ.ಟಿ., ಪಿಎಸ್‌ಐ ಮಹೇಶ್‌ಕುಮಾರ್ ಮತ್ತು ಸಿಬ್ಬಂದಿಗಳು ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಕೇವಲ 6 ಗಂಟೆಯೊಳಗಾಗಿ ಹಂತಕ ಪುತ್ರನನ್ನು ಹೆಡೆಮುರಿ ಕಟ್ಟಿ ಜೈಲಿಗಟ್ಟಿರುವ ಘಟನೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಅತಿಘಟ್ಟ ಗ್ರಾಮದಿಂದ ವರದಿಯಾಗಿದೆ.**



ಮಗನಿಂದಲೇ ಕೊಲೆಯಾದ ಸಣ್ಣ ನಿಂಗಪ್ಪ



ಮದುವೆಗಾಗಿ ತಂದೆಯನ್ನು ಕೊಲೆಗೈದ ನಿಂಗರಾಜ

ಹರೆಯದಲ್ಲಿದ್ದಾಗ ಒಮ್ಮೆ ಮದುವೆಯ ಹುಚ್ಚು ತಲೆಗೇರಿದರೆ ಸಾಕು. ಹೆಣ್ಣಿಗಾಗಲಿ ಅಥವಾ ಗಂಡಿಗಾಗಲಿ ತಕ್ಷಣ ಮದುವೆ ಮಾಡಿದರೆ ಎಲ್ಲ ಸರಿ ಹೋಗುತ್ತದೆ. ಇಲ್ಲದಿದ್ದರೆ ಎಂತಹ ಅನಾಹುತವಾಗುತ್ತದೆ ಎಂದು ಯಾರು ಊಹಿಸಲು ಅಸಾಧ್ಯ. ಇದಕ್ಕೆ ಜೀವಂತ ನಿದರ್ಶನವೆಂಬಂತೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಅತಿಘಟ್ಟ ಗ್ರಾಮದ 36 ವರ್ಷದ ತರುಣ ನಿಂಗರಾಜ ಎಂಬಾತ ಅವಿವಾಹನಾಗಿದ್ದು, ಆತನಿಗೆ ಮದುವೆ ಹುಚ್ಚು ತಲೆಗೇರಿತ್ತು. ಇದಕ್ಕಾಗಿ ತನ್ನ ತಂದೆ ಸಣ್ಣ ನಿಂಗಪ್ಪನ ಜತೆ ಜಗಳ ಕಾಯ್ದು ಅದೊಂದು ದಿನ ರಾತ್ರಿ ಮಲಗಿದ್ದಾಗ ಕಬ್ಬಿಣದ ರಾಡ್‌ನಿಂದ ತಲೆಗೆ ಥಳಿಸಿ ಬರ್ಬರವಾಗಿ ಕೊಂದು ಹಾಕಿ ಜೈಲು ಸೇರಿ ಮುದ್ದೆ ಮುರಿಯುತ್ತಿದ್ದಾನೆ. ಹೇಗಿದೆ ನೋಡಿ ಮದುವೆಯ ಹುಚ್ಚಿನ ಅನಾಹುತ.

**ನತದೃಷ್ಟ ಸಣ್ಣ ನಿಂಗಪ್ಪ...**

**ಚಿತ್ರದುರ್ಗ**

✍ ಮನ್ನಾಪೂರ

ಮುಪ್ಪಿನ ಕಾಲದಲ್ಲಿ ತಮ್ಮನ್ನು ಜೋಪಾನ ಮಾಡಲು ಮಕ್ಕಳು ಬೇಕೆಂದು ದೇವರಿಗೆ ಹರಕೆ ಹೊತ್ತು ಮಕ್ಕಳನ್ನು ಪಡೆದು ಅವರನ್ನು ಲಾಲನೆ... ಪಾಲನೆ ಮಾಡಿ ಬೆಳೆಸಿದ



ಹಂತಕ ಆರೋಪಿ ನಿಂಗರಾಜನನ್ನು ವಶಕ್ಕೆ ತೆಗೆದುಕೊಂಡಿರುವ ಪೊಲೀಸರು

ಅತಿಘಟ್ಟ ಗ್ರಾಮದ ನಿವಾಸಿ ಸಣ್ಣ ನಿಂಗಪ್ಪ ಅಂದುಕೊಂಡಂತೆ ತೀರಾ ನದೃಷ್ಟ. ಇಡೀ ನಾಗರೀಕ ಸಮಾಜವೇ ತಲೆ ತಗ್ಗಿಸುವಂತೆ ಹೆತ್ತ ಮಗನಿಂದಲೇ ಸಣ್ಣ ನಿಂಗಪ್ಪ ಬರ್ಬರವಾಗಿ ಕೊಲೆಯಾಗಿ ಹೋಗಿದ್ದಾನೆ. ಇದಕ್ಕೆ ಕಾರಣವೇನೆಂದು ಹುಡುಕಿದಾಗ ‘ತನಗೆ 36 ವರ್ಷವಾದರೂ ಮದುವೆ ಮಾಡುತ್ತಿಲ್ಲ’ ಎಂದು ಎರಡನೇ ಹೆಂಡತಿಯ ಮಗ ಮತ್ತು ಮಾನಸಿಕ ಸ್ಥಿಮಿತ ಹತೋಟಿಯಲ್ಲಿರದ ನಿಂಗರಾಜ ಎಂಬ ಕುಲಪುತ್ರ ತಂದೆಯೆಂಬ ಕನಿಕರವಿಲ್ಲದೇ ಕೊಂದು ಹಾಕಿದ್ದಾನೆ. ಇದೊಂದು ಬಹಳ ದೊಡ್ಡ ಆಘಾತಕಾರಿ ಬೆಳವಣಿಗೆಯಾಗಿದೆ.

ಸಣ್ಣ ನಿಂಗಪ್ಪನಿಗೆ ಅದೇನು ಗ್ರಹಚಾರವೋ



ಎಸ್ಪಿ ರಂಜಿತ್‌ಕುಮಾರ್ ಭಂಡಾರು



ಹೆಚ್ಚುವರಿ ಎಸ್ಪಿ ಡಾ. ಶಿವಕುಮಾರ್ ಆರ್.

ಏನೋ. ಆತನಿಗೆ ಇಬ್ಬರು ಹೆಂಡಂದಿರು. ಮೊದಲ ಹೆಂಡತಿಯಿಂದ ಮಾರುತಿ ಮತ್ತು ಜ್ಯೋತಿ ಎಂಬಿಬ್ಬರು ಮಕ್ಕಳು. ಎರಡನೇ ಹೆಂಡತಿಯಿಂದ ನಿಂಗರಾಜ ಏಕಮೇವ ಪುತ್ರ ಜನಿಸಿದ್ದನು. ಸಾಧ್ಯವಾದಷ್ಟು ಮಕ್ಕಳಿಗೆ ಚೆನ್ನಾಗಿ ಬೆಳೆಸಿದ್ದ ಸಣ್ಣ ನಿಂಗಪ್ಪ. ಇದ್ದ ಪಿತ್ರಾರ್ಜಿತ ಆಸ್ತಿಯಲ್ಲಿ ಮಕ್ಕಳೊಂದಿಗೆ ಹೇಗೋ ಬೇಸಾಯ ಮಾಡಿಕೊಂಡು ಎಲ್ಲರಂತೆ ಬದುಕುತ್ತಿದ್ದನು. ಅದಾಗಲೇ ಹಿರಿಯ ಮಗ ಮಾರುತಿ ಮತ್ತು ಮಗಳಾದ ಜ್ಯೋತಿಗೆ ಮದುವೆ ಮಾಡಿದ್ದನು. ಆದರೆ ಯಾಕೋ... ಏನೋ... ನಿಂಗರಾಜನ ಹಣೆಬರಹದಲ್ಲಿ ಕಂಕಣಬಲ ಕೂಡಿ ಬಂದಂತೆ ಇರಲಿಲ್ಲ. ಸುತ್ತ ಹತ್ತಾರು ಕಡೆಗಳಲ್ಲಿ ಹೆಣ್ಣು ನೋಡಿದರೂ ಕೂಡಾ ನಿಂಗರಾಜನ ಮದುವೆಯಾಗಲೇ ಇಲ್ಲ.

**ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದ...**


ಕಳೆದ ಸುಮಾರು ವರ್ಷಗಳಿಂದಲೂ ನಿಂಗರಾಜ ಮಾನಸಿಕ ಕಾಯಿಲೆಯಿಂದ ನರಳುತ್ತಿದ್ದನು. ಒಮ್ಮೊಮ್ಮೆ ಹುಚ್ಚನಂತೆ ವರ್ತಿಸುತ್ತಿದ್ದನು. ವೈದ್ಯರು ಕೊಟ್ಟ ಮಾತ್ರೆ ಸರಿಯಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಒಂದೊಮ್ಮೆ ಮಾತ್ರೆಯನ್ನು ಹೆಚ್ಚಾಗಿ ಸೇವಿಸಿ ಬಿಡುತ್ತಿದ್ದನು. ಇದರಿಂದ ನಿಂಗರಾಜನ ಮಾನಸಿಕ ಕಾಯಿಲೆ ಗೊತ್ತಾಗಿ ಯಾರು ಹೆಣ್ಣು ಕೊಡಲು ಮುಂದೆ ಬರುತ್ತಿರಲಿಲ್ಲ. ಹೀಗಾಗಿ ನಿಂಗರಾಜನಿಗೆ ಮದುವೆ ವಯಸ್ಸು ದಾಟುತ್ತ ಬಂದಿತು. ಈತನ ವಾರಿಗೆಯವರೆಲ್ಲ ಅದಾಗಲೇ ಮದುವೆಯಾಗಿ ಎಂಟತ್ತು ವರ್ಷ ಸಂಸಾರ ನಡೆಸಿ ಎರಡು-ಮೂರು ಮಕ್ಕಳಿಗೆ ತಂದೆಯಾಗಿದ್ದರು.

**ತನಗೆ ಮದುವೆ ಬೇಕೆಂದು ಜಗಳ...**

ದಿನಗಳು ಉರುಳಿದಂತೆ ನಿಂಗರಾಜನಿಗೆ ವಯಸ್ಸು ಬಲಿಯತೊಡಗಿದವು. ಕಂಡವರೆಲ್ಲ ಆಡಿಕೊಳ್ಳುವಂತೆ ನಿಂಗರಾಜನ ಪರಿಸ್ಥಿತಿ ಆಗಿತ್ತು. ಹೀಗಾಗಿ ಇತ್ತೀಚಿನ ದಿನಗಳಲ್ಲಿ ತಂದೆ ಸಣ್ಣ ನಿಂಗಪ್ಪನಿಗೆ ನನಗೆ ನೀನು ಸಕಾಲದಲ್ಲಿ ಮದುವೆ ಏಕೆ ಮಾಡಲಿಲ್ಲವೆಂದು ದಿನವೂ ಇನ್ನಿಲ್ಲದಂತೆ



ಡಿವೈಎಸ್ಪಿ ಶಿವಕುಮಾರ್ ಟಿ.ಎಂ.



ಸಿಪಿಐ ರಮೇಶಗೌಡ ಕೆ.ಟಿ.

ಕಿರಿಕ್ ಮಾಡತೊಡಗಿದನು. ಹೊಸದುರ್ಗದಿಂದ ಆತನ ಹಿರಿಯಣ್ಣ ಮಾರುತಿ, ಅಕ್ಕ ಜ್ಯೋತಿ ಮತ್ತು ತಾಯಿ ಹಾಗೂ ಕುಟುಂಬಸ್ಥರು ಎಷ್ಟೇ ಬುದ್ಧಿವಾದ ಹೇಳಿದರೂ ಕೂಡಾ ನಿಂಗರಾಜ ಜಗಳ ನಿಲ್ಲಿಸಿರಲಿಲ್ಲ. ಮದುವೆ ವಿಚಾರಕ್ಕೆ ನಿಂಗರಾಜ ತಂದೆ ಸಣ್ಣ ನಿಂಗಪ್ಪನ ಮೇಲೆ ಆಕ್ರೋಶಗೊಂಡಿದ್ದನು. ಅಂದು ಬುಧವಾರ ದಿನಾಂಕ 07-01-2026ರಂದು ಅಣ್ಣನಾದ ಮಾರುತಿ ಸಮೀಪದ ಹೊಸದುರ್ಗದಿಂದ ಬಂದು ತಮ್ಮ ನಿಂಗರಾಜನಿಗೆ ಆದಷ್ಟು ಬೇಗ ನಿನಗೊಂದು ಮದುವೆ ಮಾಡುವ ವ್ಯವಸ್ಥೆ ಮಾಡುತ್ತೇವೆ ಸ್ವಲ್ಪ ದಿವಸ ಸಮಾಧಾನದಿಂದ ಇರಬೇಕು ಎಂದು ತಿಳಿಸಿ ಹೇಳಿದ್ದನು.

**ತಂದೆಯ ತಲೆಗೆ ರಾಡ್‌ನಿಂದ ಹೊಡೆದು ಕೊಲೆ...**

ಬುಧವಾರದಂದು ಇಡೀ ದಿನ ನಿಂಗರಾಜನ ಮದುವೆ ಕುರಿತು ಜಗಳ ಮುಂದುವರೆದಿತ್ತು. ಕೊನೆಗೆ ಕುಟುಂಬಸ್ಥರು ಹೇಗೊ ಜಗಳ ಬಗೆಹರಿಸಿ ಊಟ ಮಾಡಿಸಿ ನಿಂಗರಾಜನನ್ನು ಸಮಾಧಾನ ಪಡಿಸಿ ಮಲಗಿಸಿದ್ದರು. ಇತ್ತ ತಂದೆ ಸಣ್ಣನಿಂಗಪ್ಪನು ಒಲ್ಲದ ಮನಸ್ಸಿನಿಂದ ಊಟದ ಶಾಸ್ತ್ರ ಮುಗಿಸಿ ಮನೆಯಲ್ಲಿ ಮಲಗಿಕೊಂಡಿದ್ದನು. ಅದಾಗಲೇ ರಾತ್ರಿ 11 ಗಂಟೆಯ ಸಮಯ. ಮದುವೆ ವಿಷಯ ತಲೆಗೇರಿಸಿಕೊಂಡು ಕೊತ ಕೊತನೇ ನಿಂಗರಾಜ ಕುದಿಯತೊಡಗಿದ್ದನು. ತನ್ನ ಮದುವೆ ಮಾಡಲು ತಯಾರಿಲ್ಲದ ತಂದೆ ಬದುಕಬಾರದು ಎಂದು ನಿರ್ಧರಿಸಿದನು. ಹಂತಕನ ಮನಸ್ಸಿನಲ್ಲಿ ಕ್ರೂರತನ ಹೆಡೆಯೆತ್ತಿತ್ತು.

ನಿಧಾನಕ್ಕೆ ಎದ್ದವನೇ ಟ್ರ್ಯಾಕ್ಟರ್‌ನಲ್ಲಿದ್ದ ಕಬ್ಬಿಣದ ರಾಡ್ ತೆಗೆದುಕೊಂಡು ನಿಂಗರಾಜ ಮಲಗಿದ್ದ ತಂದೆಯ ತಲೆಯ ಮೇಲೆ ಬಲವಾಗಿ ಕಬ್ಬಿಣದ ರಾಡ್‌ನಿಂದ ಥಳಿಸಿದನು. ಈ ವೇಳೆ ಸಣ್ಣ ನಿಂಗಪ್ಪನು ತೀವ್ರ ರಕ್ತಸ್ರಾವದಿಂದ ನರಳುತ್ತ ವಿಲವಿಲನೆ ಒದ್ದಾಡುತ್ತ ಕೂಗಾಟ, ಚೀರಾಟ ನಡೆಸಿದಾಗ ಕುಟುಂಬಸ್ಥರು ಗಾಬರಿಯಿಂದ ಎದ್ದು ಬಂದರು. ಆಗ ನಿಂಗರಾಜ ಅಲ್ಲಿಂದ ಸದ್ದಿಲ್ಲದೇ ಕತ್ತಲ ಮರೆಯಲ್ಲಿ ಪರಾರಿ ಆಗಿ ಹೋದನು. ಕುಟುಂಬಸ್ಥರು ತೀವ್ರ ರಕ್ತಸ್ರಾವಗೊಂಡಿದ್ದಂತಹ ಸಣ್ಣ ನಿಂಗಪ್ಪನನ್ನು ಹೊಸದುರ್ಗ ತಾಲ್ಲೂಕು ಆಸ್ಪತ್ರೆಗೆ ಸಾಗಿಸಿದರು. ಈ ವೇಳೆ ಪರೀಕ್ಷೆ ನಡೆಸಿದ ವೈದ್ಯರು ಸಣ್ಣ ನಿಂಗಪ್ಪ ಅದಾಗಲೇ ಮೃತಪಟ್ಟಿದ್ದಾನೆ ಎಂದು ಖಚಿತಪಡಿಸಿದರು.

☞14



ಮಗನಿಂದಲೇ ಕೊಲೆಯಾದ ಸಣ್ಣ ನಿಂಗಪ್ಪನ ಮನೆಯ ಮುಂದೆ ಧಾವಿಸಿದ ಜನರು

**ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕು ಹಿಂದಿನಿಂದಲೂ ಹಿಂದೂ ಮುಸ್ಲಿಂ ಕೂಡಿಕೊಂಡು, ಹಬ್ಬಹರಿದಿನಗಳಲ್ಲಿ ಬಂಧು ಮಿತ್ರರಂತೆ ಹಬ್ಬವನ್ನಾಚರಿಸುತ್ತಾ ಇದ್ದಾರೆ. ಆದರೆ ಯಲ್ಲಾಪುರ ಬಿಟ್ಟು ಬೇರೆ ಹೊರ ಜಿಲ್ಲೆಗಳಿಂದ ಬಂದ ಕೆಲ ಅನ್ಯಕೋಮಿನ ಜನರಿಂದ ಇತ್ತೀಚೆಗೆ ಯಲ್ಲಾಪುರದ ಹಿಂದು ಮುಸ್ಲಿಂರಲ್ಲಿ ಜಾತಿ ಕಿಚ್ಚು ಹಚ್ಚುತ್ತಿದ್ದಾರೆಂದು ತಿಳಿದು ಬಂದಿದೆ, ಅದೇನೇ ಇದ್ದರೂ ಉತ್ತರ ಕನ್ನಡ ಪೊಲೀಸರು ಅಂಥ ಅಚಾತುರ್ಯ ನಡೆಯೋಕೆ ಬಿಡುತ್ತಾ ಇಲ್ಲ.**

# ಪ್ರಿಯಕರನಿಂದಲೇ ಪ್ರೇಯಸಿಯ ಬರ್ಬರ ಹತ್ಯೆ!

**ಉತ್ತರ ಕನ್ನಡ**

✍ ಸಂತೋಷಕುಮಾರ


ರಂಜಿತಾ ಬದುಕಿದ್ದಾಗ


ಕೊಲೆ ಮಾಡಿ ತಾನೂ ಸತ್ತ ರಫೀಕ್

ಯಲ್ಲಾಪುರ ತಾಲೂಕಿನ ಬಿಸಗೋಡನ ತಳಕೆಬ್ಬೈಲ ನಲ್ಲಿ ಹತ್ತಾರು ವರ್ಷಗಳ ಹಿಂದೆ ಮೈಸೂರು ಮೈನ್ಸ್ ಲಿಮಿಟೆಡ್‌ನವರಿಂದ ಗಣಿಗಾರಿಕೆ ನಡೆಯುತ್ತಾ ಇತ್ತು. ಆ ಸಂದರ್ಭದಲ್ಲಿ ಆಗಿನ ಬಿಜಾಪುರ ಜಿಲ್ಲೆಯ ಚಡಚಣ ದಿಂದ ಕೆಲಸಕ್ಕಾಗಿ ಮಲ್ಲಪ್ಪ ಬನ್ಸೋಡೆ ಬಂದು ಮೈನ್ಸ್ ನಡೆಯುತ್ತಿದ್ದ ಜಾಗದಲ್ಲಿ ಕೂಲಿ ಕೆಲಸಕ್ಕೆ ಸಂಸಾರ ಸಹಿತ ಹೋಗಿದ್ದರು. ಆದರೆ ಕೆಲ ವರ್ಷಗಳ ನಂತರ ಗಣಿಗಾರಿಕೆ ನಿಂತಿದೆ, ಆಗ ಜೀವನೋಪಾಯಕ್ಕಾಗಿ ಯಲ್ಲಾಪುರದ ಕಾಳಮ್ಮನಗರದ ಆಶ್ರಯ ಕಾಲೋನಿಯಲ್ಲಿ ಮನೆ ಮಾಡಿಕೊಂಡು ಬಡಗಿ ಕೆಲಸ ಮಾಡಿಕೊಂಡು ಸಂಸಾರ ಸಾಗಿಸುತ್ತಿದ್ದರು. ಇವರ ಹೆಂಡ್ತಿ ಭಾಗೀರಥಿ, ಮಕ್ಕಳ ಜೊತೆ ವಾಸವಾಗಿದ್ದರು.


ಕೊಯ್ದು ಸ್ಥಿತಿಯಲ್ಲಿ ರಂಜಿತಾಳ ಕತ್ತು


ಕೊಲೆಯಾದ ಸ್ಥಳದಲ್ಲಿ ರಂಜಿತಾಳ ಪ್ರೀತಿಯ ನಾಯಿ

ನಾಲ್ಕು ಮಕ್ಕಳಲ್ಲಿ ಒಬ್ಬಳಾದ ರಂಜಿತಾಳನ್ನು ಹತ್ತಿರದ ರಾಮಾಪೂರ ಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಕಳಿಸಿದರು. ಅದೇ ಶಾಲೆಯಲ್ಲಿ ರಫೀಕ ಇಮಾಮ ಸಾಬ ಯಳ್ಳೂರ ಅನ್ನೋ ಹುಡುಗ ಕೂಡಾ ಬರುತ್ತಿದ್ದ. ಒಂದೇ ಕ್ಲಾಸಲ್ಲಿ ಕಲೀತಾ ಇದ್ದುದ್ದರಿಂದ ಈ ರಫೀಕ್‌ಗೂ ರಂಜಿತಾಗೂ ಗೆಳೆತನ ಬೆಳೀತು. ಅದೇ ಸ್ನೇಹ ಮುಂದೆ ಪ್ರೇಮವಾಗಿ ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುವುದಕ್ಕೆ ಶುರು ಮಾಡಿಕೊಂಡರು. ಅದೇ ಪ್ರೀತಿ ಅವರಿಬ್ಬರೂ ದೊಡ್ಡವರಾದ ನಂತರವೂ ಮುಂದುವರಿತು. ಇಷ್ಟು ದಿನ ಮುಚ್ಚಿಟ್ಟದ್ದ ಪ್ರೀತಿ ಮನೆಮುಂದಿಗಷ್ಟೇ ಅಲ್ಲದೇ ಕಾಳಮ್ಮನಗರದಲ್ಲೆಲ್ಲಾ ಹಬ್ಬಿಬಿಡ್ತು. ತಾವು ಹಿಂದು ಅವನು ಅನ್ಯಕೋಮಿನವನು ಅಂತಾ ರಂಜಿತಾಳ ಪೋಷಕರು ರಂಜಿತಾ (30)ಗೆ ಸಚಿನ ಕಠಾರೆ ಜೊತೆ ಕಳೆದ ಹನ್ನೆರಡು ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟರು.

ಮೊದಲು ಚೆನ್ನಾಗೇ ನಡೆದಿದ್ದ ರಂಜಿತಾ-ಸಚಿನ್ ಸಂಸಾರ ದಿನ ಕಳೆದ ಹಾಗೆ ತೂತು ಮಡಿಕೆಯಂತಾಯ್ತು. ಮೇಲಿಂದ ಮೇಲೆ ರಂಜಿತಾ ತನ್ನ ಗಂಡನನ್ನ ಬಿಟ್ಟು ತೌರುಮನೆಗೆ ಬರಲಾರಂಭಿಸಿದಳು. ಈ ಮಧ್ಯೆ ರಂಜಿತಾ ಒಂದು ಗಂಡು ಮಗುವಿನ ತಾಯಿಯಾದಳು. ಆ ಪ್ರೀತಿ ಕೂಡಾ ತುಂಬಾ ದಿನ ಇರದೇ ರಂಜಿತಾ ಕೊನೆಗೊಂದು ದಿನ ತನ್ನ ಗಂಡನಿಂದ ವಿಚ್ಛೇದನ ತೆಗೆದುಕೊಂಡು ನೇರವಾಗಿ ಯಲ್ಲಾಪುರ ಬಂದು ಕಾಳಮ್ಮನಗರದ ಆಶ್ರಯ ಕಾಲೋನಿಯಲ್ಲಿದ್ದ ತನ್ನ ತವರುಮನೆಗೇ ಬಂದು ಉಳಿದುಕೊಂಡು ಬಿಟ್ಟಳು.

ಇಷ್ಟು ದಿನ ದೂರವಿದ್ದ ಒಂದಾನೊಂದು ಕಾಲದ ಪ್ರೇಮಿಗಳಾದ ರಫಿಕ್ ಮತ್ತು ರಂಜಿತಾ ಮತೆ ಒಂದಾಗ ತೊಡಗಿದರು. ಈ ರಫೀಕ್ ಕೂಡಾ ಕಾಳಮ್ಮ ನಗರ ವಾಸಿಯೇ ಆಗಿದ್ದರಿಂದ ರಫೀಕ್ ರಂಜಿತಾ ಭೇಟಿಯಾಗೋದು ಸುಲಭವಾಗಿತ್ತು. ಈ ಮಧ್ಯೆ ತನ್ನ ಮಗು ಮತ್ತು ತನ್ನ ಜೀವನೋಪಾಯಕ್ಕೆ ಕೆಲಸ ಹುಡುಕುತ್ತಿದ್ದ ರಂಜಿತಾಗೆ ಕಾಳಮ್ಮನಗರದ ರಾಮಾಪುರ ಸರ್ಕಾರಿ ಶಾಲೆಯೊಂದರಲ್ಲಿ ಬಿಸಿಯೂಟದ ಅಡಿಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಳು.


ರಂಜಿತಾಳ ತಾಯಿ

ಆಕೆಯ ಮಗ ಕೂಡ ಬೆಳೆದು ತನ್ನ ತಾಯಿ ರಂಜಿತಾ ಕೆಲಸ ಮಾಡುತ್ತಿದ್ದ ಶಾಲೆಗೆ ಹೋಗುತ್ತಿದ್ದ. ಗಂಡನಿಂದ ದೂರವಾಗಿದ್ದ ರಂಜಿತಾಗೆ ಈಗ ಹೇಳು ಕೇಳುವವರ್‍ಯಾರೂ ಇಲ್ಲದ ಥರ ರಂಜಿತಾ ಮತ್ತು ರಫೀಕ್ ಜಾಲಿಯಾಗಿರುತ್ತಿದ್ದರು. ಕಟ್ಟಡದ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ ಮೂವತ್ತು ವರ್ಷದ ರಫೀಕ್ ನೇರವಾಗಿ ರಂಜಿತಾಳ ಮನೆಗೇ ಹೋಗಿಬರೋದು ಮಾಡುತ್ತಿದ್ದ. ಅಷ್ಟೇ ಅಲ್ಲ, ರಂಜಿತಾ-ರಫೀಕ್ ಇಬ್ಬರೂ ಕುಡಿಯೋದೂ ಇತ್ತಂತೆ. ಆ ಮನೇಲಿ ಒಂಥರಾ ಗಂಡ-ಹೆಂಡತಿ ಥರಾನೇ ಇದ್ದರು ಅಂತಾ ಕೆಲ ಜನರ ಅಂಬೋಣ.

ಈ ಮಧ್ಯೆ ಅದೇನಾಯಿತೋ ಗೊತ್ತಿಲ್ಲ ರಂಜಿತಾ ಇದ್ದಕ್ಕಿದ್ದಂತೆ ರಫೀಕ್‌ನಿಂದ ದೂರವಾಗುತ್ತಾ ಇದ್ದಳಂತೆ., ಈ ಬಗ್ಗೆ ರಫೀಕ್ ರಂಜಿತಾಗೆ ಕೇಳಿದರೆ ರಂಜಿತಾ ಏನೂ ಆಗೇ ಇಲ್ಲಾ ಅನ್ನೋ ಥರಾ ಇರುತ್ತಿದ್ದನ್ನು ನೋಡಿ ರಫೀಕ್ ಪಕ್ಕಾ ಹುಚ್ಚುನಾಯಿಯಂತಾಗಿದ್ದಾನೆ. ರಂಜಿತಾ ನಿನ್ನನ್ನ ಬಿಟ್ಟು ಇನ್ಯಾರನ್ನೋ ಪ್ರೀತಿಸುತ್ತಿದ್ದಾಳೆ ಅಂತಾ ಯಾರೋ ರಫೀಕ್‌ಗೆ ಹೇಳಿದ್ದಾರೆ. ಇದರಿಂದ ಇನ್ನಷ್ಟು ವ್ಯಾಕುಲಗೊಂಡ ರಫೀಕ್ ಆಗಾಗ ರಂಜಿತ ಇದ್ದಲ್ಲಿ ಹೋಗಿ ವಾದ ಶುರು ಹಚ್ಕೊಂಡಿದ್ದಾನೆ. ಅದೇ ವಾದ ದಿನಾ ಕಳೆಯುತ್ತಿದ್ದ ಹಾಗೆ ಜಗಳವಾಗಿ ಇಬ್ಬರೂ ಎಣ್ಣೆಸೀಗೆಕಾಯಿಯಂತಾಗಿದ್ದಾರೆ. ಇತ್ತೀಚೆಗೆ ರಂಜಿತಾ ರಫೀಕನ ಮುಖ ನೋಡುವುದಕ್ಕೂ ಅಸಹ್ಯ ಪಡೆದಿದ್ದಾಳೆ. ಹಿಂದಿನ ಸುಖದ ಸುಪ್ಪತ್ತಿಗೆ ನೆನೆಸಿಕೊಂಡು ರಫೀಕ್‌ಹತಾಶನಾಗಿ ಮೇಲಿಂದ ಮೇಲೆ ರಂಜಿತಾ ಜೊತೆ ಕಾಲು ಕೆದರಿಕೊಂಡು ಜಗಳ ಕಾಯುತ್ತಿದ್ದಾನೆ.


ಎಸ್ಪಿ ಎಂ.ಎನ್. ದೀಪನ್


ಉಡುಪಿ ಎಸ್ಪಿ ಹರಿರಾಂ ಶಂಕರ್

ಆವತ್ತು ಶನಿವಾರ 03-01-2026 ರಂಜಿತಾ ರಾಮಾಪುರ ಶಾಲೆಯಲ್ಲಿ ಬಿಸಿಯೂಟದ ಕೆಲಸ ಮುಗಿಸಿಕೊಂಡು ಮಧ್ಯಾಹ್ನ ಅಂದಾಜು 1.50ರ ಹೊತ್ತಿಗೆ ಮನೆ ಕಡೆ ಹೋಗುತ್ತಿದ್ದಾಳೆ. ದೂರದಿಂದಲೇ ರಫೀಕ್ ರಂಜಿತಾ... ರಂಜೂ... ನಿಂತ್ಕೊ ಅಂತಾ ಕೂಗುತ್ತಾ ಬರುತ್ತಿದ್ದಾನೆ. ಆದರೆ ರಂಜಿತಾ ಮಾತ್ರ ನೋಡಿಯೂ ನೋಡದ ಹಾಗೆ ಧರಧರನೆ ಮನೆ ಕಡೆ ಹೋಗುತ್ತಿದ್ದಾಳೆ. ಅಷ್ಟರಲ್ಲೇ ಓಡಿ ಬಂದ ರಫೀಕ್‌ರಂಜಿತಾಗೆ ಮಾತಾಡುವುದಕ್ಕೂ ಅವಕಾಶ ಕೊಡದೇ ತಾನು ತಂದಿದ್ದ ಹರಿತವಾದ ಆಯುಧದಿಂದ ರಂಜಿತಾಳ ಕುತ್ತಿಗೆಯನ್ನೇ ಸೀಳಿ ಓಡಿ ಹೋಗಿದ್ದಾನೆ.

ರಂಜಿತಾ ಅಮ್ಮಾ... ಅಣ್ಣಾ... ಅಂತಾ ಮನೆ ಕಡೆ ಓಡಿ ಹೋಗುತ್ತಿದ್ದಾಳೆ. ಸುಮಾರು ಐವತ್ತು ಮೀಟರ್‌ನಷ್ಟು ದೂರ ರಂಜಿತಾಳ ಕತ್ತಿನಿಂದ ರಕ್ತ ಚಿಮ್ಮುತ್ತಲೇ ಇದೆ. ರಂಜಿತಾ ಮನೆ ಹತ್ತಿರ ಹೋಗಿ ಬಿದ್ದಿದ್ದಾಳೆ. ಮನೆಯವರೆಲ್ಲಾ ಓಡಿ ಬಂದು ಅಲ್ಲಿಯ ಜನರ ಸಹಾಯ ಕೇಳಿದ್ದಾರೆ. ಆದರೆ ಈ ಘಟನೆಯಿಂದ ಗಾಬರಿಗೊಂಡ ಜನ ಯಾರೂ ಸಹಾಯಕ್ಕೆ ಬರಲೇ ಇಲ್ಲ. ಆ್ಯಂಬುಲೆನ್ಸ್‌ಗೆ ಫೋನ್ ಮಾಡಿದರೆ ಬೇರೆ ಕಡೆ ಹೋಗಿದ್ದು ಬರುವುದಕ್ಕೆ ಒಂದು ಗಂಟೆಯಾಗುತ್ತೆ ಅಂತಾ ಹೇಳುತ್ತಿದ್ದಾರೆ. ಅಷ್ಟರಲ್ಲಾಗಲೇ ರಂಜಿತಾಳ ಕತ್ತಿನಿಂದ ತುಂಬಾ ರಕ್ತ ಸೋರಿ ಹೋಗಿದೆ.


ಆಗ ಸ್ಥಳೀಯರೊಬ್ಬರು ಬಂದು ಆಟೋದಲ್ಲಿ ರಂಜಿತಾಳನ್ನ ಯಲ್ಲಾಪುರದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆಸ್ಪತ್ರೆಯಲ್ಲಿದ್ದ ಡಾ॥ ಸುಶಿಷ್ಟ ಗಣಾಚಾರಿ ಪ್ರಥಮ ಚಿಕಿತ್ಸೆ ನೀಡಿ ಹೊಲಿಗೆ ಹಾಕಿ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಕಳಿಸಿದ್ದಾರೆ.

ಈಗ ಯಲ್ಲಾಪುರ ಪೊಲೀಸರು ಎಲ್ಲಿ ಕೋಮು ಗಲಭೆಯಾಗುತ್ತದೋ ಅಂತ ತಕ್ಷಣ ಅಲರ್ಟಾಗಿದ್ದಾರೆ.ಸ್ಥಳಕ್ಕೆ ಉತ್ತರ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್., ಹೆಚ್ಚುವರಿ ಎಸ್ಪಿಗಳಾದ ಕೃಷ್ಣಮೂರ್ತಿ, ಎಂ. ಜಗದೀಶ್ ನಾಯ್ಕ, ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ, ಯಲ್ಲಾಪುರ ಪಿಐ ರಮೇಶ ಹನಾಪುರ ಆರೋಪಿ ರಫೀಕನ ಪತ್ತೆಗೆ ಬಲೆ ಬೀಸಿ, ಕೋಮು ಗಲಭೆಯಾಗದಂತೆ ತಕ್ಷಣ ಹಿಂದು ಮುಸ್ಲಿಂ ಮುಖಂಡರ ಸಭೆ ಕರೆದು ಪ್ರಕರಣ ತಿಳಿಗೊಳಿಸು

☞ 14


ಅ॥ ಎಸ್ಪಿ ಕೃಷ್ಣಮೂರ್ತಿ


ಅ॥ ಎಸ್ಪಿ ಎಂ. ಜಗದೀಶ್


ಬಿಕೋ ಎನ್ನುತ್ತಿರುವ ಯಲ್ಲಾಪುರ ಸಂತೆ ಮಾರ್ಕೆಟ್



ಪೊಲೀಸ್ ಠಾಣೆ ಮುಂದೆ ಸಾರ್ವಜನಿಕರು



ಬಳ್ಳಾರಿ ಮಹಾ ನಗರದಲ್ಲಿ ಶ್ರೀ ವಾಲ್ಮೀಕಿ ವಿಗ್ರಹ ಸಂಸ್ಥಾಪನೆಯ ಕಾರ್ಯಕ್ರಮದ ಹಿನ್ನಲೆಯಲ್ಲಿ ಒಂದು ಪೋಸ್ಟರ್ ಹಾಕುವ ವಿಚಾರವಾಗಿ ಶುರುವಾದ ಕಲಹ ಕಾಂಗ್ರೆಸ್ ಕಾರ್ಯಕರ್ತನೊಬ್ಬನ ಪ್ರಾಣ ಕಸಿದದ್ದು ಬಳ್ಳಾರಿ ಮಟ್ಟಿಗೆ ಸಣ್ಣ ಘಟನೆಯಂತೆ ಕಂಡರೂ, ಭವಿಷ್ಯದಲ್ಲಿ ಇದು ಹೆಮ್ಮರವಾಗಿ ಬೆಳೆಯುವ ಮುನ್ಸೂಚನೆ ನೀಡಿರುವುದು ಸುಳ್ಳಲ್ಲ! ಮಂಡ್ಲೂರು ಧಣಿಗಳನ್ನು ಮಟ್ಟ ಹಾಕಿ ರಾಜಕೀಯವಾಗಿ ಮುಂದೆ ಬಂದ ಗಣಿ ಕಳ್ಳ ಜನಾರ್ಧನ ರೆಡ್ಡಿಯನ್ನ ಬಳ್ಳಾರಿ ಹಾಲಿ ಶಾಸಕ ಭರತ್ ರೆಡ್ಡಿ ಇದೀಗ ಮಟ್ಟ ಹಾಕುತ್ತಿದ್ದಾರೆಂದರೆ , ವಿಧಾನ ಸೌಧದೊಳಗೆ ತುಂಬಿದ ಸಭೆಯಲ್ಲಿ ಏಕವಚನದಲ್ಲಿ ಬೈಯುತ್ತಾರೆ ಎಂದರೆ.... ಇದರ ಹಿಂದೆ ಘಟಾನುಘಟಿಗಳು ಇಲ್ಲದಿರುತ್ತಾರೆಯೇ?! ಒಟ್ಟಾರೆ, ರಿಪಬ್ಲಿಕ್ ಬಳ್ಳಾರಿಗಾಗಿ ಮತ್ತೆ ಶುರುವಾಗಿದೆ ರೆಡ್ಡಿ v/s ರೆಡ್ಡಿ ಕದನ ಅನ್ನುವುದರಲ್ಲಿ ಡೌಟೇ ಇಲ್ಲ ಬಿಡ್ರಿ!!

# ರಿಪಬ್ಲಿಕ್ ಬಳ್ಳಾರಿಗಾಗಿ ಮತ್ತೆ ಶುರುವಾಯ್ತಾ ರೆಡ್ಡಿ v/s ರೆಡ್ಡಿ ವಾರ್?!

ಬಳ್ಳಾರಿ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಅವರ ಆಪ್ತ ಸತೀಶ್ ರೆಡ್ಡಿಯ ಗನ್ ಮ್ಯಾನ್ ಹಾರಿಸಿದ ಗುಂಡಿಗೆ ಬಲಿಯಾದ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ರೆಡ್ಡಿ ಸಾವಿನ ಕುರಿತು ದಿನಕ್ಕೊಂದು ಅನುಮಾನ ವ್ಯಕ್ತವಾಗುತ್ತಿದೆ. ರಾಜಶೇಖರ್ ಕೊಲೆ ಕೇಸ್ ಒಂದರಲ್ಲಿ ಜೈಲು ಪಾಲಾಗಿದ್ದು, ಕೆಲವೇ ವಾರಗಳ ಹಿಂದೆ ಬಿಡುಗಡೆಯಾಗಿ ಬಂದಿದ್ದವನು.ಅವತ್ತು ಗಲಾಟೆ ನಡೆದಾಗ ಜನಾರೆಡ್ಡಿ ಮನೆಯ ಮುಂದೆಯೇ ಅಡ್ಡಾಡುತ್ತಿದ್ದ ನಂತೆ. ಅವನ ಮೇಲೆ ಆಕಸ್ಮಿಕವಾಗಿ ಗುಂಡು ಹಾರಿಸಲಾಗಿತ್ತೋ ಅಥವಾ ಬೇಕಂತಲೇ ಹೊಡೆದು ಉರುಳಿಸಲಾಯಿತೋ ಗೊತ್ತಿಲ್ಲ!



ಗುಂಡಿಗೆ ಬಲಿಯಾದ ರಾಜಶೇಖರ್ ರೆಡ್ಡಿ

ಮೊನ್ನೆಯಷ್ಟೇ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ರಾಜಶೇಖರ್ ಮರಣೋತ್ತರ ಪರೀಕ್ಷೆಯನ್ನು ಎರಡು ಬಾರಿ ನಡೆಸಿದ್ದು ಯಾಕೆ ಎಂದು ಅನುಮಾನ ಸರ್ಕಾರವನ್ನು ಪ್ರಶ್ನಿಸಿದ್ದರು! ಮೊದಲ ಬಾರಿ ಮರಣೋತ್ತರ ಪರೀಕ್ಷೆ ಮಾಡಿದಾಗ ಆತನ ದೇಹದಿಂದ ಗುಂಡು ಹೊರ ತೆಗೆಯಲಾಗಿರಲಿಲ್ಲ. ಹಾಗಾಗಿ ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ!! ಇದರ ಹಿಂದಿನ ಉದ್ದೇಶವೇನು? ಎಂದು ಕುಮಾರಸ್ವಾಮಿ ಖಾರವಾಗಿ ಪ್ರಶ್ನಿಸಿದ್ದರು. ಇದೀಗ ಬಳ್ಳಾರಿಯವರೇ ಆದ ಬಿಜೆಪಿ ಮುಖಂಡ ಬಿ. ಶ್ರೀರಾಮುಲು ರಾಜಶೇಖರ್ ಅಂತ್ಯಕ್ರಿಯೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ.

✍ ಮಹದೇವ್ ಕೆಂಪಯ್ಯ



ಜನಪ್ರಿಯ ಶಾಸಕ ನಾ.ರಾ. ಭರತ್ ರೆಡ್ಡಿ

ರೆಡ್ಡಿ ಸಂಪ್ರದಾಯದ ಪ್ರಕಾರ ಮೃತದೇಹವನ್ನು ಹೂಳಲಾಗುತ್ತದೆ. ಆದರೆ ಇಲ್ಲಿ ಅವರ ಕುಟುಂಬಸ್ಥರಿಗೆ ಬೆದರಿಕೆ ಹಾಕಿ ಮೃತದೇಹವನ್ನು ಅಗ್ನಿಸ್ಪರ್ಶ ಮಾಡಲಾಗಿದೆ.

ಆತನ ದೇಹದಲ್ಲಿ ಐದು ಬುಲೆಟ್ ಹೊಕ್ಕಿದ್ದು, ಇನ್ನೂ ಆ ಬುಲೆಟ್‌ಗಳು ಆತನ ದೇಹದಲ್ಲಿತ್ತು. ಅದು ಹೊರ ತೆಗೆದರೆ ಸತ್ಯ ಹೊರಬರುತ್ತದೆ ಎಂದು ಅದು ಸಿಗದಂತೆ ಮೃತದೇಹವನ್ನು ಸುಟ್ಟು ಹಾಕಲಾಗಿದೆ ಎಂದು ಶ್ರೀರಾಮುಲು ಗಂಭೀರ ಆರೋಪ ಮಾಡಿದ್ದಾರೆ!

ಓನ್ಸ್ ಎಗೈನ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು; ಗುಂಡಿಗೆ ಬಲಿಯಾದ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಮೃತ ದೇಹದ ಮರಣೋತ್ತರ ಪರೀಕ್ಷೆಯನ್ನು ಕಾನೂನುಬಾಹಿರವಾಗಿ ಎರಡು ಬಾರಿ ನಡೆಸಲಾಗಿದೆ ಎಂದಿದ್ದಾರೆ! ಅಲ್ಲದೆ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಅವರು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ.

ಜೆಡಿಎಸ್ ಪಕ್ಷದ ಕಚೇರಿ ಜೆ.ಪಿ. ಭವನದಲ್ಲಿ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಬಿಜೆಪಿ ಕಾರ್ಯಕರ್ತ ರಾಜಶೇಖರ್ ಹತ್ಯೆ ಒಂದೆಡೆ, ಆದರೆ ಅವರದ್ದೇ ಪಕ್ಷದ ಕಾರ್ಯಕರ್ತನ ಕೊಲೆಯನ್ನು ಮುಚ್ಚಿಹಾಕಲು ಕಾಂಗ್ರೆಸ್ ಸರಕಾರ ಇನ್ನಿಲ್ಲದ ಪ್ರಯತ್ನ ನಡೆಸಿದೆ. ಇದು ನಾಚಿಕೆಗೇಡು. ಅದಕ್ಕಾಗಿ ಆ ನತದೃಷ್ಟ ಕಾರ್ಯಕರ್ತನ ಮೃತದೇಹವನ್ನು ಎರಡು ಬಾರಿ ಮರಣೋತ್ತರ ಪರೀಕ್ಷೆಗೆ ಒಳಡಿಸಲಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಮೊದಲ ಮರಣೋತ್ತರ ಪರೀಕ್ಷೆಯಲ್ಲಿ ಏನು ಫಲಿತಾಂಶ ಹೊರಬಂತು? ಎರಡನೇ ಮರಣೋತ್ತರ ಪರೀಕ್ಷೆಯಲ್ಲಿ ಏನು ಮಾಹಿತಿ ಇದೆ? ಎಂಬುದನ್ನು ಸರಕಾರವೇ ಹೇಳಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ, ರಾಜಶೇಖರ ಅವರ ದೇಹವನ್ನು ಎರಡು ಸಲ ಮರಣೋತ್ತರ ಪರೀಕ್ಷೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

**ಒತ್ತಡ ಹೇರಿದವರು ಯಾರು?!**

2ನೇ ಬಾರಿ ಪೋಸ್ಟ್‌ಮಾರ್ಟಮ್ ಮಾಡಲಿಕ್ಕೆ ಯಾರು ಒತ್ತಡ ಹೇರಿದರು? ಮತ್ತೊಂದು ಬಾರಿ ಶವ ಪರೀಕ್ಷೆಗೆ ಯಾರು ಆದೇಶ ಮಾಡಿದರು? ಮೊದಲ ಮರಣೋತ್ತರ ಪರೀಕ್ಷೆಯಲ್ಲಿ ತಮಗೆ ಅನುಕೂಲಕರ ವರದಿ ಬರಲಿಲ್ಲ ಎಂದು ಅಲ್ಲಿಗೆ 'ಸೂರ್ಯನ ಬೆಳಕು' ಏನಾದರೂ ಬಿದ್ದಿತ್ತಾ? ಎಂದು ಕುಮಾರಸ್ವಾಮಿ ಅವರು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ನೀವು ಸತ್ಯವಂತರಲ್ಲವೇ? ದಿನನಿತ್ಯ ಜಾಹೀರಾತುಗಳಲ್ಲಿ 'ಸತ್ಯಮೆಯ ಜಯತೇ' ಎಂದು ಕೊಚ್ಚಿಕೊಳ್ಳುತ್ತೀರಿ. ಈಗ ಸತ್ಯ ಹೇಳಿ. ರಾಜ್ಯದ ಜನತೆಗೆ ಸತ್ಯ ಏನೆಂದು ತಿಳಿಸಬೇಕಲ್ಲವೇ? ಎರಡನೇ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಏನಿದೆ ಎಂಬುದನ್ನು ಹೇಳಿ? ಮುಖ್ಯಮಂತ್ರಿಗಳೇ ಜನತೆಗೆ ಸತ್ಯವನ್ನು ಹೇಳಿ ಎಂದು ಕುಮಾರಸ್ವಾಮಿ ಅವರು ಒತ್ತಾಯ ಮಾಡಿದ್ದಾರೆ.



ರೆಡ್ಡಿ ಆಪ್ತಮಿತ್ರ ಬಿ. ಶ್ರೀರಾಮುಲು

ಮೊದಲ ಮರಣೋತ್ತರ ಪರೀಕ್ಷೆಯಲ್ಲಿ ದೇಹದಲ್ಲಿ ಸಣ್ಣಪುಟ್ಟ ಚೂರು ಪತ್ತೆಯಾಯಿತು ಎಂಬ ಮಾಹಿತಿ ಇದೆ! ಎರಡನೇ ಬಾರಿ ಶವ ಪರೀಕ್ಷೆಯನ್ನು ಮಾಡಿಸುವ ಮೂಲಕ ಸ್ವತಃ ಜನಾರ್ಧನ ರೆಡ್ಡಿ ಅವರೇ ಗುಂಡು ಹೊಡೆದಿದ್ದು ಆರೋಪ ಮಾಡಿ ಕಥೆ ಕಟ್ಟಿ ಅವರನ್ನು ಫಿಕ್ಸ್ ಮಾಡಲು ಷಡ್ಯಂತ್ರ್ಯ ಮಾಡಿದ್ದಾರೆ!



ಉದ್ಘಾಟನೆಗೆ ಸಿದ್ಧವಾಗಿದ್ದ ವಾಲ್ಮೀಕಿ ಮೂರ್ತಿ

ಆದರೆ, ಎರಡನೇ ಮರಣೋತ್ತರ ಪರೀಕ್ಷೆ ಈ ಸರಕಾರಕ್ಕೆ, ಸೂರ್ಯನ ಬೆಳಕು ಬೀಳಿಸಲು ಹೋದವರಿಗೆ ಉಲ್ಟಾ ಹೊಡೆದಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ.


**ಸರಕಾರದ ತನಿಖೆ ನಿರುಪಯುಕ್ತ...**

ಗಾಳಿಯಲ್ಲಿ ಗುಂಡು ಹಾರಿಸಿದ್ದರಿಂದ ಹೀಗೆ ಹೀಗೆ ಆಗಿದೆ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ನಮ್ಮ ಪಕ್ಷ ಶಾಸಕ ಭರತ್ ರೆಡ್ಡಿ ಪರ ನಿಲ್ಲುತ್ತದೆ ಎಂದು ಉಪ ಮುಖ್ಯಮಂತ್ರಿ ಹೇಳುತ್ತಾರೆ. ಸತೀಶ್‌ರೆಡ್ಡಿ ಗನ್ ಮ್ಯಾನ್ ಗನ್‌ನಿಂದ ಫೈಯರ್ ಆಗಿದೆ ಅಂತ ಸ್ವತಃ ಸಿಎಂ ಅವರೇ ಹೇಳಿದ್ದಾರೆ. ಆದರೆ ಗೃಹ ಸಚಿವರು ಆತನ ಬಂಧನಕ್ಕೆ ಆದೇಶ ಮಾಡದೇ ಹೇಳಿಕೆಗಳಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಹೀಗಿರುವಾಗ ಈ ಸರ್ಕಾರ ಯಾವ ರೀತಿ ತನಿಖೆ ಮಾಡುತ್ತದೆ? ಇವರ ತನಿಖೆಯಿಂದ ಸತ್ಯಾಂಶ ಹೊರಕ್ಕೆ ಬರಲು ಸಾಧ್ಯವೇ ಎಂದು ಸಚಿವರು ಪ್ರಶ್ನಿಸಿದ್ದಾರೆ.


ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿ ಬಳ್ಳಾರಿ ಶೂಟೌಟ್ ಪ್ರಕರಣಕ್ಕೆ ಸಮಾಧಿ ಕಟ್ಟಲು ಹೊರಟಿದ್ದಾರೆ ಎಂದು ನೇರ ಆರೋಪ ಮಾಡಿರೋ ಕುಮಾರಸ್ವಾಮಿ ಅವರು, ಜನಾರ್ಧನ ರೆಡ್ಡಿ ಅವರು ಭದ್ರತೆ ಕೊಡಿ ಎಂದು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದರೆ ಅದನ್ನು ಈ ಡಿಸಿಎಂ ಲೇವಡಿ ಮಾಡುತ್ತಾರೆ. ಬೇಕಾದರೆ ಅಮೆರಿಕ, ಇರಾನ್‌ನಿಂದ ಭದ್ರತೆ ಮಾಡಿಸಿಕೊಳ್ಳಲಿ ಅಥವಾ ನೂರು ಜನ ಬಿಜೆಪಿ ಕಾರ್ಯಕರ್ತರನ್ನು ಭದ್ರತೆಗೆ ನಿಯೋಜಿಸಿಕೊಳ್ಳಲಿ ಎಂದು ಹೇಳಿದ್ದಾರೆ. ಉಪ ಮುಖ್ಯಮಂತ್ರಿ ಬಾಯಲ್ಲಿ ಬರುವ ಮಾತೇ ಇದು ಎಂದು ಕುಮಾರಸ್ವಾಮಿ ಅವರು ಡಿಕೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

**ಹೆಚ್ಚುವರಿ ಎಸ್ಪಿ, ಐಜಿ ಅಮಾನತು ಏಕಿಲ್ಲ?!**

ಕರ್ತವ್ಯ ಲೋಪ ಎಂದು ಎಸ್‌ಪಿ ಅವರನ್ನು ಅಮಾನತು ಮಾಡಿದ್ದಾರೆ. ಹಾಗಾದರೆ, ಹೆಚ್ಚುವರಿ ಎಸ್ಪಿ, ಐಜಿ ಅವರು ಕೂಡ ಕರ್ತವ್ಯ ಲೋಪ ಎಸಗಿಲ್ಲವೇ? ಚಿನ್ನಸ್ವಾಮಿಯಲ್ಲಿ ಕ್ರೀಡಾಂಗಣದ ಮುಂದೆ ಕಾಲ್ತುಳಿತ ಪ್ರಕರಣ ಸಂಭವಿಸಿದಾಗ ಹಲವಾರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದೀರಿ. ಈಗ ಬಳ್ಳಾರಿಯಲ್ಲಿ ಕೇವಲ ಎಸ್‌ಪಿ ಮೇಲೆ ಮಾತ್ರ ಕ್ರಮ ಯಾಕೆ ತೆಗೆದುಕೊಂಡಿದ್ದೀರಿ? ಅನೇಕ ವರ್ಷಗಳಿಂದ ಅಲ್ಲಿಯೇ ಬೇರು ಬಿಟ್ಟುಕೊಂಡಿರುವ ಅಧಿಕಾರಿಗಳ ತಪ್ಪೇ ಇಲ್ಲವೇ ಎಂದು ಕುಮಾರಸ್ವಾಮಿ ಕಿಡಿಕಾರಿದ್ದಾರೆ.



ಅನ್ಯಾಯವಾಗಿ ಸಸ್ಪೆಂಡ್ ಆದ ಎಸ್ಪಿ ನೆಜ್ಜೂರ್



ಗಾಲಿ ಜನಾರ್ಧನ ರೆಡ್ಡಿ ಅವರು ಬಳ್ಳಾರಿಗೆ ಬಂದ ಮೇಲೆ ಗಲಾಟೆಗಳು ಆಗುತ್ತಿವೆ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ. ಅದಕ್ಕೆ ಗೃಹ ಸಚಿವ ಪರಮೇಶ್ವರ್ ಅವರು ಹಿಮ್ಮೇಳ ಹಾಡುತ್ತಿದ್ದಾರೆ. ಜನಾರ್ಧನ ರೆಡ್ಡಿ ಅವರು ಸುಪ್ರೀಂ ಕೋರ್ಟ್ ಅನುಮತಿ ಪಡೆದು ಒಂದೂವರೆ ವರ್ಷದ ಹಿಂದೆಯೇ ಬಳ್ಳಾರಿಗೆ ಬಂದಿದ್ದಾರೆ.



ಪೊಲೀಸ್ ಪಹರೆ

ಅವರು ಬಳ್ಳಾರಿಗೆ ಬಂದ ಮೇಲೆ ಎಷ್ಟು ಗಲಾಟೆ ಆಗಿದೆ? ಎಷ್ಟು ಪ್ರಕರಣಗಳು ದಾಖಲಾಗಿವೆ ಎಂಬ ಬಗ್ಗೆ ಮಾಹಿತಿ ಕೊಡಿ. ಆ ಬಗ್ಗೆ ಅಂಕಿ ಅಂಶಗಳನ್ನು ಕೊಡಿ. ನೀವೆಲ್ಲರೂ ಅಪರಾಧಿಯ ಪರ ನಿಂತಿರುವುದು ನಾಚಿಕೆಗೇಡಿನ ಸಂಗತಿ ಎಂದು ಸಚಿವ ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯೂಸ್ ಲೆಸ್ ಗೃಹ ಸಚಿವರು ರಾಜ್ಯದಲ್ಲಿ ಕೆಲಸ ಮಾಡ್ತಿದ್ದಾರೆ. ಅವರಿಂದ ಏನೂ ಆಗುವುದಿಲ್ಲ. ಗೃಹ ಇಲಾಖೆ ಸತ್ತಿದೆಯೋ ಬದುಕಿದೆಯೋ ಎಂಬುದು ಗೊತ್ತಿಲ್ಲ. ಬಳ್ಳಾರಿಗೆ ಅಷ್ಟು ಗನ್‌ಗಳು ಎಲ್ಲಿಂದ, ಹೇಗೆ ಬಂದವು? ಅವೇನು ಪಾಕಿಸ್ತಾನದಿಂದ ಬಂದವಾ? ಇದಕ್ಕೆ ಡಿಕೆಶಿ ಉತ್ತರ ಕೊಡಲಿ. ಕೊಲೆಗೆಡುಕರಿಗೆ ಸರ್ಕಾರ ರಕ್ಷಣೆ ಕೊಡ್ತಿದೆ. ಇದು ಕೊಲೆಗಡುಕರಿಗಾಗಿ ಇರುವ ಸರ್ಕಾರ ಎಂದು ಅವರು ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಪಾಪದ ಕೊಡ ತುಂಬುತ್ತಿದೆ. ಕಾರ್ಯಕರ್ತನ ಹತ್ಯೆಗೆ ಕಾರಣನಾದ ವ್ಯಕ್ತಿಯ ರಕ್ಷಣೆಗೆ ಇಡೀ ಸರಕಾರ, ಕಾಂಗ್ರೆಸ್ ಪಕ್ಷ ನಿಂತಿದೆ. ಬಳ್ಳಾರಿ ವರೆಗೂ ಪಾದಯಾತ್ರೆ ಮಾಡಿ ಅದೇ ಜನರ ಬೆಂಬಲದಿಂದ ನೀವು ಅಧಿಕಾರಕ್ಕೆ ಬಂದವರು ಅಲ್ಲವೇ? ಅದೇ ಜನರೇ ನಿಮ್ಮನ್ನು ಸರ್ವನಾಶ ಮಾಡುತ್ತಾರೆ. ಬ್ಯಾನರ್ ಗಲಾಟೆಯನ್ನೇ ಪ್ರತಿಷ್ಠೆಯ ವಿಚಾರವನ್ನಾಗಿ ಮಾಡಿಕೊಂಡ ಪರಿಣಾಮ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಹತ್ಯೆಯಾಗಿದೆ. ಈ ದುರ್ಘಟನೆಗೆ ಕಾರಣನಾದ ಶಾಸಕನ ಆಪ್ತ ಸತೀಶ್ ರೆಡ್ಡಿಯನ್ನು ಈವರೆವಿಗೂ ಯಾಕೆ ಬಂಧಿಸಿಲ್ಲ? ಅದರ ಬದಲು ರಾಜಾತಿಥ್ಯ ನೀಡಿ ಸರ್ಕಾರಿ ವೆಚ್ಚದಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದೀರಾ? ಎಂದು ಕೇಂದ್ರ ಸಚಿವರು ವ್ಯಂಗ್ಯ ವಾಡಿದ್ದಾರೆ.



ಜಮೀರ್‌ಕಾನ್ ಕ್ಯಾಶ್ ಗಿಫ್ಟ್!

**ಆದಾಯ ತೆರಿಗೆ ಇಲಾಖೆ ಮಾಡುತ್ತಿದೆ?**

ಮೃತ ಕಾರ್ಯಕರ್ತನ ಕುಟುಂಬಕ್ಕೆ ಪರಿಹಾರ ನೀಡಿದ್ದೀರಿ, ಸರಿ. ಆದರೆ, ಯಾವ ಖಾತೆಯಿಂದ ಆ ಹಣವನ್ನು ನೀಡಿದ್ದೀರಿ? ಅದಕ್ಕೆ ಆದಾಯ ತೆರಿಗೆ ಲೆಕ್ಕ ಇದೆಯೇ? ಚೀಲದಲ್ಲಿ ದುಡ್ಡು ತುಂಬಿಕೊಂಡು ಹೋಗಿ ಕೊಟ್ಟರಲ್ಲ,(ಜಮೀರ್ ಖಾನ್) ಆ ಹಣ ಯಾರದು? ಅದು ಎಲ್ಲಿಂದ ಬಂತು? 25 ಲಕ್ಷ ರೂಪಾಯಿ ಸರ್ಕಾರದ ಹಣವೇ? ಇಲ್ಲವೇ ಖಾಸಗಿ ಹಣವೇ?ಎಂಬುದು ಗೊತ್ತಾಗಬೇಕಲ್ಲವೇ? ಆದಾಯ ತೆರಿಗೆ ಇಲಾಖೆ ಏನು ಮಾಡುತ್ತಿದೆ ಎಂದು ಕುಮಾರಸ್ವಾಮಿ ಅವರು ಪ್ರಶ್ನಿಸಿದ್ದಾರೆ.

ಕುಮಾರಸ್ವಾಮಿ ಅವರು ಮಾಧ್ಯಮಗೋಷ್ಠಿ ನಡೆಸಿದಾಗ, ಅವರ ಜೊತೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಜವರಾಯಿ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಹೆಚ್.ಎಂ. ರಮೇಶ್ ಗೌಡ, ಚೌಡರೆಡ್ಡಿ ತೂಪಲ್ಲಿ, ಕೆ.ಟಿ. ಶ್ರೀಕಂಠೇಗೌಡ, ಜೆಡಿಎಸ್ ರಾಜ್ಯ ಮಹಿಳಾ ವಿಭಾಗದ ಅಧ್ಯಕ್ಷೆ ರಶ್ಮಿ ರಾಮೇಗೌಡ ಮುಂತಾದವರು ಹಾಜರಿದ್ದರು.

**ಸಿದ್ದರಾಮಯ್ಯ ರಾಜ್ಯ ಕಾಂಗ್ರೆಸ್‌ನ ಕೊನೆ ಸಿಎಂ!**

ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ನಾಶವಾಗಿದೆ. ಕರ್ನಾಟಕದಲ್ಲಿ ಜಂಗಲ್ ರಾಜ್ ಶುರುವಾಗಿದೆ. ಉತ್ತಮ ಆಡಳಿತ ಎನ್ನುವುದು ಎಲ್ಲಿದೆ? ಅಧಿಕಾರಿಗಳನ್ನ ಗುಲಾಮರ ರೀತಿ ಈ ಸರ್ಕಾರ ನಡೆಸಿಕೊಳ್ತಿದೆ ಎಂದು ಕಿಡಿಕಾರಿದ ಕೇಂದ್ರ ಸಚಿವ ಕುಮಾರಸ್ವಾಮಿ ಅವರು, ಭರತ್ ರೆಡ್ಡಿ ಪರ ಡಿ.ಕೆ. ಶಿವಕುಮಾರ್ ಮಾತಾಡ್ತಾರೆ. ಯಾಕೆಂದರೆ, ಅವರಿಗೆ ಸಿಎಂ ಆಗುವಾಗ ಒಂದು ಓಟ್ ಮಿಸ್ ಆಗಬಾರದು ಎಂದು ಅವರ ಪರವಾಗಿ ಬ್ಯಾಟ್ ಬೀಸುತ್ತಿದ್ದಾರೆ ಎಂದು ಕಾಲೆಳೆದಿದ್ದಾರೆ! ☯



ಕಮರಿದ ವಾಲ್ಮೀಕಿ ಸಮುದಾಯದ ಸಂಭ್ರಮ



ಸಿಂಗಾರಗೊಂಡಿತ್ತು ಬಳ್ಳಾರಿ

## ರೆಡ್ಡಿ ಕೋಟೆ ನಿರ್ಮಿಸಿಕೊಂಡಿದ್ದಾರೆ, ಅವರನ್ನು ಕೊಲ್ಲಲು ಸಾಧ್ಯವೇ?

ಬಳ್ಳಾರಿಯಲ್ಲಿ ಬ್ಯಾನರ್ ಗಲಾಟೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ನಾ.ರಾ. ಭರತ್ ರೆಡ್ಡಿ ಅವರ ಬೆಂಬಲಕ್ಕೆ ನಿಂತಿರೋ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರಿಗೆ ಮತ್ತೆ 'ರಿಪಬ್ಲಿಕ್ ಆಫ್ ಬಳ್ಳಾರಿ' ಮಾಡಲು ಸರ್ಕಾರ ಅವಕಾಶ ನೀಡುವುದಿಲ್ಲ ಎಂದು ಗುಡುಗಿದ್ದಾರೆ! ಕಾಂಗ್ರೆಸ್ ಕಾರ್ಯಕರ್ತನ ಸಾವಿಗೆ ಕಾರಣವಾದ ಬಳ್ಳಾರಿ ಫೈರಿಂಗ್ ಘಟನೆಯ ನಂತರ ಖಾಸಗಿ ಬಂದೂಕುಗಳನ್ನು ಹೊಂದಲು ಅನುಮತಿ ನೀಡಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಡಿಸಿಎಂ ತಿಳಿಸಿದ್ದಾರೆ.

ಮೊನ್ನೆ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ಕರೆದು ಮಾತನಾಡಿದ ಡಿ.ಕೆ. ಶಿವಕುಮಾರ್ ಅವರು, 'ಯಾರ ಬಂದೂಕಿನಿಂದ ಗುಂಡು ಹಾರಿಸಲಾಗಿದೆ ಎಂದು ಪೊಲೀಸ್ ತನಿಖೆಯಿಂದ ಬಹಿರಂಗವಾಗಲಿದೆ' ಎಂದು ನಿಗೂಢ ಹೇಳಿಕೆ ನೀಡಿದ್ದಾರೆ!

'ನಮ್ಮ ಸರ್ಕಾರ ಮೊದಲ ಬಾರಿಗೆ ಬಳ್ಳಾರಿಯಲ್ಲಿ ವಾಲ್ಮೀಕಿ ಮಹರ್ಷಿಯವರ ಪುತ್ಥಳಿ ನಿರ್ಮಿಸುತ್ತಿದೆ. ನಮ್ಮ ಶಾಸಕರು ಅದರ ಜವಾಬ್ದಾರಿ ತೆಗೆದುಕೊಂಡಿದ್ದಾರೆ, ನಗರದ ಎಲ್ಲೆಡೆ ಅದರ ಪೋಸ್ಟರ್‌ಗಳನ್ನು ಹಾಕಿದ್ದಾರೆ. ಅದರಲ್ಲಿ ತಪ್ಪೇನಿದೆ?'

'ಕೆಲವೊಮ್ಮೆ, ಬಿಜೆಪಿ ಕಾರ್ಯಕರ್ತರು ಬೆಂಗಳೂರಿನಲ್ಲಿರುವ ನನ್ನ ಮನೆಯ ಮುಂದೆಯೂ ಪೋಸ್ಟರ್‌ಗಳನ್ನು ಹಾಕುತ್ತಾರೆ. 'ಅದನ್ನು ಮಾಡಬೇಡಿ' ಎಂದು ನಾನು ಹೇಳಬಹುದೇ? ಬಿಜೆಪಿಯವರು ಸಿಎಂ ನಿವಾಸದ ಮುಂದೆಯೂ ಪೋಸ್ಟರ್ ಹಾಕುತ್ತಾರೆ.'

'ಪೋಸ್ಟರ್ ಹಾಕಿದರೆ ಏನು ಸಮಸ್ಯೆ? ನಿಮಗೆ (ಜನಾರ್ದನ ರೆಡ್ಡಿಗೆ) ಏನು ತೊಂದರೆಯಾಯಿತು? ವಾಲ್ಮೀಕಿ ಪ್ರತಿಮೆ ಉದ್ಘಾಟನೆಗಾಗಿ ನಾವು ಕಾರ್ಯಕ್ರಮ ಆಯೋಜಿಸುತ್ತಿದ್ದೆವು.'

'ನಿಮ್ಮ ಮನೆಯ ಮುಂಭಾಗದ ರಸ್ತೆ ಸರ್ಕಾರಿ ಆಸ್ತಿಯಾಗಿದೆ ಮತ್ತು ಪೋಸ್ಟರ್ ಅನ್ನು ಸರ್ಕಾರಿ ಆಸ್ತಿಯಲ್ಲಿ ಹಾಕಲಾಗಿದೆ. ಇದರಲ್ಲಿ ಯಾವ ಪಿತೂರಿ ಇದೆ? ಜಗಳವಾಡುವ ಅಗತ್ಯ ಏನಿತ್ತು? ಎಂಬಿತ್ಯಾದಿಯಾಗಿ ಹೇಳಿ, ನಾವು ಪಕ್ಷದ ನಮ್ಮ ಒಬ್ಬ ಕಾರ್ಯಕರ್ತನನ್ನು ಕಳೆದುಕೊಂಡಿದ್ದೇವೆ...' ಎಂದು ಸಂತಾಪ ವ್ಯಕ್ತಪಡಿಸಿ, 'ನಮ್ಮ ಕಾರ್ಯಕರ್ತನನ್ನು ಕೊಲೆ ಮಾಡಲಾಗಿದೆ ಮತ್ತು ಅದಕ್ಕೆ ಬಿಜೆಪಿಯೇ ಕಾರಣ' ಎಂದು ಡಿ.ಕೆ. ಶಿವಕುಮಾರ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ!

'ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಪರಮೇಶ್ವರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಈ ವಿಷಯದ ಬಗ್ಗೆ ಮಾತನಾಡಿದ್ದಾರೆ, ಪೊಲೀಸ್ ತನಿಖೆ ನಡೆಯುತ್ತಿರುವಾಗ ನಾನು ಮಧ್ಯಪ್ರವೇಶಿಸಲು ಬಯಸುವುದಿಲ್ಲ.'






'ಪಕ್ಷದ ವತಿಯಿಂದ ಈ ಘಟನೆ ಬಗ್ಗೆ ಅಧ್ಯಯನ ನಡೆಸಲು ಹೆಚ್.ಎಂ. ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ನಿಯೋಗ ಕಳುಹಿಸಿದ್ದೇವೆ. ಬಿಜೆಪಿಯವರಿಗೆ ಬಳ್ಳಾರಿಯಲ್ಲಿ ನಮ್ಮ ಪಕ್ಷದ ಗೆಲುವು ಅರಗಿಸಿಕೊಳ್ಳಲು ಆಗುತ್ತಿಲ್ಲ.'


'ಕಾಂಗ್ರೆಸ್ ಪಕ್ಷ ನಮ್ಮ ಶಾಸಕ ಭರತ್ ರೆಡ್ಡಿ ಬೆನ್ನಿಗೆ ನಿಲ್ಲಲಿದೆ. ನಾವು ನಮ್ಮ ಕಾರ್ಯಕರ್ತನನ್ನು ಕಳೆದುಕೊಂಡಿದ್ದೇವೆ. ಇದಕ್ಕೆ ಕಾರಣ ಯಾರು ಎಂಬುದು ತನಿಖೆಯಿಂದ ಹೊರಬರಲಿದ್ದು, ಕಾನೂನು ತನ್ನ ಕ್ರಮ ಕೈಗೊಳ್ಳಲಿದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ. ನನಗೆ ಈ ಘಟನೆ ತಿಳಿದ ತಕ್ಷಣ ಎಸ್ಪಿ ಜೊತೆ ಮಾತನಾಡಿದ್ದೇನೆ. ಎಸ್ಪಿ ಯಾವ ಪರಿಸ್ಥಿತಿಯಲ್ಲಿ ಮಾತನಾಡಿದರು ಎಂಬುದು ನನ್ನ ಅನುಭವಕ್ಕೇ ಬಂದಿದೆ! ಅವರು ಏನು ಉತ್ತರ ನೀಡಿದ್ದಾರೆ ಎಂಬುದು ಗೊತ್ತಿದೆ. ಈ ಹಿಂದೆ ಇದ್ದ ಎಸ್ಪಿ, ಐಜಿ ಮತ್ತು ಶಾಸಕರ ಜತೆಗೂ ಮಾತನಾಡಿದ್ದೇನೆ' ಎಂದು ಡಿಸಿಎಂ ಡಿಕೆಶಿ ಹೇಳಿದ್ದಾರೆ.

ಜನಾರ್ಧನ ರೆಡ್ಡಿ ಅವರು ದೊಡ್ಡ ಡ್ರಾಮಾ ಮಾಸ್ಟರ್. ಅವರು ಮೊದಲೇ ಸಿನಿಮಾ ನಿರ್ಮಾಪಕರಲ್ಲವೇ? ಡ್ರಾಮಾ ಮಾಡುತ್ತಾರೆ. ಕೋಟೆ ನಿರ್ಮಿಸಿಕೊಂಡು ನೂರು ಜನ ಭದ್ರತಾ ಸಿಬ್ಬಂದಿ ಹೊಂದಿರುವವರನ್ನು ಯಾರು ಹತ್ಯೆ ಮಾಡಲು ಸಾಧ್ಯ ಎಂದು ಡಿ.ಕೆ. ಶಿವಕುಮಾರ್ ಲೇವಡಿ ಮಾಡಿದ್ದಾರೆ!

ಬಳ್ಳಾರಿಯಿಂದ ಗಡಿಪಾರ್ ಆಗಿದ್ದ ಜನಾರ್ಧನ ರೆಡ್ಡಿ ಹಿಂತಿರುಗುವವರೆಗೂ ಬಳ್ಳಾರಿಯಲ್ಲಿ ಯಾವುದೇ ರಾಜಕೀಯ ಜಗಳ, ಘಟನೆಗಳು ಅಥವಾ ಎಫ್‌ಐಆರ್‌ಗಳು ನಡೆದಿಲ್ಲ! ಎಂದು ಗಂಗಾವತಿ ಶಾಸಕ ಜನಾರ್ಧನ್ ರೆಡ್ಡಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ! ಅಂದಹಾಗೆ, ಅಕ್ರಮ ಗಣಿಗಾರಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸೆಪ್ಟೆಂಬರ್ 2011ರಲ್ಲಿ ಜನಾರ್ಧನ ರೆಡ್ಡಿ ಅವರನ್ನು ಸಿಬಿಐ ಬಂಧಿಸಿದ ನಂತರ ಅವರು ಬಳ್ಳಾರಿ, ಅನಂತಪುರ ಮತ್ತು ಕರ್ನೂಲ್ ಜಿಲ್ಲೆಗಳಿಗೆ ಪ್ರವೇಶಿಸುವುದನ್ನು ನಿಷೇಧಿಸಲಾಗಿತ್ತು. ಸುಪ್ರೀಂ ಕೋರ್ಟ್ ಈ ನಿಷೇಧವನ್ನು ತೆಗೆದುಹಾಕಿದ ನಂತರ 2024ರಲ್ಲಿ ತಮ್ಮ ಹುಟ್ಟೂರು ಬಳ್ಳಾರಿಗೆ ಮತ್ತೆ ಮರಳಿದ್ದರು ಜನಾ ರೆಡ್ಡಿ.....

# ಚೆನ್ನೀಪುರದೊಡ್ಡಿಯ ಡೇರಿ ಮಾಲೀಕನ ಕಗ್ಗೊಲೆ ಕೊಟ್ಟ ಸಾಲವೇ ಶೂಲವಾಯಿತೇ ಉಮೇಶನಿಗೆ!


ಆರೋಪಿ ಸ್ವಾಮಿಗೌಡ


ಕೊಲೆಯಾದ ಉಮೇಶ್

**ಸ್ವಗ್ರಾಮದಲ್ಲಿ ಹಾಲಿನ ಡೈರಿ ನಡೆಸುತ್ತಿದ್ದ ಆತ ಜೊತೆಗೆ ವ್ಯವಸಾಯವನ್ನೂ ಮಾಡಿಕೊಂಡಿದ್ದ. ಡೈರಿಗೆ ಹಾಲು ಹಾಕಲು ಬರುವ ರೈತರಿಗೆ ವ್ಯವಸಾಯಕ್ಕೆ ತೊಂದರೆಯಾಗಿ ಹಣಕಾಸಿನ ಅವಶ್ಯಕತೆ ಇದ್ದಾಗ ಸಾಲ ನೀಡುತ್ತಿದ್ದ, ಅದೇ ಗ್ರಾಮದ ಅವರದೇ ಜನಾಂಗದ ವ್ಯಕ್ತಿಯೂ ಈತನಿಂದ ವ್ಯವಸಾಯದ ಖರ್ಚಿಗಾಗಿ 1 ಲಕ್ಷ ರೂ. ಸಾಲ ಪಡೆದಿದ್ದ ಆದರೆ ಪಡೆದ ಸಾಲದ ಹಣವನ್ನು ಆತ ವಾಪಸ್ ಕೊಟ್ಟಿರಲಿಲ್ಲ. ಕೊಟ್ಟ ಸಾಲ ವಾಪಸ್ ಕೇಳಲು ಹೋದವನನ್ನು ಆ ಸಾಲಗಾರ ಪತ್ನಿ ಹಾಗೂ ಸಂಬಂಧಿಯೊಡನೆ ಸೇರಿ ಲಾಂಗ್ (ಬಾಳೆ ಕತ್ತರಿಸುವ ದೊಡ್ಡ ಮಚ್ಚು) ನಿಂದ ಮನ ಬಂದಂತೆ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಕೊಟ್ಟ ಸಾಲವೇ ಅವನಿಗೆ ಶೂಲವಾಗಿ ಪ್ರಾಣ ಕಳೆದು ಕೊಂಡಿದ್ದಾನೆ.**

**ಚಾಮರಾಜನಗರ**
ಎಸ್. ಸ್ವಾಮಿ

**ಚಾ**ಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದ ಜಾಗೇರಿಯ ಚೆನ್ನೀಪುರದೊಡ್ಡಿ ಗ್ರಾಮದಲ್ಲಿ ಈ ದುಷ್ಕೃತ್ಯ ನಡೆದಿದೆ. ಗ್ರಾಮದ ಸಣ್ಣೇಗೌಡ ಅವರ ಮಗ ಉಮೇಶ್ (50) ಕೊಲೆಯಾದ ವ್ಯಕ್ತಿ. ಅದೇ ಗ್ರಾಮದ ಪಟ್ಟಬುದ್ದಿಗೌಡರ ಮಗ ಸ್ವಾಮಿಗೌಡ ಕೊಟ್ಟವನನ್ನೆ ಆತನ ಹೆಂಡತಿ ಮತ್ತು ಸಂಬಂಧಿಯೊಡನೆ ಸೇರಿ ಕೊಲೆ ಮಾಡಿ ಈಗ ಇಬ್ಬರು ಜೈಲು ಸೇರಿದ್ದಾರೆ.

ಗ್ರಾಮದ ಸಣ್ಣೇಗೌಡನ ಮಗ ಉಮೇಶ್ ಸ್ವಗ್ರಾಮದಲ್ಲಿ ಹಾಲಿನ ಡೈರಿ ನಡೆಸುತ್ತಿದ್ದ, ಜೊತೆಗೆ ವ್ಯವಸಾಯವನ್ನೂ ಮಾಡಿಕೊಂಡಿದ್ದ. ಈತನ ಪತ್ನಿ ಸರಸ್ವತಿ, ಈ ದಂಪತಿಗಳಿಗೆ ಇಬ್ಬರು ಮಕ್ಕಳು ಮೊದಲನೆಯವಳು ಸೌಂದರ್ಯ ಈಕೆಯನ್ನು ಪಕ್ಕದ ಮುದ್ದೇಗೌಡನ ದೊಡ್ಡಿಯ ಗ್ರಾಮದ ಬಸವರಾಜು ಎಂಬುವವರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಎರಡನೇ ಮಗ ಸಾಗರ್ ಈಗ್ಗೆ ಎರಡು ವರ್ಷಗಳ ಹಿಂದೆ ತೀರಿ ಹೊಗಿದ್ದಾನೆ.

ಡೈರಿಯ ಕಾರ್ಯದರ್ಶಿಯಾಗಿದ್ದ ಉಮೇಶ್ ಡೈರಿಗೆ ಹಾಲು ಹಾಕಲು ಬರುವ ರೈತರಿಗೆ ವ್ಯವಸಾಯಕ್ಕೆ ತೊಂದರೆಯಾಗಿ ಹಣಕಾಸಿನ ಅವಶ್ಯಕತೆ ಇದ್ದಾಗ ಸಾಲ ನೀಡುತ್ತಿದ್ದನು. ಅದರಂತೆ ಉಮೇಶ್‌ನಿಂದ ಅದೇ ಗ್ರಾಮದ ಅವರದೇ ಜನಾಂಗದ ಪಟ್ಟಬುದ್ದಿಗೌಡರ ಮಗ ಸ್ವಾಮಿಗೌಡ ಪುಟ್ಟಬುದ್ದಿಯು ವ್ಯವಸಾಯದ ಖರ್ಚಿಗಾಗಿ ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ 1 ಲಕ್ಷ ರೂ. ಹಣವನ್ನು ಸಾಲವಾಗಿ ಪಡೆದಿದ್ದು, ಆದರೆ ಉಮೇಶ್‌ನಿಂದ ಪಡೆದ ಸಾಲದ ಹಣವನ್ನು ಸ್ವಾಮಿಗೌಡ ವಾಪಸ್ ಕೊಟ್ಟಿರಲಿಲ್ಲ ಎನ್ನಲಾಗಿದೆ.

ಸ್ವಾಮಿಗೌಡನಿಗೆ ಗ್ರಾಮದಲ್ಲಿ 8 ಎಕರೆ ಜಮೀನಿದ್ದು ಜೋಳ, ಟೊಮೆಟೋ ಹಾಗೂ ಇನ್ನಿತರ ಬೆಳೆಗಳನ್ನು ಬೆಳೆದುಕೊಂಡು ತೋಟದ ಮನೆಯಲ್ಲಿ ಹೆಂಡತಿ, ಮಕ್ಕಳೊಡನೆ ವಾಸವಾಗಿದ್ದ. ಸ್ವಾಮಿಗೌಡ ಸ್ವಲ್ಪ ಬಿರುಸಿನ ಮನುಷ್ಯ. ಹೇಳಬೇಕೆಂದರೆ ಗ್ರಾಮದಲ್ಲಿ ಡ್ಯಾಮಿನೆಟ್ ಆಗಿ ಹವಾ ಮೆಂಟೇನ್ ಮಾಡಿದ್ದ. ಈತನ ಮಗ ವಿನಯ್ ಕುಮಾರ್. ಪಕ್ಕದ ಮುದ್ದೇಗೌಡನ ದೊಡ್ಡಿಯ ಗ್ರಾಮದ ಬಸವರಾಜು ಹಾಗೂ ವಿನಯ್‌ಕುಮಾರ್ ಇಬ್ಬರು ಖಾಸ ಸ್ನೇಹಿತರು. ಈ ಬಸವರಾಜು ಮೃತ ಉಮೇಶ್ ಅಳಿಯ, ಉಮೇಶ್‌ನ ಹಿರಿಯ ಮಗಳು ಸೌಂದರ್ಯಳ ಗಂಡ.

ಸ್ವಾಮಿಗೌಡನ ಮಗ ವಿನಯ್ ಕುಮಾರ್ ಪಕ್ಕದ ಗ್ರಾಮದ ಅನ್ಯಕೋಮಿನ ಯುವತಿಯನ್ನು ಪ್ರೀತಿಸಿ ಆಕೆಯ ಜೊತೆ ಅಂತರ್ಜಾತಿ ವಿವಾಹವಾಗಿದ್ದಾನೆ. ವಿವಾಹದ ವೇಳೆ ಉಮೇಶನ ಅಳಿಯ ಬಸವರಾಜು ವಿನಯ್ ಕುಮಾರ್ ಬೆಂಬಲವಾಗಿ ನಿಂತು ಸಹಾಯ ಮಾಡಿದ್ದ ಇದು ತಂದೆ ಸ್ವಾಮಿಗೆ ಸ್ವಲ್ಪ ಇಷ್ಟವಿರಲಿಲ್ಲ. ಹಾಗಾಗಿ ಉಮೇಶ್ ಹಾಗೂ ಆತನ ಅಳಿಯನನ್ನು ಕಂಡರೆ ಸ್ವಾಮಿ ಗೌಡನಿಗೆ ಸ್ವಲ್ಪವು ಆಗುತ್ತಿರಲಿಲ್ಲ. ಗ್ರಾಮದಲ್ಲಿ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಕಟ್ಟಸಲಾಗಿದ್ದು ಅದರ ನೇತೃತ್ವವನ್ನು ಸ್ವಾಮಿಗೌಡ ವಹಿಸಿದ್ದ ಆ ದೇವಸ್ಥಾನಕ್ಕೆ ಬಸವರಾಜು ತಂದೆ / ಉಮೇಶ್ ಬೀಗನಾದ


ಆಗಿನ ಎಸ್ಪಿ ಡಾ. ಬಿ.ಟಿ. ಕವಿತಾ


ಈಗಿನ ಎಸ್ಪಿ ಮುತ್ತುರಾಜ್


ಡಿವೈಎಸ್ಪಿ ಧರ್ಮೇಂದ್ರ


ಸಿಪಿಐ ಶಿವಮಾದಯ್ಯ


ಪಿಎಸ್‌ಐ ಸುಪ್ರೀತ್

ಪ್ರಕಾಶ್ ಬಳಿ ವಂತಿಗೆ ಹಣ ತೆಗೆದುಕೊಂಡಿರಲಿಲ್ಲ. ಹಾಗಾಗಿ ಸ್ವಾಮಿಗೌಡ ಹಾಗೂ ಉಮೇಶ್ ನಡುವೆ ಆಗಿನಿಂದಲೂ ಅಷ್ಟಕಷ್ಟೆ.

ಈ ನಡುವೆ ಉಮೇಶ ಪದೇ ಪದೇ ಕುಡಿದು ಬಂದು ಸ್ವಾಮಿಗೌಡನನ್ನು ಬೈಯುತ್ತಿದ್ದ ಇದು ಅವನನ್ನು ದಿನೇ ದಿನೆ ಕೆರಳುವಂತೆ ಮಾಡಿತ್ತು. ಹಾಗೂ ಇತ್ತೀಚೆಗೆ ಸ್ವಾಮಿ ಉಮೇಶ್ ನಡೆಸುತ್ತಿದ್ದ ಡೈರಿಗೆ ಹಾಲು ಹಾಕುವುದನ್ನು ನಿಲ್ಲಿಸಿ ನಮ್ಮ ಪಕ್ಕದ ಗ್ರಾಮದ ಹೊಸಳ್ಳಿ ನಿಂಗಯ್ಯನ ದೊಡ್ಡಿ ಗ್ರಾಮದ ಹಾಲಿನ ಡೈರಿಗೆ ಹಾಲು ಹಾಕಲು ಪ್ರಾರಂಭಿಸಿದ್ದ. ಆದ್ದರಿಂದ ಉಮೇಶ್ ಸ್ವಾಮಿ ಮತ್ತು ಅವನ ಹೆಂಡತಿಗೆ ನೀವು ವ್ಯವಸಾಯಕ್ಕೆಂದು ನಮ್ಮಿಂದ ಹಣವನ್ನು ಸಾಲ ಪಡೆದು, ಹಣವನ್ನು ಕೊಡದೆ ಬೇರೆ ಡೈರಿಗೆ ಹಾಲು ಹಾಕುತ್ತಿದ್ದೀರಿ. ಹಾಲನ್ನು ಯಾವ ಡೈರಿಗೆ ಬೇಕಾದರೂ ಹಾಕಿಕೊಳ್ಳಿ ಆದರೆ ನಾನು ಕೊಟ್ಟಿರುವ ಹಣವನ್ನು ವಾಪಸ್ ಕೊಡಿ ಎಂದು ಕೇಳುತ್ತಿದ್ದ. ಆದರೆ ಸ್ವಾಮಿ ಮತ್ತು ಅವನ ಹೆಂಡತಿ ನಾಗಮ್ಮರವರು ಉಮೇಶ್‌ಗೆ ಸಾಲದ ಹಣವನ್ನು ವಾಪಸ್ ಕೊಡದೆ ಇಂದು-ನಾಳೆ ಎಂದು ಸತಾಯಿಸುತ್ತಿದ್ದರು. ದಿನಾಂಕ 27-12- 2025 ರಂದು ಉಮೇಶ ಸ್ವಾಮಿ ಮನೆಗೆ ಸಾಲದ ಹಣ ಕೇಳಲು ಹೋದಾಗ ಸ್ವಾಮಿ ಮತ್ತು ಅವನ ಹೆಂಡತಿ ನಾಗಮ್ಮ ಉಮೇಶನ ಜೊತೆ ಗಲಾಟೆ ಮಾಡಿ ಕಳುಹಿಸಿದ್ದರು.

ಆದರೆ ಸೋಮವಾರ ಉಮೇಶನ ಹೆಣ ಉರುಳಿಸಿಯೇ ಬಿಟ್ಟಿದ್ದಾರೆ. ದಿನಾಂಕ 29-12- 2025 ರಂದು ಉಮೇಶ ಕುಡಿದು ಬಂದು ಎಂದಿನಂತೆ ಸ್ವಾಮಿಗೌಡನನ್ನು ತುಂಬಾ ತುಚ್ಛವಾಗಿ ಕೆಟ್ಟ-ಕೆಟ್ಟದಾಗಿ ಬೈಯುತ್ತಿದ್ದ (ಸ್ವಾಮಿ ಗೌಡನ ಹೆಂಡತಿ... ನಾ... ಎಂದು ಕೀಳು ಮಟ್ಟದ ಪದದಿಂದ ಬೈಯುತ್ತಿದ್ದ) ಈ ವೇಳೆ ಅಲ್ಲಿಗೆ ಬಂದ ಸ್ವಾಮಿಗೌಡನ ಸಂಬಂಧಿ ಕೆಂಡ ಎಂಬುವನನ್ನು ಕರೆದು ಆ ಬೋಳಿಮಗನನ್ನು ಕರೆದುಕೊಂಡು ಬಾ ಎಂದು


ಆರೋಪಿ ಕೆಂಡ


ಕಳುಹಿಸುತ್ತಾನೆ. ಕೆಂಡ ಎಂಬುವನು ಸ್ವಾಮಿ ಗೌಡನ ಮನೆಗೆ ಹೋಗಿ ಸಣ್ಣೇಗೌಡನ ಮಗ ಉಮೇಶ ನಿನ್ನನ್ನು ತುಂಬಾ ತುಚ್ಛವಾಗಿ ಕೆಟ್ಟಕೆಟ್ಟದಾಗಿ ಬೈಯುತ್ತಿದ್ದಾನೆ ಬಾ ಎಂದು ಆತನನ್ನು ಪ್ರಚೋದಿಸಿ, ಕೆರಳಿಸಿ, ಕರೆಯುತ್ತಾನೆ. ಇದರಿಂದ ಉದ್ರಕ್ತನಾದ ಸ್ವಾಮಿ ಗೌಡ ಕೂಡಲೆ ಕೋಪಗೊಂಡು ಕೆಂಡನೊಡನೆ ಬರುತ್ತಾನೆ. ಮೊದಲೇ ಉಮೇಶ್‌ನ ಕಿರುಕುಳದಿಂದ ಬೀಸುತ್ತಿದ್ದ ಸ್ವಾಮಿಗೌಡ ಬರುವಾಗ ಕೈಯಲ್ಲಿ ಬಾಳೆ ಕತ್ತರಿಸುವ ದೊಡ್ಡ ಮಚ್ಚು ಹಿಡಿದುಕೊಂಡು ಬಂದಿದ್ದಾನೆ. ಅಷ್ಟರಲ್ಲಾಗಲೇ ಉಮೇಶ ಅಲ್ಲಿಂದ ಹೊರಟುಹೋಗಿದ್ದ.

ಮತ್ತೆ ಮಧ್ಯಾಹ್ನ ಸುಮಾರು 3.30 ರಿಂದ 3.45 ರ ಸಮಯದಲ್ಲಿ ಉಮೇಶ ಸ್ವಾಮಿಗೌಡನ ತೋಟದ ಮನೆಗೆ ಹೋಗಿ ಸಾಲ ಕೇಳು ನೆಪದಲ್ಲಿ ಬೈಯ್ಯುತ್ತಿರುತ್ತಾನೆ. ಈ ವೇಳೆ ಒಬ್ಬರಿಗೊಬ್ಬರು ಜೋರಾಗಿ ಕೂಗಾಡ ತೊಡಗಿದ್ದಾರೆ. ಈ ವೇಳೆ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಉಮೇಶ್ ಸಂಬಂಧಿ ಮಹದೇವ ರಾಜು ಎಂಬಾತ ಗಲಾಟೆಯ ಸದ್ದು ಕೇಳಿ ಸ್ವಾಮಿ ತೋಟದ ಮನೆ ಬಳಿ ಬಂದಿದ್ದಾನೆ. ಅಲ್ಲಿ ಸ್ವಾಮಿ ಮತ್ತು ಆತನ ಹೆಂಡತಿ ನಾಗಮ್ಮ ಉಮೇಶನಿಗೆ ತಿರುಗಿಬಿದ್ದು ನಿನಗೆ ಯಾವ ಸಾಲದ ಹಣ ಕೊಡಬೇಕು ಲೋಫರ್ ನನ್ ಮಗನೇ, ನಾವು ನಿನಗೆ ಹಣ ಕೊಡುವುದಿಲ್ಲ, ನೀನು ಇದ್ದರೇ ತಾನೇ ನಮ್ಮನ್ನು ಹಣ ಕೇಳಲು ಬರುತ್ತೀಯ, ಇವನನ್ನು ಮುಗಿಸಿಬಿಡಿ ಎಂದು ನಾಗಮ್ಮ ಉಮೇಶನನ್ನು ತಬ್ಬಿ ಹಿಡಿದುಕೊಂಡಿದ್ದಾಳೆ. ಆಗ ಗಂಡ ಸ್ವಾಮಿಗೌಡ ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ ಲಾಂಗ್ (ಬಾಳೆ ಕತ್ತರಿಸುವ ದೊಡ್ಡ ಮಚ್ಚು) ನಿಂದ ಉಮೇಶನನ್ನು ಕೊಲೆ ಮಾಡುವ ಉದ್ದೇಶದಿಂದ ಆತನ ಮುಖ ಮತ್ತು ಕುತ್ತಿಗೆಗೆ ಮನ ಬಂದಂತೆ ಬಲವಾಗಿ ಕೊಚ್ಚಿದ್ದಾನೆ. ಸ್ವಾಮಿಗೌಡನ ಬಲವಾದ ಹೊಡೆತದಿಂದ ಉಮೇಶ ಕೆಳಗಡೆ ಕುಸಿದು ಬಿದ್ದಿದ್ದಾನೆ. ಆಗ ಅಲ್ಲೇ ಇದ್ದ ಉಮೇಶನ ಸಂಬಂಧಿ ಮಹದೇವ ಅವರುಗಳನ್ನು ಸೈಡಿಗೆ ತಳ್ಳಿ ಗಲಾಟೆ ಬಿಡಿಸಿದ್ದಾನೆ.

ನಂತರ ಸಂಜೆ ಸುಮಾರು 4 ಗಂಟೆ ಸಮಯದಲ್ಲಿ ಮಹದೇವ ರಾಜು ಮನೆಯಲ್ಲಿದ್ದ ಉಮೇಶ್‌ನ ಹೆಂಡತಿ

☞ 14

ಟ್ರಬಲ್ ಶೂಟರ್ ಕನಕಪುರದ ಬಂಡೆಗೆ ಕರ್ನಾಟಕ ಚಕ್ರಾಧಿಪತ್ಯ ಅರ್ಥಾತ್ ಸಿಎಂ ಸ್ಥಾನ ಸಿಗುವ ಯಾವುದೇ ಲಕ್ಷಣಗಳು ಸಧ್ಯಕ್ಕೆ ಗೋಚರಿಸುತ್ತಿಲ್ಲ. ಏಕೆಂದರೆ ಈಗಾಗಲೇ ಹೈಕಮಾಂಡ್ ಈ ಬಗ್ಗೆ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವತ್ತ ಗಮನಹರಿಸದೆ ಅಸ್ಸಾಂ ವಿಧಾನಸಭಾ ಚುನಾವಣೆಯತ್ತ ಮುಖ ಮಾಡಿದ್ದು, ಅಲ್ಲಿಗೆ ವೀಕ್ಷಕರನ್ನಾಗಿ ಡಿ.ಕೆ. ಶಿವಕುಮಾರ್ ಅವರನ್ನು ನೇಮಕ ಮಾಡಿದೆ. ಇದು ಪರೋಕ್ಷವಾಗಿ ಸಿದ್ದರಾಮಯ್ಯರವರೇ ಸಿಎಂ ಆಗಿ ಮುಂದುವರೆಯುತ್ತಾರೆ ಎನ್ನುವ ಸೂಚನೆಯಾ? ಹಾಗಾದರೆ ಡಿಕೆಶಿ ಸಿಎಂ ಆಗಲ್ವಾ?



ಬಿ.ಎಂ. ಲವಕುಮಾರ್

# ಟ್ರಬಲ್ ಶೂಟರ್ ಡಿಕೆಶಿ ಸಿಎಂ ಆಗೋದು ಡೌಟು!

ಕಳೆದೊಂದು ವರ್ಷಂದೀಚೆಗೆ ಪವರ್ ಶೇರಿಂಗ್ ಫೈಟ್ ರಾಜ್ಯದಲ್ಲಿ ಜೋರಾಗಿಯೇ ನಡೆಯುತ್ತಿದೆ. ರಾಜ್ಯ ಕಾಂಗ್ರೆಸ್ ನಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬಣಗಳು ಸಮಯ ಸಿಕ್ಕಾಗಲೆಲ್ಲ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದ ವಿಚಾರಗಳನ್ನು ತೇಲಿ ಬಿಡುತ್ತಲೆ ಇದ್ದಾರೆ. ಡಿ.ಕೆ. ಶಿವಕುಮಾರ್ ರಾಜ್ಯ ನಾಯಕರಿಗಿಂತ ಹೆಚ್ಚಾಗಿ ಹೈಕಮಾಂಡ್ ನಾಯಕರ ಮೇಲೆ ಭರವಸೆ ಇಟ್ಟಿದ್ದರು. ಆದರೆ ಹೈಕಮಾಂಡ್ ಅದ್ಯಾಕೋ ಕರುಣೆ ತೋರಿದಂತೆ ಕಾಣಿಸುತ್ತಿಲ್ಲ. ಹೀಗಾಗಿ ಡಿ.ಕೆ. ಶಿವಕುಮಾರ್ ಮುಂದೇನು ಮಾಡುತ್ತಾರೆ ಎಂಬುದೇ ಕುತೂಹಲದ ವಿಚಾರವಾಗಿದೆ.



ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಲ್ಲಿದೆ. ಹೀಗಿರುವಾಗ ಇಲ್ಲಿ ಏನಾದರೂ ಸಿದ್ದರಾಮಯ್ಯ ಅವರಿಂದ ಅಧಿಕಾರವನ್ನು ಕಿತ್ತು ಡಿ.ಕೆ. ಶಿವಕುಮಾರ್ ಅವರಿಗೆ ನೀಡುವುದು ಅಷ್ಟು ಸುಲಭವಾಗಿ ಉಳಿದಿಲ್ಲ. ಅಹಿಂದ ಅಸ್ತ್ರವನ್ನು ಬಳಸಿಯೇ ಇಲ್ಲಿವರೆಗೆ ಸಿಎಂ ಸಿದ್ದರಾಮಯ್ಯ ಬಂದು ನಿಂತಿದ್ದಾರೆ. ಅವರ ಬೆನ್ನಿಗೆ ಹಿಂದುಳಿದ ಸಮುದಾಯದ ನಾಯಕರು, ಅಲ್ಪಸಂಖ್ಯಾತ ನಾಯಕರು ಹೀಗೆ ಹಲವರಿದ್ದಾರೆ. ಹೀಗಿರುವಾಗ ಹೈಕಮಾಂಡ್‌ಗೂ ಅಧಿಕಾರ ಹಸ್ತಾಂತರ ಮಾಡುವುದು ಸುಲಭವಾಗಿ ಉಳಿದಿಲ್ಲ. ಹೀಗಾಗಿಯೇ ಹೈಕಮಾಂಡ್ ಸರ್ಕಸ್ ಮಾಡಿಕೊಂಡು ಬರುತ್ತಿದೆ.

2023ರಲ್ಲಿ ಅಧಿಕಾರ ಹಿಡಿಯುವಲ್ಲಿ ಡಿ.ಕೆ. ಶಿವಕುಮಾರ್ ಅವರ ಪಾತ್ರವನ್ನು ತಳ್ಳಿಹಾಕುವಂತಿಲ್ಲ. ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಬಳಿಕ ಅದಕ್ಕೊಂದು ನ್ಯಾಯಯುತ ಸ್ಥಾನ ಒದಗಿಸಿದ್ದಾರೆ. ಹಂಚಿಹೋಗಿದ್ದ, ಮೌನಕ್ಕೆ ಜಾರಿದ್ದ ನಾಯಕರನ್ನೆಲ್ಲ ಒಂದೆಡೆ ಸೇರಿಸಿ ಪಕ್ಷವನ್ನು ಬಲಿಷ್ಠಗೊಳಿಸುವಲ್ಲಿಯೂ ಅವರು ಯಶಸ್ವಿಯಾಗಿದ್ದಾರೆ. ಪಕ್ಷದ ಸಂಘಟನೆಯನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಮಾಡಿದ್ದಾರೆ. ಇದೆಲ್ಲವೂ ಅವರಿಗೆ ಗೆಲುವನ್ನು ತಂದುಕೊಟ್ಟಿದೆ. ಹಾಗೆಂದು ಎಲ್ಲವೂ ಡಿ.ಕೆ. ಶಿವಕುಮಾರ್ ಅವರಿಂದಲೇ ಆಯಿತಾ? ಖಂಡಿತಾ ಇಲ್ಲ. ಸಿದ್ದರಾಮಯ್ಯ ಅವರ ವರ್ಚಸ್ಸು ಕೆಲಸ ಮಾಡಿದೆ.



ಇನ್ನು ಅವತ್ತು ಚುನಾವಣೆ ನಡೆದು ಕಾಂಗ್ರೆಸ್ ಮ್ಯಾಜಿಕ್ ಸಂಖ್ಯೆಯನ್ನು ಮೀರಿ ಗೆದ್ದು ಬಂದಾಗ ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಿಯೇ ತೀರುತ್ತೇನೆ ಎಂಬ ವಿಶ್ವಾಸದಲ್ಲಿದ್ದರು. ಆದರೆ ಸಿದ್ದರಾಮಯ್ಯ ಅವರು ಬಿಗಿಪಟ್ಟು ಹಿಡಿದ ಕಾರಣದಿಂದಾಗಿ ಕೆಲ ದಿನಗಳ ಹಗ್ಗಜಗ್ಗಾಟದ ಬಳಿಕ ಸಿದ್ದರಾಮಯ್ಯ ಅವರೇ ಸಿಎಂ ಎಂದು ಘೋಷಣೆ ಮಾಡಲಾಯಿತು. ಈ ವೇಳೆ ಡಿ.ಕೆ.ಶಿ. ಡಿಸಿಎಂ ಆದರು. ಬಹುಶಃ ಅಷ್ಟು ಸುಲಭವಾಗಿ ಒಪ್ಪಿಕೊಳ್ಳಲು ಅಧಿಕಾರದ ಹಸ್ತಾಂತರದ ಒಪ್ಪಂದವೂ ಆಗಿತ್ತು ಎಂಬ ಮಾತುಗಳು ಅಲ್ಲಿಂದ ಇಲ್ಲಿವರೆಗೂ ಇದೆ.

ಇವತ್ತು ಡಿ.ಕೆ. ಶಿವಕುಮಾರ್ ಕಾರ್ಯಕ್ರಮಗಳ ವೇದಿಕೆಗಳಲ್ಲಿ ನಂಬಿಕೆಯ ಮಾತುಗಳನ್ನಾಡುತ್ತಿರುವುದು, ಹಿಂದೊಮ್ಮೆ ರಾಷ್ಟ್ರೀಯ ಮಾಧ್ಯಮಕ್ಕೆ ಪವರ್ ಶೇರಿಂಗ್ ಬಗ್ಗೆ ಹೇಳಿಕೆ ನೀಡಿರುವುದು ಮತ್ತು ಅವರ ಬೆಂಬಲಿಗರು ಆಗಾಗ್ಗೆ ಮುಂದಿನ ಸಿಎಂ ಡಿಕೆಶಿ ಎಂದು ಘೋಷಣೆ ಕೂಗುತ್ತಿರುವುದು ಇದೆಲ್ಲವೂ ಅವತ್ತು ಒಪ್ಪಂದ ಆಗಿದೆ ಎಂಬುದನ್ನು ಸೂಚಿಸುತ್ತಿದೆ ಎಂಬುದನ್ನು ತೋರಿಸುತ್ತಿದೆ.



ಹಿಂದೆ ಜೆಡಿಎಸ್ ಮತ್ತು ಬಿಜೆಪಿ ಅಧಿಕಾರ ಪಡೆದಾಗ ಅವರ ನಡುವಿನ ಒಪ್ಪಂದ ಬಹಿರಂಗವಾಗಿತ್ತು.

ಆದರೆ ಇಲ್ಲಿ ಕಾಂಗ್ರೆಸ್ ಹೈಕಮಾಂಡ್ ಅವತ್ತು ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವೆ ಏನು ಒಪ್ಪಂದ ಆಗಿತ್ತು ಎಂಬುದನ್ನು ಬಹಿರಂಗಗೊಳಿಸಿಲ್ಲ. ಹೈಕಮಾಂಡ್ ಮತ್ತು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಮಾತ್ರ ಗೊತ್ತಿದೆ. ಒಂದು ವೇಳೆ ಒಪ್ಪಂದ ಆಗಿಯೂ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡದೆ ಸತಾಯಿಸುತ್ತಿದ್ದರಾ? ಅಥವಾ ಡಿ.ಕೆ. ಶಿವಕುಮಾರ್ ಸಿಎಂ ಆಗಲೇ ಬೇಕೆಂಬ ಹಠಕ್ಕೆ ಬಿದ್ದಿದ್ದಾರೋ ಗೊತ್ತಿಲ್ಲ. ಇನ್ನು ಇರುವುದು ಕೇವಲ ಎರಡೂವರೆ ವರ್ಷಗಳು ಮಾತ್ರ. ಅದರಲ್ಲೂ ಕೊನೆಯ ವರ್ಷ ಎಲೆಕ್ಷನ್ ವರ್ಷವಾಗಿರುವುದರಿಂದ ಅಧಿಕಾರ ಯಾರೇ ಪಡೆದರೂ ಒತ್ತಡ ಅನುಭವಿಸಲೇ ಬೇಕಾಗುತ್ತದೆ.

ಡಿ.ಕೆ. ಶಿವಕುಮಾರ್ ಹೈಕಮಾಂಡ್‌ನ್ನು ನಂಬಿದ್ದರು. ಅದರಲ್ಲೂ ಸೋನಿಯಾ ಗಾಂಧಿ ಅವರ ಬಗ್ಗೆ ಅಗಾಧ ನಂಬಿಕೆ ಇಟ್ಟಿದ್ದರು. ಅವರು ಯಾವತ್ತೂ ನನ್ನನ್ನು ಕೈ ಬಿಡಲ್ಲ ಎಂಬ ವಿಶ್ವಾಸದಲ್ಲಿದ್ದರು. ಆದರೆ ಇತ್ತೀಚೆಗಿನ ಬೆಳವಣಿಗೆಯನ್ನು ಗಮನಿಸಿದರೆ, ಹೈಕಮಾಂಡ್ ಈ ವಿಚಾರದಲ್ಲಿ ವಿಳಂಬ ನೀತಿ ಅನುಸರಿಸುವ ಮೂಲಕ ದಿನ ತಳ್ಳುವ ಪ್ರಯತ್ನ ಮಾಡುತ್ತಿದೆಯಾ? ಎಂಬ ಪ್ರಶ್ನೆಗಳು ಕಾಡಲಾರಂಭಿಸಿವೆ. ಇಡೀ ದೇಶದಲ್ಲಿ ಕೇವಲ ಮೂರು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಆಡಳಿತ ನಡೆಸುತ್ತಿದೆ. ಅದರಲ್ಲೂ ಸದೃಢವಾಗಿರುವುದು ಕರ್ನಾಟಕ ಮಾತ್ರ. ಆದ್ದರಿಂದ ಅಧಿಕಾರ ಹಸ್ತಾಂತರ ವಿಚಾರದಲ್ಲಿ ಸ್ವಲ್ಪ ಎಡವಟ್ಟು ಆದರೂ ಸಮಸ್ಯೆ ಆಗುತ್ತದೆ ಎಂಬುದು ಅವರಿಗೆ ಚೆನ್ನಾಗಿಯೇ ಗೊತ್ತಿದೆ. ಹೀಗಾಗಿ ಈ ವಿಚಾರದಲ್ಲಿ ಮೌನವಾಗಿದ್ದಾರಾ? ಗೊತ್ತಿಲ್ಲ.



ದೇಶದಲ್ಲಿ ಅಸ್ಸಾಂ, ತಮಿಳುನಾಡು, ಕೇರಳ, ಪಶ್ಚಿಮಬಂಗಾಳ ಮೊದಲಾದ ಕಡೆಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಇದಕ್ಕಾಗಿ ಹೈಕಮಾಂಡ್ ಸಿದ್ಧತೆ ಮಾಡಿಕೊಳ್ಳಲೇ ಬೇಕಾಗಿದೆ. ಕಳೆದ ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್ ಎಲ್ಲಿಯೂ ಗೆದ್ದಿಲ್ಲ. ಮುಂದಿನ ಚುನಾವಣೆಗಳಲ್ಲಿ ಗೆಲ್ಲಲೇ ಬೇಕಾದ ಅನಿವಾರ್ಯತೆಯಿದೆ. ಹೀಗಾಗಿ ಹೈಕಮಾಂಡ್ ಆ ಕಡೆಗೆ ಗಮನಹರಿಸುತ್ತಿದೆ. ಇಲ್ಲಿವರೆಗಿನ ಚುನಾವಣೆಗಳನ್ನು ಗಮನಿಸಿದರೆ ರಾಹುಲ್ ಗಾಂಧಿ ಚುನಾವಣಾ ನೇತೃತ್ವ ವಹಿಸಿದ್ದ ಚುನಾವಣೆಗಳಲ್ಲಿ ಗೆಲುವು ಸಿಕ್ಕಿಲ್ಲ. ಹೀನಾಯ ಸೋಲು ಕಂಡಿದೆ. ಹೀಗಾಗಿ ಅವರ ಬದಲಿಗೆ ಈ ಬಾರಿ ಸ್ವತಃ ಪ್ರಿಯಾಂಕ ವಾದ್ರಾ, ಅವರೇ ಅಖಾಡಕ್ಕೆ ಇಳಿಯುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ.

ಅಸ್ಸಾಂ ವಿಧಾನಸಭಾ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಪ್ರಿಯಾಂಕ ವಾದ್ರಾ, ತಾವೇ ಮುಂದೆ ನಿಂತು ಚುನಾವಣೆಗೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಸ್ಕ್ರೀನ್ ಕಮಿಟಿಯನ್ನು ಮಾಡಿದ್ದು ಇದರಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಸೇರಿಸಿದ್ದಾರೆ. ಆ ಮೂಲಕ ಜವಾಬ್ದಾರಿಯುತ ಸ್ಥಾನವನ್ನು ನೀಡಿದ್ದಾರೆ. ಯಾವತ್ತೂ ಹೈಕಮಾಂಡ್ ತೀರ್ಮಾನವನ್ನು ತಳ್ಳಿ ಹಾಕಿದವರಲ್ಲ. ಅದನ್ನು ನಿಷ್ಠೆಯಿಂದ ಮಾಡಿದವರು ಡಿಕೆಶಿ. ಇದೀಗ ಸಿಎಂ ಅಧಿಕಾರ ಹಸ್ತಾಂತರದ ತಿಕ್ಕಾಟಗಳು ನಡೆಯುತ್ತಿರುವಾಗಲೇ ಅಸ್ಸಾಂ ಚುನಾವಣೆಯಲ್ಲಿ ವೀಕ್ಷಕ ಸ್ಥಾನದ ಜವಾಬ್ದಾರಿ ನೀಡಿರುವುದು ಡಿ.ಕೆ.ಶಿವಕುಮಾರ್ ಅವರಿಗೆ ಅಗ್ನಿಪರೀಕ್ಷೆ ಎಂದರೆ ತಪ್ಪಾಗಲಾರದು.

ಅಸ್ಸಾಂನಲ್ಲಿ ಇವತ್ತು ಸಿಎಂ ಆಗಿರುವ ಹಿಮಂತ್ ಬಿಸ್ವಾ ಶರ್ಮಾ ಒಂದು ಕಾಲದಲ್ಲಿ ಕಾಂಗ್ರೆಸ್‌ನ ಪ್ರಮುಖ

☞14

# ಸೌಜನ್ಯ ಫೈಲ್ಸ್



14

ನಿರೂಪಣೆ :

ಮೋಹನ್ ಬೋಳಂಗಡಿ

# ಸೌಜನ್ಯ ಮೃತದೇಹ ಹಸ್ತಾಂತರವಾದದ್ದು ಯಾರಿಗೆ ?!

**ಕೊ**ಲೆ ಪ್ರಕರಣದ ವಿಚಾರಣೆಯು ಆರೋಪಿಗೆ ಶಿಕ್ಷೆ ವಿಧಿಸಲು ಕಾರಣವಾಗುವ ಅಂಶಗಳ ಮೇಲೆ ನಿಲ್ಲುತ್ತದೆ. ಸೌಜನ್ಯ ಪ್ರಕರಣದ ಮೊದಲ ಸಾಕ್ಷಿ ಅಂದರೆ ಆಕೆಯ ತಂದೆ ಚಂದಪ್ಪ ಗೌಡರು ನ್ಯಾಯಾಲಯದಲ್ಲಿ ನೀಡಿದಂತಹ ಹೇಳಿಕೆಯು ಸಂಪೂರ್ಣವಾಗಿ ಪ್ರಾಸಿಕ್ಯೂಷನ್‌ಗೆ ವಿರುದ್ಧವಾಗಿತ್ತು. ಅವರನ್ನು ಪ್ರಾಸಿಕ್ಯೂಷನ್ ಪರ ವಕೀಲರು ಅಡ್ಡ ಸವಾಲಿಗೆ ಗುರಿಪಡಿಸಿರಲಿಲ್ಲ. ಸೌಜನ್ಯ ನಾಪತ್ತೆಯಿಂದ ಮೃತದೇಹ ಪತ್ತೆಯಾಗಿ ಎಲ್ಲಾ ರೀತಿಯ ಮರಣೋತ್ತರ ಪ್ರಕ್ರಿಯೆಗಳು ನಡೆಯುವವರೆಗೂ ಚಂದಪ್ಪ ಗೌಡರು ಪ್ರತ್ಯಕ್ಷ ಸಾಕ್ಷಿಯಾಗಿದ್ದರು. ಅವರ ಹೇಳಿಕೆಯ ಪ್ರಕಾರವೇ ಸೌಜನ್ಯಳ ಮರಣೋತ್ತರ ಪರೀಕ್ಷೆ ನಡೆದ ಬೆಳ್ತಂಗಡಿ ಸರಕಾರಿ ಆಸ್ಪತ್ರೆಯ ಬಳಿ ಅವರು ಇದ್ದರು. ಮರಣೋತ್ತರ ಪರೀಕ್ಷೆ ಆದ ನಂತರ ಸೌಜನ್ಯಳ ಮೃತದೇಹವನ್ನು ಪೊಲೀಸರು ತಮ್ಮ ವಶಕ್ಕೆ ನೀಡಿದ್ದಾರೆ ಎಂದು ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ. ತದನಂತರವೇ ಮೃತದೇಹವನ್ನು ಮನೆಗೆ ಕೊಂಡೊಯ್ದು ಅಂತಿಮ ಸಂಸ್ಕಾರ ಮಾಡಲಾಗಿದೆ ಎಂದು ಹೇಳಿದ್ದರು. ಆದರೆ ಈ ಪ್ರಕರಣದ ಎರಡನೇಯ ಸಾಕ್ಷಿ ಅಂದರೆ ಸೌಜನ್ಯಳ ಮೃತದೇಹ ಪತ್ತೆಯಾದ ನಂತರ ಪೊಲೀಸ್ ಠಾಣೆಗೆ ಅತ್ಯಾಚಾರ ಮತ್ತು ಕೊಲೆಯ ಬಗ್ಗೆ ದೂರು ನೀಡಿದಂತಹ ಸೋದರ ಸಂಬಂಧಿ ಜಗದೀಶ್ ನೀಡಿರುವ ಹೇಳಿಕೆಯ ಪ್ರಕಾರ ಸೌಜನ್ಯಳ ಮೃತದೇಹವನ್ನು ಪೊಲೀಸರು ರಶೀದಿ ಮೂಲಕ ಹಸ್ತಾಂತರ ಮಾಡಿದ್ದಾರೆ. ಆ ಮೃತದೇಹವನ್ನು ಪಾಂಗಾಳದ ಮನೆಗೆ ಕೊಂಡೊಯ್ದು ವಿಧಿವಿಧಾನಗಳ ಪ್ರಕಾರ ಅಂತ್ಯಕ್ರಿಯೆ ನಡೆಸಲಾಗಿದೆ. ಚಂದಪ್ಪ ಗೌಡರು ಹೇಳುವುದಕ್ಕೂ ಜಗದೀಶ್ ಹೇಳುವುದಕ್ಕೂ ವ್ಯತ್ಯಾಸಗಳಿವೆ. ಈ ಪ್ರಕರಣದ ಆರೋಪಿ ಸಂತೋಷ್‌ರಾವ್‌ನನ್ನು ಚಂದಪ್ಪಗೌಡರಾಗಲಿ, ಜಗದೀಶ್ ಆಗಲಿ ನೋಡಿರುವುದೇ ಇಲ್ಲ. ಕೊಲೆ ಪ್ರಕರಣದಲ್ಲಿ ಅವರು ಪ್ರತ್ಯಕ್ಷ ಸಾಕ್ಷಿಗಳಲ್ಲ. ಆದರೆ ನ್ಯಾಯಾಲಯದ ವಿಚಾರಣೆಯ ಸಂದರ್ಭದಲ್ಲಿ ಕಟಕಟೆಯಲ್ಲಿ ನಿಂತಿದ್ದಂತಹ ಸಂತೋಷ್‌ರಾವ್ ಈ ಪ್ರಕರಣದ ಆರೋಪಿ ಅಲ್ಲ ಎಂದು ಹೇಳಿಕೆ ನೀಡಿದ್ದಾರೆ. ಹಾಗಾದರೆ ಜಗದೀಶ್ ಅವರ ಹೇಳಿಕೆಯನ್ನೇ ಗಮನಿಸಿದರೆ ಅವರೂ ಕೂಡಾ ಪ್ರಾಸಿಕ್ಯೂಷನ್ ವಿರುದ್ಧವಾಗಿಯೇ ಸಾಕ್ಷ್ಯ ನುಡಿದಿದ್ದಾರೆ.

## ಜಗದೀಶ್ ಹೇಳಿಕೆ ಏನು?

2012 ಅಕ್ಟೋಬರ್ 9ರಂದು ಸೌಜನ್ಯ ನಾಪತ್ತೆಯಾಗಿದ್ದಳು. ಆ ಸಂದರ್ಭದಲ್ಲಿ ಜಗದೀಶ್‌ಗೆ ಮಾಹಿತಿ ಸಿಕ್ಕಿದ್ದರೂ ಸ್ವಂತ ಕಾರಣದಿಂದ ಬಂದಿರಲಿಲ್ಲ. ಆದರೆ ಮರುದಿನ ಮೃತದೇಹ ಸಿಕ್ಕಿದ ಸಂದರ್ಭದಲ್ಲಿ ಜಗದೀಶ್ ಬಂದಿದ್ದರು. ಜಗದೀಶ್ ಬೆಳ್ತಂಗಡಿ ತಾಲೂಕಿನ ಪಡಂಗಡಿ ಗ್ರಾಮದ ಕಜಬೆಟ್ಟು ಮನೆಯ ನೋಣಯ್ಯ ಗೌಡ ಎಂಬವರ ಮಗ ಇವರು ಕೃಷಿಕ. ಇವರಿಗೆ ಚಂದಪ್ಪ ಗೌಡರು ಸಂಬಂಧದಲ್ಲಿ ಸಹೋದರರಾಗಿರುತ್ತಾರೆ. ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ಈ ರೀತಿಯಾಗಿ ತನ್ನ ಸ್ವ ಅಕ್ಷರದಲ್ಲಿ ಬರೆದು ನೀಡಿರುತ್ತಾರೆ. ನನ್ನ ಅತ್ತಿಗೆ ಕುಸುಮಾವತಿ ಎಂಬವರ ಮನೆಯೂ ಧರ್ಮಸ್ಥಳ ಗ್ರಾಮದ ಪಾಂಗಾಳ ಎಂಬಲ್ಲಿ ಇದ್ದು, ಅತ್ತಿಗೆಗೆ ನಾಲ್ಕು ಹೆಣ್ಣು ಒಂದು ಗಂಡು ಇದ್ದು, ಅತ್ತಿಗೆಯ ಗಂಡ ಚಂದಪ್ಪ ಗೌಡರು ಅಣ್ಣನಾಗಿರುತ್ತಾರೆ. ಅವರು ಪಿಡಬ್ಲ್ಯೂಡಿ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದಾರೆ. ಅವರ ಎರಡನೇಯ ಮಗಳು ಸೌಜನ್ಯ (17) ಎಂಬವಳು ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಕಲಿಯುತ್ತಿದ್ದಾಳೆ. ಅವಳು ಪ್ರತಿದಿನ ಕಾಲೇಜಿಗೆ ಮನೆಯಿಂದ ಬಸ್ಸಿನಲ್ಲಿ ಬಂದು ಹೋಗುವುದಾಗಿದೆ. ಹೀಗಿರುತ್ತಾ ನಿನ್ನೆ ದಿನ ಅಂದರೆ 9-10-2012ರಂದು ಎಂದಿನಂತೆ ಅವಳ ಮನೆಯಿಂದ ಕಾಲೇಜಿಗೆ ಹೋದವಳು ಸಂಜೆ ಕಾಲೇಜು ಬಿಟ್ಟು ಬಸ್ಸಿನಲ್ಲಿ ನೇತ್ರಾವತಿ ಸ್ನಾನಘಟ್ಟದ ಬಳಿ ಇಳಿದು ಮನೆ ಕಡೆಗೆ ಬರುತ್ತಿದ್ದವಳು ಮನೆಗೆ ಬಾರದೆ ಕಾಣೆಯಾಗಿದ್ದಳು. ಈ ಬಗ್ಗೆ ನಿನ್ನೆ ದಿನ ಅಂದರೆ ತಾ. 9.10.2012 ರಂದು ರಾತ್ರಿ ವೇಳೆಯಲ್ಲಿ ಅಣ್ಣ ಚಂದಪ್ಪ ಗೌಡರು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಅದರಂತೆ ಸೌಜನ್ಯಳು ಕಾಣೆಯಾದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಕಾಣೆಯಾದ ಸೌಜನ್ಯಳನ್ನು ನಾನು ಉಮೇಶ, ರಮೇಶ, ಗಣೇಶ, ದಿನೇಶರೊಂದಿಗೆ ಧರ್ಮಸ್ಥಳ ಮಣ್ಣಸಂಕದ ಬಳಿ ಹುಡುಕುತ್ತಿರುವಾಗ ಈ ದಿನ ತಾ.10.10.2012ರಂದು ಸುಮಾರು 12.30 ಗಂಟೆಯ ವೇಳೆಗೆ ಧರ್ಮಸ್ಥಳ ಗ್ರಾಮದ ಪ್ರಕೃತಿ ಚಿಕಿತ್ಸಾಲಯ ಶಾಂತಿವನ ಗೇಟಿನ ಎದುರು ಧರ್ಮಸ್ಥಳ ಬೆಳ್ತಂಗಡಿ ರಸ್ತೆಯ ಪಶ್ಚಿಮ ಭಾಗದಲ್ಲಿ ಹರಿದು



ಚಂದಪ್ಪ ಗೌಡ

ಹೋಗುವ ತೋಡಿನ ಸಮೀಪ ಮಣ್ಣಸಂಕ ಎಂಬಲ್ಲಿ ಕಾಡು ಗಿಡಗಳಿರುವ ಪ್ರದೇಶದಲ್ಲಿ ಮರವೊಂದರ ಬುಡದ ಬಳಿ ಯಾರೋ ದುಷ್ಕರ್ಮಿಗಳು ಸೌಜನ್ಯಳನ್ನು ಬಲತ್ಕಾರವಾಗಿ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದು ಮೃತಶರೀರ ಸ್ಥಳದಲ್ಲಿಯೇ ಇರುವುದು ಕಂಡು ಬರುತ್ತಿದೆ. ಸೌಜನ್ಯಳು ಧರಿಸಿಕೊಂಡಿದ್ದ ಕಾಲೇಜಿನ ಸಮವಸ್ತ್ರವನ್ನು ದುಷ್ಕರ್ಮಿಗಳು ಹರಿದಿದ್ದು, ಮೃತದೇಹದ ಮೇಲೆ ಅರೆಬರೆ ಬಟ್ಟೆ ಇದ್ದು, ಎಡಗೈಯನ್ನು ಅವಳು ಧರಿಸಿದ್ದ ಸಮವಸ್ತ್ರದ ಚೂಡಿದಾರದ ಶಾಲಿನಿಂದ ಪಕ್ಕದ ಗಿಡಕ್ಕೆ ಕಟ್ಟಿದ್ದು, ಶಾಲೆಯ ಬ್ಯಾಗ್ ಪಕ್ಕದಲ್ಲಿಯೇ ಇರುತ್ತದೆ. ದುಷ್ಕರ್ಮಿಗಳು ಸೌಜನ್ಯಳನ್ನು ಬಲತ್ಕಾರವಾಗಿ ಅತ್ಯಾಚಾರ ಮಾಡಿ ಕೊಲೆ ಮಾಡಿದ್ದು, ಈ ಬಗ್ಗೆ ಆರೋಪಿಗಳನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಾಗಿಯೂ ನಿನ್ನೆ ದಿನ ತಾ. 9.10.2012ರ ಸಂಜೆ 4.15 ಗಂಟೆಯಿಂದ ಈ ದಿನ ತಾ. 10.10.2012 ರಂದು ಮಧ್ಯಾಹ್ನ 12.30 ಗಂಟೆಯ ಮಧ್ಯೆ ಆಗಿರಬಹುದು. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕಾಗಿ ವಿನಂತಿ. ಈ ರೀತಿ ಜಗದೀಶ್ ನೀಡಿದ ದೂರಿನಂತೆ ಬೆಳ್ತಂಗಡಿ ಠಾಣೆಯಲ್ಲಿ ಅಪರಾಧ ಕ್ರಮಾಂಕ 250/12 ಕಲಂ 376,302 ರಂತೆ ಕೇಸು ದಾಖಲಾಗಿತ್ತು. ತದನಂತರ ಮೃತದೇಹವನ್ನು ಮಹಜರು ಮೂಲಕ ಅಲ್ಲಿಂದ ಸ್ಥಳಾಂತರಿಸಿ ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತು. ಅಲ್ಲಿ ವೈದ್ಯಾಧಿಕಾರಿ ಡಾ. ಆದಂ ಮತ್ತು ಡಾ. ರಶ್ಮಿ ಅವರು ಮರಣೋತ್ತರ ಪರೀಕ್ಷೆ ನಡೆಸಿ ಅದೇ ದಿನ ಅಂದರೆ ತಾ. 10.10.2012ರಂದು ಮೃತದೇಹವನ್ನು ಮತ್ತು ಮೃತಶರೀರದ ಮೇಲಿದ್ದ ಚಿನ್ನದ ಆಭರಣಗಳನ್ನು ಬೆಳ್ತಂಗಡಿ ಠಾಣೆಯ ಮಹಿಳಾ ಸಿಬ್ಬಂದಿ ಸವಿತಾ ಅವರು ಜಗದೀಶ್ ಅವರಿಗೆ ನೀಡಿದ್ದರು. ಈ ಬಗ್ಗೆ ನೀಡಿದ್ದ ರಶೀದಿಗೆ ಅವರು ಸಹಿ ಹಾಕಿದ್ದರು.

ಈ ಬಗ್ಗೆ ಜಗದೀಶ್ ಅವರು 2016 ಅಕ್ಟೋಬರ್ 24ರಂದು ಬೆಂಗಳೂರಿನ 50ನೇ ಹೆಚ್ಚುವರಿ ನಗರ ಮತ್ತು ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿದ್ದರು. ಪ್ರಾಸಿಕ್ಯೂಷನ್ ಪರ ವಕೀಲರು ಅವರ ಮುಖ್ಯ ವಿಚಾರಣೆ ನಡೆಸಿದ್ದರು. ಜಗದೀಶ್ ಅವರು ಆ ವಿಚಾರಣೆಯಲ್ಲಿ ಚಂದಪ್ಪ ಗೌಡರ ಹೆಂಡತಿ ತನ್ನ ಚಿಕ್ಕಪ್ಪನ ಮೊಮ್ಮಗಳು. ಚಂದಪ್ಪ ಗೌಡರು ಸಂಬಂಧದಲ್ಲಿ ಅಣ್ಣ ಆಗಬೇಕು. ಅವರ ಎರಡನೇಯ ಮಗಳು ಸೌಜನ್ಯ. ನಾವು ಅವರ ಮನೆಗೆ ಹೋಗಿ ಬರುವುದು ಮಾಡುತ್ತೇವೆ. ನಮ್ಮ ಮತ್ತು ಅವರ ಮನೆಗೆ 25ಕಿ.ಮೀ. ಅಂತರ ಇದೆ. ದಿ.9.10.2012ರಂದು ವಿಠ್ಠಲಗೌಡರು ನನಗೆ ಫೋನ್ ಮಾಡಿ ಸೌಜನ್ಯ ಕಾಲೇಜಿಗೆ ಹೋದವಳು ಸಂಜೆ 6.00 ಗಂಟೆ ಆದರೂ ಬರಲಿಲ್ಲ. ನಾವು ಹುಡುಕಾಡುತ್ತಿದ್ದೇವೆ. ಪೊಲೀಸ್ ಠಾಣೆಗೆ ಮತ್ತು ಧರ್ಮಸ್ಥಳಕ್ಕೆ ಹೋಗುತ್ತಿದ್ದೇವೆ ನೀವು ತಕ್ಷಣ ಬನ್ನಿ ಎಂದು ಹೇಳಿದ್ದರು. ನನ್ನ ಹೆಂಡತಿ ಡೆಲಿವರಿ ಆಗಿ ಒಂದು ತಿಂಗಳ ಮಗು ಅವಳು ಮನೆಯಲ್ಲಿ ಒಬ್ಬಳೇ ಇದ್ದುದರಿಂದ ನಾನು ಆ ದಿನ ಹೋಗಲು ಆಗಲಿಲ್ಲ. ಮಾರನೇ ದಿನ ಬೆಳಗ್ಗೆ 6.00 ಗಂಟೆಗೆ ನಾನು ಬೆಳ್ತಂಗಡಿಗೆ ಹೋಗಿ ಅವರ ಜೊತೆ ಸೇರಿಕೊಂಡೆ. ಸೌಜನ್ಯಳ ಫೋಟೋ ತೆಗೆದುಕೊಂಡು ಠಾಣೆಗೆ ಬರುವಂತೆ ಹೇಳಿದ್ದು, ನಾವು ಸುವರ್ಣ ಸ್ಟುಡಿಯೋಗೆ ಹೋಗಿ ಫೋಟೋ ತೆಗೆದುಕೊಂಡು ಪೊಲೀಸ್ ಠಾಣೆಗೆ ಹೋದೆವು. ಪೊಲೀಸ್ ಠಾಣೆಯಲ್ಲಿ ನಮ್ಮ ಜೊತೆ ಐತಪ್ಪ ಎಂಬ ಪಿಸಿಯನ್ನು ಕಳುಹಿಸಿದ್ದು, ಕಾಲೇಜಿಗೆ ಹೋಗಿ ವಿಚಾರ ಮಾಡುವಂತೆ ಹೇಳಿದರು. ಆ ಪ್ರಕಾರ ನಾವು ಕಾಲೇಜಿನ ಪ್ರಿನ್ಸಿಪಾಲರ ಕಚೇರಿಗೆ ಹೋಗಿ ಮಾತನಾಡಿದೆವು. ನಮ್ಮ ಜೊತೆ ವಿಠ್ಠಲಗೌಡರು ಇದ್ದರು. ನಾವು ಪ್ರಿನ್ಸಿಪಾಲರನ್ನು ಸೌಜನ್ಯಳ ಬಗ್ಗೆ ವಿಚಾರಿಸಿದಾಗ ಆಕೆ ಒಳ್ಳೇ ಹುಡುಗಿ, ಸೌಮ್ಯ ಸ್ವಭಾವದವಳು. ಕಲಿಯುವುದರಲ್ಲಿಯೂ ಉತ್ತಮ ಇದ್ದಾಳೆ ಎಂದು ಹೇಳಿದರು. ಏನಾದರು ವಿಷಯ ಇದ್ದರೆ ತಿಳಿಸುತ್ತೇವೆ, ನೀವು ಹೊರಗಡೆ ಹೋಗಬಹುದು ಎಂದು ತಿಳಿಸಿದರು.

ನಾವು ಹೊರಗೆ ಬಂದಾಗ ಧರ್ಮಸ್ಥಳದಿಂದ ಗಣೇಶ್ ಅವರು ವಿಠ್ಠಲ್‌ರವರಿಗೆ ಫೋನ್ ಮಾಡಿ ನೇತ್ರಾವತಿಯ ಮಣ್ಣಸಂಕದ ಬಳಿ ಒಂದು ಶವ ಸಿಕ್ಕಿದೆ, ತುರ್ತಾಗಿ ಅಲ್ಲಿಗೆ ಬನ್ನಿ ಎಂದು ಹೇಳಿದರು. ನಾವು ಠಾಣೆಗೆ ತಕ್ಷಣ ಫೋನ್ ಮಾಡಿದೆವು. ಅವರು ಅಲ್ಲಿಗೆ ಬಂದು ನಮ್ಮನ್ನು ಕರೆದುಕೊಂಡು ಹೋದರು. ನಾವು ಹೋಗುವಷ್ಟರಲ್ಲಿ 500-600 ಜನ ಅಲ್ಲಿ ಸೇರಿದ್ದರು. ವಿಠ್ಠಲ್‌ರವರು ನನ್ನಿಂದ ಮುಂದೆ ಹೋಗಿ ಶವವನ್ನು ನೋಡಿದ ನಂತರ ಅವರು ಸುಸ್ತಾಗಿದ್ದು ಅವರನ್ನು ಮನೆಗೆ ಕರೆದುಕೊಂಡು ಹೋದರು. ವಿಠ್ಠಲ್‌ರವರು ಸೌಜನ್ಯಳ ಶವ ಎಂದು ನನಗೆ ಕೂಗಿ ಹೇಳಿದರು. ನಾನು ಅಲ್ಲಿ ಹೋಗಿ ನೋಡಿದಾಗ ಅದು ಸೌಜನ್ಯಳ ಶವ ಎಂದು ಖಾತರಿ ಆಯಿತು. ನಾನು ಹೋಗಿ ನೋಡುವಾಗ ಶವದ ಮೇಲೆ ಬಟ್ಟೆ ಹಾಕಿದ್ದು ಅದು ಅರೆನಗ್ನ ಸ್ಥಿತಿಯಲ್ಲಿತ್ತು. ಸೌಜನ್ಯಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೆಂದು ಗೊತ್ತಾಯಿತು. ಸ್ಥಳದಲ್ಲಿ ಪೊಲೀಸರು ವಿಡಿಯೋ ಎಲ್ಲಾ ಮಾಡಿದರು. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿದರು. ನಂತರ ಶವವನ್ನು ಬೆಳ್ತಂಗಡಿಯ ಶವಾಗರಕ್ಕೆ ತೆಗೆದುಕೊಂಡು ಹೋದರು, ನಾನು ಶವವನ್ನು ನೋಡಿದಾಗ ಆಕೆಯ ಕೈಗಳನ್ನು ಶಾಲ್‌ನಿಂದ ಕಟ್ಟಿದ್ದು ಐಡಿ ಕಾರ್ಡ್‌ನಿಂದ ಕುತ್ತಿಗೆಗೆ ಬಿಗಿದಿದ್ದ ಗುರುತು ಇತ್ತು. ನಾನು ಈ ಬಗ್ಗೆ ಲಿಖಿತ ದೂರನ್ನು ಬೆಳ್ತಂಗಡಿ ಪೊಲೀಸ್ ಠಾಣೆಗೆ ಕೊಟ್ಟಿದ್ದೇನೆ. ಶವವನ್ನು ನಮಗೆ ಕೊಟ್ಟ ನಂತರ ಪೋಲೀಸರು ಒಂದು ಸ್ವೀಕೃತಿಗೆ ಸಹಿ ಪಡೆದಿದ್ದರು. ಪೋಸ್ಟ್ ಮಾರ್ಟಮ್‌ನ್ನು ಬೆಳ್ತಂಗಡಿ ಶವಾಗಾರದಲ್ಲಿ ಮಾಡಿದ್ದಾರೆ. ಸಿಬಿಐ ಮತ್ತು ಬೆಳ್ತಂಗಡಿ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿದ್ದಾರೆ.

## ಪಾಟೀ ಸವಾಲು

ಶವ ಸಿಕ್ಕ ಸಮಯದಲ್ಲಿ ಸುಮಾರು ಒಂದು ಸಾವಿರ ಜನ ಸೇರಿದ್ದರು. ಪೋಸ್ಟ್ ಮಾರ್ಟಮ್ ಮಾಡುವಾಗ ನನ್ನನ್ನು ಹೊರಗೆ ಇರಲು ಹೇಳಿದ್ದು ಪೊಲೀಸ್ ಸಿಬ್ಬಂದಿ, ಮತ್ತು ಅಕ್ಕಪಕ್ಕದ ಜನರು ಇದ್ದರು. ಪೋಸ್ಟ್‌ಮಾರ್ಟಂ ಆದಾಗ 7.00ರಿಂದ 8.00 ಗಂಟೆ ಆಗಿತ್ತು. ಪೊಲೀಸರು ಮಾರನೆಯ ದಿನ ಮನೆಗೆ ಬರುತ್ತೇವೆ, ಸೌಜನ್ಯಳ ಒಳ ಉಡುಪು ಕೊಡಬೇಕೆಂದು ಎಂದು ನನಗೆ ಹೇಳಿದ್ದರು. ಅದರಂತೆ ಚಂದಪ್ಪಗೌಡರವರು ಆಕೆಯ ಒಳ ಉಡುಪನ್ನು ಕೊಟ್ಟಿದ್ದಾರೆ. ದಿ. 9,10,11 ಈ ಮೂರು ದಿನಗಳಂದು ಜೋರು ಮಳೆ ಇತ್ತು ಎಂಬುದು ಸರಿ.

ಸೌಜನ್ಯ ಪ್ರಕರಣದ ಕೊಲೆ ಮತ್ತು ಅತ್ಯಾಚಾರ ದೂರು ನೀಡಿದ್ದ ಜಗದೀಶ್ ಅವರ ಮೊದಲ ಹಂತದ ವಿಚಾರಣೆ ಮುಗಿದಿತ್ತು. ಆ ಸಂದರ್ಭದಲ್ಲಿ ಅವರ ಮರು ವಿಚಾರಣೆ ಇಲ್ಲ ಎಂದು ಹೇಳಲಾಗಿತ್ತು. ಆದರೆ ಆ ವಿಚಾರಣೆ ನಡೆದು ಆರು ವರ್ಷಗಳ ಬಳಿಕ ಅಂದರೆ 4.4.2022ರಂದು ಜಗದೀಶ್ ಅವರನ್ನು ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರು ಮತ್ತೆ ಪಾಟೀ ಸವಾಲಿಗೆ ಗುರಿಪಡಿಸಿದ್ದರು. ಆ ದಿನ ನಡೆದ ಪಾಟೀ ಸವಾಲಿಗೆ ಜಗದೀಶ್ ಅವರು ಉತ್ತರಿಸಿದ್ದು ಹೀಗೆ? ಸೌಜನ್ಯ ಕಾಣೆಯಾದ ದಿನ ದೂರು ನೀಡಲು ಹೋಗಿರಲಿಲ್ಲ. ಆ ದಿನ ಕಾಡಿನೊಳಗೆ ಹುಡುಕಾಡಲೂ ಹೋಗಿರಲಿಲ್ಲ. ಮಣ್ಣಸಂಕದ ಪಕ್ಕ ತೋಡು ಹರಿಯುತ್ತದೆ. ಅದು 15 ಮೀ. ಅಗಲ ಇದೆ. 10ರಿಂದ 15 ಅಡಿ ಆಳ ಇದೆ. ಮಾರನೇ ದಿನ ನಾನು ನೋಡಿದಾಗ ಆ ತೋಡಿನಲ್ಲಿ ಸುಮಾರು 3 ಅಡಿ ನೀರು ಇತ್ತು. ಶವ ದೊರೆತ ನಂತರ ನಾನು ಅಲ್ಲಿಗೆ ಹೋದೆ. ಶವ ದೊರೆತ ಸ್ಥಳ ಉಜಿರೆ ಧರ್ಮಸ್ಥಳ ರಸ್ತೆಗೆ ಕಾಣುತ್ತದೆ. ನಾನು ನೋಡಿದಾಗ ಶವದ ಮೇಲೆ ಯಾವುದೇ ಒಳ ಉಡುಪುಗಳು ಇರಲಿಲ್ಲ. ಶವದ ಅಕ್ಕಪಕ್ಕದಲ್ಲಿಯೂ ಒಳ ಉಡುಪುಗಳು ಇರಲಿಲ್ಲ. ನೊಂದ ಬಾಲಕಿ ಶಾಲೆಗೆ ತೆಗೆದುಕೊಂಡು ಹೋಗುತ್ತಿದ್ದ ಬ್ಯಾಗ್ ಅಲ್ಲಿ ಇತ್ತು. ಅದರಲ್ಲಿ ಪುಸ್ತಕಗಳು ಇತ್ತು. ಅದು ಒದ್ದೆಯಾಗಿರಲಿಲ್ಲ. ಪುಸ್ತಕದಲ್ಲಿದ್ದ ಚೀಟಿ ಒದ್ದೆಯಾಗಿರಲಿಲ್ಲ. ಚೀಟಿಯನ್ನು ಪೊಲೀಸರು ವಶಪಡಿಸಿಕೊಂಡರು. ಆ ಸ್ಥಳದ 200-300ಮೀ. ದೂರದಲ್ಲಿ ಯಾರಾದರೂ ಟೆಂಟ್ ಹಾಕಿಕೊಂಡು ಕುಳಿತಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಶವದ ಪಂಚನಾಮೆ ಮುಗಿಸಿದಾಗ ಸಂಜೆ ಸುಮಾರು 4.00 ಗಂಟೆ ಆಗಿತ್ತು. ಆರೋಪಿಯನ್ನು ಬಂಧಿಸಿದ್ದ ಬಗ್ಗೆ ಪೊಲೀಸರು ನನಗೆ ತಿಳಿಸಿದ್ದರು. ಮಹಜರು ಮಾಡುವಾಗ ನಮ್ಮನ್ನು ಕರೆದುಕೊಂಡು ಹೋಗಿರಲಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿ. ಆಕೆಯನ್ನು ಬೇರೆಲ್ಲೋ ಅತ್ಯಾಚಾರ ಮಾಡಿ ಕೊಲೆ ಮಾಡಿ ಅಲ್ಲಿಗೆ ತಂದು ಹಾಕಿದ್ದಾರೆ ಎಂದರೆ ಸರಿ. ಆರೋಪಿಯ ಬಂಧನವಾದ ನಂತರ ಸ್ಥಳೀಯ ಪ್ರದೇಶಗಳಲ್ಲಿ ಬೇರೆ ಯಾರೋ ಕೃತ್ಯ ಮಾಡಿದ್ದಾರೆ ಎಂದು ಪ್ರತಿಭಟನೆಗಳು ನಡೆದಿದ್ದವು ಎಂದರೆ ಸರಿ. ಜಗದೀಶ್ ಅವರು ಈ ಪ್ರಕರಣದ ಪ್ರಾಸಿಕ್ಯೂಷನ್ ಸಾಕ್ಷಿ. ಪಾಟೀ ಸವಾಲಿಗೆ ಉತ್ತರಿಸುವ ವೇಳೆ ಕೆಲವೊಂದು ಅಂಶಗಳನ್ನು ಅನಗತ್ಯವಾಗಿ ಪ್ರಸ್ತಾಪಿಸಿದ್ದಾರೆ. ಇದರ ಪರಿಣಾಮವಾಗಿಯೇ ಸೌಜನ್ಯ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಸಂಶಯದ ಲಾಭ ಸೃಷ್ಟಿಯಾಗಿತ್ತು. ಇದು ಆರೋಪಿಗೆ ಲಾಭವಾಗಿತ್ತು.

ಮುಂದುವರಿಯುವುದು.....

## ಬೆಳಗಾವಿ : ಚಿಕ್ಕೋಡಿ ಇಂದಿರಾ ನಗರದಲ್ಲೊಂದು ಹೃದಯ ವಿದ್ರಾವಕ ಘಟನೆ...

# ಹೆತ್ತ ತಂದೆಯಿಂದಲೇ ಕುಡುಕ ಮಗನ ಭೀಕರ ಕೊಲೆ

## ಹಂತಕ ತಂದೆ ಮತ್ತು ಆತನ ಇಬ್ಬರು ಸಹಚರರು ಸೇರಿ ಮೂವರ ಬಂಧನ!


ತಂದೆಗೆ ಬಲಿಯಾದ ಕುಡುಕ ಕಿರಣ ಆಲೂರೆ

**ಆತ 31 ವರ್ಷದ ಅವಿವಾಹಿತ ತರುಣ. ದುಡಿಯದೇ ದುಶ್ಚಟಗಳ ದಾಸನಾಗಿ, ರೌಡಿಶೀಟರ್‌ನಾಗಿ ಅಂಡಲೆಯುತ್ತಿದ್ದನು. ಮನೆಯಲ್ಲಿ ಕಿತ್ತು ತಿನ್ನುವ ಬಡತನವಿತ್ತು. ತಂದೆ ಹೋಟೆಲಿನಲ್ಲಿ ಸರ್ವರ್, ತಾಯಿ ಅವರಿವರ ಮನೆಗೆಲಸ ಮಾಡಿ ಜೀವನ ನಡೆಸುತ್ತಿದ್ದಳು. ಮಗ ಮಾತ್ರ ಸಾರಾಯಿ, ಗಾಂಜಾ ಚಟಕ್ಕೆ ಬಿದ್ದು ತಂದೆ-ತಾಯಿಗೆ ಇನ್ನಿಲ್ಲದ ಕಾಟ ಕೊಡುತ್ತಿದ್ದನು. ಹಣ ನೀಡದಿದ್ದರೆ ಕೊಲೆ ಮಾಡುತ್ತೇನೆ ಎಂದು ಹೆದರಿಸುತ್ತಿದ್ದನು. ಹೀಗಾಗಿ ತಂದೆ-ತಾಯಿ ಜೀವ ಭಯದಿಂದ ಮನೆ ತೊರೆದಿದ್ದರು. ಇತ್ತೀಚಿಗೆ ಕುಡುಕ ಮಗ ತನ್ನ ಖರ್ಚಿಗೆ ಹಣಕ್ಕಾಗಿ ತಂದೆ ಕೆಲಸ ಮಾಡುವ ಹೋಟೆಲಿಗೆ ಹೋಗಿ ಜಗಳ ಕಾಯ್ದಿದ್ದಾನೆ. ಈತನ ಕಾಟಕ್ಕೆ ರೋಸಿದ್ದ ತಂದೆ ಉರುವಲು ಕಟ್ಟಿಗೆಯಿಂದ ಬಲವಾಗಿ ಥಳಿಸಿದಾಗ ಕುಡುಕ ಮಗ ಪ್ರಜ್ಞೆ ತಪ್ಪಿಬಿದ್ದಿದ್ದಾನೆ. ತಮಗೆ ಕಂಟಕನಾಗಿರುವ ಈತನನ್ನು ಕೊಲೆ ಮಾಡಿಬಿಡಲು ನಿರ್ಧರಿಸಿ ಹೋಟೆಲ್ ಮಾಲಿಕ ಮತ್ತು ಸರ್ವರ್‌ನ ನೆರವಿನಿಂದ ಮಗನನ್ನು ಕಾರಿನಲ್ಲಿ ಎತ್ತಿಹಾಕಿಕೊಂಡು ಕುಟುಕು ಜೀವ ಹಿಡಿದಿದ್ದವನ ಕುತ್ತಿಗೆಗೆ ವೈರ್‌ನಿಂದ ಬಿಗಿದು ನಿರ್ಧಯವಾಗಿ ಕೊಲೆಗೈದರು. ನಂತರ ಮಗ ಹೃದಯಾಘಾತದಿಂದ ಸತ್ತಿದ್ದಾನೆ ಎಂದು ಕಥೆ ಕಟ್ಟಿದ ತಂದೆ ತನ್ನ ಸಂಬಂಧಿಗಳನ್ನು, ಮಗನ ಸ್ನೇಹಿತರನ್ನು ನಂಬಿಸಿ ತರಾತುರಿಯಲ್ಲಿ ವಿಧಿ-ವಿಧಾನ ಅನುಸರಿಸದೇ ಸುಟ್ಟು ಹಾಕಿದ್ದಾನೆ. ಇದೀಗ ತನ್ನ ಮಗನನ್ನೇ ಕ್ರೂರವಾಗಿ ಕೊಲೆಗೈದ ಪ್ರಕರಣವನ್ನು ಮಗನ ಸ್ನೇಹಿತರೇ ಬಯಲಿಗೆಳೆದು ಪೊಲೀಸರಿಗೆ ನೆರವಾಗಿದ್ದಾರೆ. ಪ್ರಕರಣದಲ್ಲಿ ತಂದೆ ಮತ್ತಿಬ್ಬರು ಸ್ನೇಹಿತರನ್ನು ಬಂಧಿಸಿದ ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳು ದಕ್ಷತೆ ಮೆರೆದಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ನಗರದಿಂದ ವರದಿಯಾಗಿದೆ.**



ಕೊಲೆಗಡುಕ ತಂದೆ ನಿಜಗುಣಿ ಆಲೂರೆ

ಹೆತ್ತ ತಂದೆಯೇ ತನ್ನ ಪರಮ ಕುಡುಕ ಮಗನನ್ನು ತನ್ನಿಬ್ಬರು ಸಂಗಡಿಗರೊಂದಿಗೆ ಸೇರಿಕೊಂಡು ನಿರ್ಧಯವಾಗಿ ಕೊಲೆಗೈದು 'ಹೃದಯಾಘಾತ'ದ ಕಥೆ ಕಟ್ಟಿ ಯಾವುದೇ ವಿಧಿ-ವಿಧಾನ ಇಲ್ಲದೇ ತರಾತುರಿಯಲ್ಲಿ ಸುಟ್ಟು ಹಾಕಿದ ಪ್ರಕರಣ ಬೆಳಗಾವಿ ಜಿಲ್ಲೆ ಚಿಕ್ಕೋಡಿಯ ಇಂದಿರಾನಗರದಲ್ಲಿ ದಿ. 07-01-2026ರಂದು ಬೆಳಕಿಗೆ ಬಂದಿದೆ. ಅಕ್ಷರಶಃ ಈ ಕೊಲೆಯ ಸುದ್ದಿ ಚಿಕ್ಕೋಡಿ ಪರಿಸರವನ್ನು ಬೆಚ್ಚಿ ಬೀಳಿಸಿದೆ. ಕೊಲೆ ಪ್ರಕರಣದಲ್ಲಿ ಈಗಾಗಲೇ ಹಂತಕ ತಂದೆ ಮತ್ತಿಬ್ಬರು ಸ್ನೇಹಿತರನ್ನು ಚಿಕ್ಕೋಡಿ ಪೊಲೀಸರು ಬಂಧಿಸಿ ಪ್ರಕರಣ ಭೇದಿಸಿದ್ದಾರೆ. ಒಟ್ಟಾರೆ ಇಡೀ ಪ್ರಕರಣದ ಸುತ್ತಮುತ್ತ ಏನು...? ಎತ್ತ ಎಂಬುದನ್ನು 'ಪೊಲೀಸ್ ನ್ಯೂಸ್' ವರದಿಯಾಗಿರಿಸಿದೆ.


ಎಸ್ಪಿ ಕೆ. ರಾಮರಾಜನ್


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ


ಸಿಪಿಐ ವಿಶ್ವನಾಥ ಚೌಗುಲೆ


ಪಿಎಸ್ಐ ಬಸಗೌಡ ನೇರ್ಲಿ

ಬೆಳಗಾವಿ
✍ ಮನ್ನಾಪೂರ

### ನತದೃಷ್ಟ ಕಿರಣ...

ಎಲ್ಲರಂತೆ ಬಾಳಿ ಬದುಕಬೇಕಾಗಿದ್ದ ಇಂದಿರಾ ನಗರದ ಕಿರಣ ನಿಜಗುಣಿ ಆಲೂರೆ (31 ವ) ಅಕ್ಷರಶಃ ತುಂಬಾ ನತದೃಷ್ಟ. ತಂದೆಯಿಂದಲೇ ನಿರ್ಧಯವಾಗಿ ಕೊಲೆ ಆಗಿದ್ದಾನೆ. ಕಳೆದ ಆರೇಳು ವರ್ಷಗಳಿಂದ ಕುಡಿತ ಮತ್ತು ಗಾಂಜಾ ಚಟಕ್ಕೆ ಅಂಟಿಕೊಂಡಿದ್ದ ಈತ ದುಡಿಯದೇ ಸಣ್ಣಪುಟ್ಟ ಕಾಸಿಗೂ ತಂದೆತಾಯಿಗಳನ್ನು ಗೋಳು ಹೊಯ್ದುಕೊಳ್ಳುತ್ತಿದ್ದನು. ಕಿರಣನ ಕೆಲವು ಜನ ಸ್ನೇಹಿತರು ಈತನನ್ನು ದುಶ್ಚಟಗಳಿಂದ ಹೊರ ತರಲು ಸಾಕಷ್ಟು ಶ್ರಮಿಸಿದ್ದರೂ ಪ್ರಯೋಜನವಾಗಲಿಲ್ಲ. ಕಿರಣ ಕೆಲವು ಪ್ರಸಂಗಗಳಲ್ಲಿ ಜಗಳ ಮಾಡಿಕೊಂಡು ಗಂಭೀರವಾದ ಪ್ರಕರಣಗಳನ್ನು ಮೈಮೇಲೆ ಹಾಕಿಕೊಂಡು ಪೊಲೀಸ್ ಠಾಣೆಯಲ್ಲಿ 'ರೌಡಿಶೀಟರ್' ಆಗಿದ್ದನು. ದಿನವಿಡಿ ಸಾರಾಯಿ ಮತ್ತು ಗಾಂಜಾ ಚಟ ಬೆಳೆಸಿಕೊಂಡು ಮನೆಯಲ್ಲಿ ಬಿದ್ದಿರುತ್ತಿದ್ದನು. ಖರ್ಚಿಗಾಗಿ ತಂದೆ-ತಾಯಿಗೆ ದುಡ್ಡು ಬೇಕೆಂದು ಇನ್ನಿಲ್ಲದಂತೆ ಗೋಳು ಹೊಯ್ದುಕೊಂಡಿದ್ದನು. ಮನೆಯಲ್ಲಿ ಕಿತ್ತು ತಿನ್ನುವ ಬಡತನ ಬೇರೆ ಇತ್ತು. ಇದ್ದೊಬ್ಬ ತಂಗಿ ಗೀತಾ ಮದುವೆಯಾಗಿ ತನ್ನ ಗಂಡನ ಮನೆಯಲ್ಲಿದ್ದಳು.


ಕಿರಣನ ಶವ ಸಾಗಿಸಲು ಬಳಸಿದ ಆರೋಪಿ ಉಸ್ಮಾನ್‌ನ ಕಾರು

### ತಂದೆ ನಿಜಗುಣಿ ಆಲೂರೆ

ನಿಜಗುಣಿ ಆಲೂರೆ (60 ವ) ಹುಟ್ಟಿನಿಂದ ಸುಖವೆಂದರೇನು? ಕಾಣದ ದುರಂತ ಜೀವಿ. ಪತ್ನಿ ಮಹಾದೇವಿ ಜತೆಗೆ ಚಿಕ್ಕೋಡಿಯ ಇಂದಿರಾನಗರದ ಗಣಪತಿ ಗುಡಿಯ ಪರಿಸರದಲ್ಲಿ ಮನೆ ಮಾಡಿಕೊಂಡು ಸುಮಾರು ವರ್ಷಗಳಿಂದಲೂ ಬದುಕು ನಡೆಸುತ್ತಿದ್ದನು. ಕಿರಣ ಎಂಬ ಗಂಡು ಮಗ, ಗೀತಾ ಎಂಬ ಹೆಣ್ಣು ಮಗಳು ಇವರಿಗಿದ್ದರು. ನಿಜಗುಣಿಗೆ ಹೋಟೆಲ್‌ಗಳಲ್ಲಿ ಸರ್ವರ್ ಕೆಲಸ ಬಿಟ್ಟರೆ ಬೇರೇನೂ ಗೊತ್ತಿರಲಿಲ್ಲ. ಮಹಾದೇವಿಯು ಕೂಡಾ ಅವರಿವರ ಮನೆಕೆಲಸ ಮಾಡಿಕೊಂಡಿದ್ದಳು. ಕಿರಣ ಮತ್ತು ಗೀತಾ ಇಬ್ಬರಿಗೂ ವಿದ್ಯಾಭ್ಯಾಸ ನೀಡುವುದರೊಂದಿಗೆ ಮುದ್ದಿನಿಂದ ಬೆಳೆಸಿದ್ದರು. ಆದರೆ ಇಂದು ಮಗ ಕಿರಣನನ್ನು ತನ್ನ ಕೈಯಾರೆ ಕೊಲೆಗೈದು ಹಂತಕನಾಗಿ ಜೈಲು ಸೇರಿದ್ದಾನೆ. ನಿಜವಾಗಿ ಎಂತಹ ದುರ್ದೈವ ನೋಡಿ.

### ಪರಮ ಕುಡುಕನಾಗಿದ್ದ ಕಿರಣ...

ಕಿರಣನಿಗೆ ಆಗ 24-25ರವಯಸ್ಸು, ಆಗಿನಿಂದಲೇ ದುಷ್ಟರ ಸಹವಾಸ ಮಾಡಿ ಸಾರಾಯಿ ಚಟ, ಗಾಂಜಾ ಚಟ ಬೆಳೆಸಿಕೊಂಡು ಬಿಟ್ಟಿದ್ದನು. ಮೊದ ಮೊದಲು ಸಣ್ಣಪುಟ್ಟ ಕೆಲಸ ಮಾಡಿಕೊಂಡು ತನ್ನ ದುಶ್ಚಟಗಳ ಖರ್ಚನ್ನು ನಿಭಾಯಿಸಿಕೊಳ್ಳುತ್ತಿದ್ದನು. ಬರುಬರುತ್ತ ದಿನಕಳೆದಂತೆ ಕೆಲಸಕ್ಕೆ ಹೋಗುವುದನ್ನು ಬಿಟ್ಟು ಮನೆಯಲ್ಲಿ ಮೂಲೆ ಹಿಡಿದುಕೊಂಡು ಖರ್ಚಿಗೆ ತಂದೆ-ತಾಯಿಯ ಹತ್ತಿರ ಬಲವಂತವಾಗಿ ಕಿತ್ತುಕೊಳ್ಳತೊಡಗಿದನು.

**ಮಗನ ಸ್ನೇಹಿತರಿಂದ ಕೊಲೆ ರಹಸ್ಯ ಬಯಲಿಗೆ!**

ಈತ ಬಡಾವಣೆಗಳಲ್ಲಿ ವಿನಾಕಾರಣ ಕಿರಿಕ್ ಮಾಡಿಕೊಂಡು 'ರೌಡಿಶೀಟರ್' ಪಟ್ಟ ಕಟ್ಟಿಕೊಂಡನು. ಊಟವಿಲ್ಲ ಎಂದರೆ ನಡೆಯುತ್ತಿತ್ತು. ಸಾರಾಯಿ ಮತ್ತು ಗಾಂಜಾ ಬೇಕಿತ್ತು ಈತನಿಗೆ.

### ಹಣ ಕೊಡದಿದ್ದರೆ ಕೊಲೆ ಮಾಡುತ್ತೇನೆ...

ಕಿರಣನ ತಂದೆ ನಿಜಗುಣಿ ಚಿಕ್ಕೋಡಿ ನಗರದ

☞ 15




ಕೊಲೆಯಲ್ಲಿ ಭಾಗಿಯಾದ ಉಸ್ಮಾನ್ ಮುಲ್ಲಾ ಹಾಗೂ ವಿನಾಯಕ ಮಹಾಂತೇಶ

# ಪ್ರಿಯಕರನಿಂದಲೇ ಪ್ರೇಯಸಿಯ ಬರ್ಬರ ಹತ್ಯೆ!

7 ☞ ವುದರಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಹಿಂದೂ ಮುಸ್ಲಿಂ ಮುಖಂಡರು ಮಾರನೇ ದಿನ ಅಂದರೆ ಭಾನುವಾರ ನಡೆಯಬೇಕಾಗಿದ್ದ ಸಂತೆಯನ್ನು ರದ್ದುಮಾಡಿ ಶಾಂತಿ, ಶಿಸ್ತು ಕಾದುಕೊಂಡಿದ್ದಾರೆ. ಆರೋಪಿ


ಡಿವೈಎಸ್ಪಿ ಗೀತಾ ಪಾಟೀಲ್


ಪಿಐ ರಮೇಶ್ ಹನಾಪುರ

ರಫೀಕನ ಪತ್ತೆಗೆ ಪೊಲೀಸರು ನಾಲ್ಕು ತಂಡ ರಚಿಸಿ, ಶನಿವಾರ ಇಡೀ ರಾತ್ರಿ ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಆರೋಪಿಯನ್ನು ಹುಡುಕಿದರೂ ಆರೋಪಿ ಪತ್ತೇನೇ ಆಗುತ್ತಾ ಇಲ್ಲ. ಎಲ್ಲ ಕಡೆ ನಾಕಾಬಂದಿ ಕೂಡ ಮಾಡಿ ಎಲ್ಲ ವಾಹನಗಳನ್ನೂ ತಪಾಸಣೆಗೊಳಪಡಿಸಿದ್ದಾರೆ.

ವಿಷಯ ತಿಳಿದ ತಕ್ಷಣ ಪಶ್ಚಿಮ ವಲಯ ಐಜಿಪಿ ಅಮೀತ್ ಸಿಂಗ್, ಉಡುಪಿ ಎಸ್ಪಿ ಹರಿರಾಮ ಶಂಕರ ಹಾಗೂ ಚಿಕ್ಕಮಗಳೂರು ಹೆಚ್ಚುವರಿ ಎಸ್ಪಿ ಜಯಕುಮಾರ್, ಆರು ಕೆಎಸ್ಆರ್‌ಪಿ ತುಕಡಿ, ಐದು ಡಿಆರ್ ಪೊಲೀಸ್ ತುಕಡಿ, ಮಂಗಳೂರು ಪೊಲೀಸ್ ಪಡೆ, ಸರಿಸುಮಾರು ಐನೂರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳು ತಮ್ಮ ಕರ್ತವ್ಯವನ್ನು ತೀರಾ ಚಾಣಾಕ್ಷತನದಿಂದ ನಿರ್ವಹಿಸಿದ್ದು ಸಾರ್ವಜನಿಕರ ಭಾರೀ ಪ್ರಶಂಸೆಗೆ ಭಾಜನವಾಗಿದೆ.


ರಂಜಿತಾಳ ಸಂಬಂಧಿಕರೊಂದಿಗೆ ಪೊಲೀಸ್ ಅಧಿಕಾರಿ

ಇದೇ ಸಂದರ್ಭದಲ್ಲಿ ಕಾರವಾರ ಶ್ವಾನದಳದ ಚಾಣಾಕ್ಷ ಹಾಗೂ ಭಾರೀ ತರಬೇತಿ ಪಡೆದ ಶ್ವಾನ ಅಖೇರಾನ ಆರೋಪಿಯ ಪತ್ತೆಗೆ ಕಾರವಾರದಿಂದ ಕರೆಸಿದ್ದಾರೆ. ಆರೋಪಿ ರಫೀಕ್ ಎಲ್ಲಿದ್ದಾನಂತ ಅಖೇರಾ ಹುಡುಕುತ್ತಾ ಕಾಡು ದಾರಿಗೆ ಹೋಗಿ ಕಾಜುವಾಡಾದ ಅಕೇಶಿಯಾ ಮರದಲ್ಲಿ ನೇತಾಡುತ್ತಿದ್ದ ರಫೀಕನ ಶವ ತೋರಿಸಿದೆಯ ಈಗ ಹಿಂದೂ ಮುಸ್ಲಿಂ ಗಲಾಟೆಯಾಗಿ ತಾನು ಸಿಕ್ಕಿಬಿದ್ರೆ ತನ್ನ ಕಥೆ ಅಷ್ಟೇ ಅಂತಾ ರಫಿಕ್ ನೈಲಾನ್ ಹಗ್ಗದಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.


ಶ್ವಾನ ಅಖೇರ

☯

6 ☞

### ಪೊಲೀಸರಿಗೆ ದೂರು...

ತಮ್ಮ ತಂದೆ ಸಣ್ಣ ನಿಂಗಪ್ಪನನ್ನು ಮದುವೆ ಕಾರಣಕ್ಕಾಗಿ ಸಿಟ್ಟು ಹಿಡಿದುಕೊಂಡು ಮಲಗಿದ್ದವನ ತಲೆಗೆ ಕಬ್ಬಿಣದ ರಾಡ್‌ನಿಂದ ಹೊಡೆದು ತಮ್ಮನಾದ ನಿಂಗರಾಜ ಕೊಲೆಗೈದಿದ್ದಾನೆ ಎಂಬ ದೂರನ್ನು ಸಣ್ಣ ನಿಂಗಪ್ಪನ ಹಿರಿಯ ಮಗ ಮಾರುತಿ ಹೊಸದುರ್ಗ ಠಾಣೆಗೆ ನೀಡಿದನು. ಹೊಸದುರ್ಗ ಠಾಣೆಯ ಪಿಎಸ್ಐ ಮಹೇಶ್ ಕುಮಾರ್ ಅವರು ಪ್ರಕರಣದ ಗಂಭೀರತೆಯನ್ನು ಅರಿತುಕೊಂಡು ಸಿಪಿಐ ರಮೇಶ್‌ಗೌಡ ಕೆ.ಟಿ., ಹಿರಿಯೂರು ಉಪವಿಭಾಗದ ಡಿವೈಎಸ್ಪಿ ಶಿವಕುಮಾರ್ ಟಿ.ಎಂ. ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆಗೆ ಸಿದ್ಧರಾದರು.

ಹೊಸದುರ್ಗ ಸಿಪಿಐ ರಮೇಶ್‌ಗೌಡ ಕೆ.ಟಿ. ತುಂಬಾ



ಸಣ್ಣ ನಿಂಗಪ್ಪನ ಶವವನ್ನು ನೋಡಲು ಧಾವಿಸಿದ ಸಾರ್ವಜನಿಕರು

ಚತುರ ಮತ್ತು ಧಾಡಸಿ ಅಧಿಕಾರಿ. ವಿಷಯ ತಿಳಿದ ತಕ್ಷಣ ತಮ್ಮ ಸಿಬ್ಬಂದಿಗಳೊಡನೆ ಶರವೇಗದಲ್ಲಿ ಆಸ್ಪತ್ರೆಗೆ ಧಾವಿಸಿ ಕೊಲೆಯಾದ ಸಣ್ಣ ನಿಂಗಪ್ಪನ ಶವವನ್ನು ಪರಿಶೀಲಿಸಿ ಪಂಚನಾಮೆ ಕಾರ್ಯನ್ನು ಕೈಗೊಂಡರು ಮತ್ತು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಗಳನ್ನು ಪಡೆದುಕೊಂಡರು. ನಂತರ ಶವದ ಮರಣೋತ್ತರ ಪರೀಕ್ಷೆ ನಡೆಸಿ ಅದನ್ನು ವಾರಸುದಾರರಿಗೆ ಒಪ್ಪಿಸಿದರು. ಶೋಕಾಕುಲ ವಾತಾವರಣದಲ್ಲಿ ಸಣ್ಣ ನಿಂಗಪ್ಪನ ಅಂತ್ಯಕ್ರಿಯೆಯನ್ನು ಅತಿಘಟ್ಟದಲ್ಲಿ ನೆರವೇರಿಸಲಾಯಿತು.

### ಹಂತಕ ಪುತ್ರನ ಬಂಧನ...

ಮದುವೆ ವಿಷಯಕ್ಕಾಗಿ ಜಗಳ ತೆಗೆದು ತಂದೆ ಸಣ್ಣ ನಿಂಗಪ್ಪನನ್ನು ಅತ್ಯಂತ ನಿರ್ಧಯವಾಗಿ ಕೊಂದು ಹಾಕಿದ್ದ ಕುಪುತ್ರ ನಿಂಗರಾಜ ತಲೆಮರೆಸಿಕೊಳ್ಳದಂತೆ ಸಿಪಿಐ ರಮೇಶ್‌ಗೌಡ ಕೆ.ಟಿ. ತುಂಬಾ ಜಾಗ್ರತೆ ವಹಿಸಿದರು. ಪ್ರಕರಣದಲ್ಲಿ ಡಿವೈಎಸ್ಪಿ ಶಿವಕುಮಾರ ಟಿ.ಎಂ., ಹೆಚ್ಚುವರಿ ಎಸ್ಪಿ ಡಾ. ಶಿವಕುಮಾರ್ ಆರ್., ಎಸ್ಪಿ ರಂಜಿತ್‌ಕುಮಾರ್ ಭಂಡಾರು ಅವರನ್ನು ಸಂಪರ್ಕಿಸಿ ಸುದೀರ್ಘ ಸಮಾಲೋಚನೆ ನಡೆಸಿ ಅಗತ್ಯ ನಿರ್ದೇಶನಗಳನ್ನು ಪಡೆದುಕೊಂಡರು. ಶತಾಯ-ಗತಾಯ ಹಂತಕ ಪುತ್ರ ತಲೆಮರೆಸಿಕೊಳ್ಳಬಾರದು ಎಂದು ನಿರ್ಧರಿಸಿ ಪಿಎಸ್ಐ ಮಹೇಶ್‌ಕುಮಾರ್, ಕ್ರೈಂ ಪಿಸಿ ರಮೇಶ್ ಮತ್ತಿತರರ ಜತೆಗೆ ಖಚಿತ ಮಾಹಿತಿ ಆಧರಿಸಿ ಪತ್ತೆ ಮಾಡಿ ಪಕ್ಕದ ಗೊರವ ಗೊಂಡನಹಳ್ಳಿಯಲ್ಲಿ ತಲೆಮರೆಸಿಕೊಂಡಿದ್ದ ಹಂತಕ ನಿಂಗರಾಜನನ್ನು ವಶಕ್ಕೆ ತೆಗೆದುಕೊಂಡು ಹೊಸದುರ್ಗ ಠಾಣೆಗೆ ತಂದು ವಿಚಾರಣೆ ಮಾಡಿದಾಗ ಹಂತಕ ನಿಂಗರಾಜ ತನ್ನ ತಂದೆ ಸಣ್ಣ ನಿಂಗಪ್ಪನನ್ನು ಹತ್ಯೆ ಮಾಡಿದ್ದರ ಕುರಿತು ಗಿಳಿಪಾಠವನ್ನು ಹೇಳಿ ತನ್ನ ಕೃತ್ಯ ಒಪ್ಪಿಕೊಂಡಿದ್ದಾನೆ.

ಹಂತಕ ನಿಂಗರಾಜ ಪಂಚನಾಮೆ ಕಾಲಕ್ಕೆ ತನ್ನ ತಂದೆಯ ಕೊಲೆ ನಡೆಸಿದ್ದ ಸ್ಥಳ ಮತ್ತು ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡ್ ಸ್ವಖುಷಿಯಿಂದ ತೋರಿಸಿದ್ದಾನೆ. ಹಂತಕನ ವೈದ್ಯಕೀಯ ಪರೀಕ್ಷೆ ನಡೆಸಿ ಆತನನ್ನು ನ್ಯಾಯಾಧೀಶರ


ಇದೇ ಮನೆಯಲ್ಲಿ ತಂದೆಯನ್ನು ಕೊಲೆ ಮಾಡಿದ್ದ ನಿಂಗರಾಜ

ಮುಂದೆ ಹಾಜರುಪಡಿಸಿದಾಗ ಆತನನ್ನು ಜೈಲಿಗಟ್ಟಲು ನ್ಯಾಯಾಧೀಶರು ಆದೇಶ ಮಾಡಿದ್ದಾರೆ.

### ಗ್ರಾಮದಲ್ಲಿ ಆಘಾತ...

ಹೊಸದುರ್ಗ ತಾಲ್ಲೂಕಿನ ಅತಿಘಟ್ಟ ಗ್ರಾಮದಲ್ಲಿ ತಂದೆಯೇ ಮಗನಿಂದ ಕೊಲೆಯಾಗಿರುವ ಸುದ್ದಿ ತೀವ್ರ ಆಘಾತ ಮೂಡಿಸಿದೆ. ಕೇವಲ ಮದುವೆ ವಿಷಯವಾಗಿ ದಾರುಣ ಕೊಲೆ ನಡೆದಿದ್ದರ ಕುರಿತು ಸ್ಥಳೀಯರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಮದುವೆಯ ವಿಷಯ ತಂದೆಯನ್ನೇ ಕೊಲೆ ಮಾಡುವ ಮಟ್ಟಕ್ಕೆ ಹೋದದ್ದು ತೀರಾ ನೋವಿನ ಸಂಗತಿ ಎಂದು ಹೇಳುತ್ತಾರೆ. ಯಾವುದೇ ಜಗಳಗಳನ್ನು ಮಾತಿನ ಮೂಲಕ ಬಗೆಹರಿಸುವುದು ಅಗತ್ಯ. ಈ ತಂದೆಯ ಕೊಲೆ ನಡೆದದ್ದು ಸಮಾಜಕ್ಕೊಂದು ಕೆಟ್ಟ ಸಂದೇಶವಾಗಿದೆ ಎಂದು ಹೇಳಬಹುದು.

☯

## ...ಡಿಕೆಶಿ ಸಿಎಂ ಆಗೋದು ಡೌಟು!

11 ☞ ನಾಯಕರಾಗಿದ್ದವರು. ಅವರು ರಾಹುಲ್ ಗಾಂಧಿಯವರ ನಡೆಯಿಂದ ಬೇಸತ್ತು ಬಿಜೆಪಿಗೆ ಸೇರಿದ್ದಲ್ಲದೆ, ಆ ಪಕ್ಷವನ್ನು ಚುನಾವಣೆಯಲ್ಲಿ ಗೆಲ್ಲಿಸಿ ಅಧಿಕಾರಕ್ಕೆ ತರುವಲ್ಲಿಯೂ ಯಶಸ್ವಿಯಾದವರು. ಅವರ ಮುಂದೆ ಕಾಂಗ್ರೆಸ್ ಗೆಲುವು ಕಾಣುವುದು ಅಷ್ಟೊಂದು ಸುಲಭವಾಗಿ ಉಳಿದಿಲ್ಲ. ಅಲ್ಲಿ ಕಳೆದ ಹತ್ತು ವರ್ಷಗಳಿಂದ ಬಿಜೆಪಿ ಆಡಳಿತ



ನಡೆಸುತ್ತಿದೆ. ಹೀಗಾಗಿ ಅಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಮತದಾರರನ್ನು ಸೆಳೆಯುವುದು ಒಂದು ಸವಾಲ್ ಆಗಿದ್ದು, ಆ ಸವಾಲನ್ನು ಡಿ.ಕೆ. ಶಿವಕುಮಾರ್ ಎದುರಿಸಿ ಅದರಲ್ಲಿ ಯಶಸ್ವಿಯಾಗುತ್ತಾರಾ? ಹೈಕಮಾಂಡ್ ನಿರ್ಧಾರವಾಗಿರುವ ಕಾರಣದಿಂದಾಗಿ ಅಸ್ಸಾಂನಲ್ಲಿ ಡಿಕೆಶಿ ಕೆಲಸ ಮಾಡಲೇ ಬೇಕಾಗಿದೆ.

ಇದು ಹೈಕಮಾಂಡ್ ಡಿ.ಕೆ. ಶಿವಕುಮಾರ್ ಅವರ ಸಾಮರ್ಥ್ಯ ನೋಡಿ ನೀಡಿದ ಜವಬ್ದಾರಿನಾ? ಕರ್ನಾಟಕದಲ್ಲಿ ನಡೆಯುತ್ತಿರುವ ಪವರ್ ಶೇರಿಂಗ್ ಫೈಟ್‌ನ್ನು ತಾತ್ಕಾಲಿಕ ಶಮನಗೊಳಿಸುವ ಪ್ರಯತ್ನನಾ? ಪ್ರಶ್ನೆಯಾಗಿಯೇ ಉಳಿದಿದೆ. ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಅಧಿಕಾರ ಹಸ್ತಾಂತರ ಮಾಡಲು ಸಿದ್ದರಿದ್ದರೂ ಅವರ ಬೆಂಬಲಿಗ ನಾಯಕರು ಅದಕ್ಕೆ ಆಸ್ಪದ ನೀಡದಂತೆ ನೋಡಿಕೊಳ್ಳುತ್ತಿದ್ದು, ಸಿದ್ದರಾಮಯ್ಯ ಅವರ ಪರವಾಗಿ ಬಲಪ್ರದರ್ಶನವನ್ನು ಮೇಲಿಂದ ಮೇಲೆ ಮಾಡಿಕೊಂಡೇ ಬರುತ್ತಿದ್ದಾರೆ. ಅತ್ತ ಡಿ.ಕೆ. ಶಿವಕುಮಾರ್ ಬಣದವರು ಸುಮ್ಮನೆ ಕುಳಿತಿಲ್ಲ. ಸಂಕ್ರಾಂತಿಗೆ ಡಿಕೆಶಿ ಸಿಎಂ ಆಗುತ್ತಾರೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಒಟ್ಟಾರೆಯಾಗಿ ಅಧಿಕಾರ ಹಸ್ತಾಂತರ ಪ್ರಕ್ರಿಯೆ ನಡೆದರೂ ನಡೆಯದೆ ಸಿದ್ದರಾಮಯ್ಯ ಅವರೇ ಪೂರ್ಣಾವಧಿಯ ಸಿಎಂ ಆಗಿ ಉಳಿದರೂ ಪರಿಣಾಮಗಳು ಮುಂದೆ ಕಾಂಗ್ರೆಸ್ ಪಕ್ಷದ ಮೇಲೆಯೇ ಬೀರಲಿದೆ ಎನ್ನುವುದಂತು ಸತ್ಯ.

☯

10 ☞ ಸರಸ್ವತಿಗೆ ಫೋನ್ ಮಾಡಿ ನಿಮ್ಮ ಗಂಡನಿಗೆ ಸ್ವಾಮಿ ಪುಟ್ಟಬುದ್ಧಿ ಮತ್ತು ಅವರ ಹೆಂಡತಿ ನಾಗಮ್ಮರವರು ಹೊಡೆದು ಕೆಳಗಡೆ ಬಿದ್ದು ಹೋಗಿದ್ದಾರೆ. ಅವರ ತೋಟದ ಮನೆಯ ಬಳಿ ರಸ್ತೆಗೆ ಬನ್ನಿ ಎಂದು ಹೇಳಿದ್ದಾನೆ. ಆಗ ಸರಸ್ವತಿ ಕೂಡಲೇ ತನ್ನ ಮೈದುನ ಸಂತೋಷ್ ಜೊತೆ ಬೈಕಿನಲ್ಲಿ ಸ್ವಾಮಿ ಮನೆಯ ಬಳಿ ರಸ್ತೆಗೆ ಹೋದಾಗ ಅಲ್ಲಿ ಗಂಡ ಉಮೇಶ್ ರಸ್ತೆಯಲ್ಲಿ ಬಿದ್ದಿದ್ದು ಹಾಗೂ ಮುಖ ಮತ್ತು ಕತ್ತಿನಲ್ಲಿ ಕತ್ತರಿಸಿದ ರಕ್ತಗಾಯವಾಗಿ ಉಮೇಶನಿಗೆ ಪ್ರಜ್ಞೆ ಇಲ್ಲದೆ ಬಿದ್ದಿರುವುದು ಕಂಡುಬಂದಿದೆ. ಆಗ ಸರಸ್ವತಿ ಅಲ್ಲಿಯೇ ಇದ್ದ ಮಹದೇವರವರನ್ನು ವಿಚಾರಿಸಿದಾಗ ಮಹದೇವ ನಡೆದ ಘಟನೆಯ ಬಗ್ಗೆ ತಿಳಿಸಿದ್ದಾನೆ. ನಂತರ ಮಹದೇವ ರಾಜುರವರೇ ಹಳೇಕೋಟೆ ಗ್ರಾಮದ ಅರ್ಜುನ ಎಂಬುವವರ ಕಾರನ್ನು ಸ್ಥಳಕ್ಕೆ ಕರೆಯಿಸಿಕೊಂಡು ಅದೇ ಗ್ರಾಮದ ಪುಟ್ಟಸ್ವಾಮಿ, ಸತೀಶ ಮತ್ತು ಕೃಷ್ಣನಾಯಕರವರ ಸಹಾಯದಿಂದ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ಉಮೇಶ್‌ನನ್ನು ಕರೆತಂದು ಚಿಕಿತ್ಸೆಗೆ ಸೇರಿಸಿದ್ದಾರೆ. ಆದರೆ ಉಮೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಚಿಕಿತ್ಸೆ ಫಲಕಾರಿಯಾಗದೆ ಅಂದು ಸಂಜೆ 4.30ರ ಸಮಯದಲ್ಲಿ ಕೊನೆಯುಸಿರೆಳೆದಿದ್ದಾನೆ.

ವಿಷಯ ತಿಳಿದ ಕೂಡಲೇ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪಿಎಸ್ಐ ಸುಪ್ರೀತ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಕಿರಿಯ ಅಧಿಕಾರಿಗಳಿಂದ ಮಾಹಿತಿ ಬಂದ ಕೂಡಲೆ ಚಾಮರಾಜನಗರ ಜಿಲ್ಲಾ ಎಸ್ಪಿ ಬಿ.ಟಿ. ಕವಿತಾ ಡಿವೈಎಸ್ಪಿ ಧರ್ಮೇಂದ್ರ, ಸಿಪಿಐ ಶಿವಮಾದಯ್ಯರವರ ಜೊತೆ ಶವಾಗಾರಕ್ಕೆ ಭೇಟಿ ನೀಡಿ ಬಳಿಕ ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದಾರೆ. ನಂತರ ಕೊಳ್ಳೇಗಾಲ ಉಪ ವಿಭಾಗ ಆಸ್ಪತ್ರೆಗೆ ಸಾಗಿಸಿ ಶವಗಾರದಲ್ಲಿದ್ದ ಮೃತ ದೇಹವನ್ನು ವೈದ್ಯರಿಂದ ಪಂಚನಾಮೆ ನಡೆಸಿ ವಾರಸುದಾರರಿಗೆ ನೀಡಿದ್ದಾರೆ.

ಈ ಸಂಬಂಧ ಮೃತ ಉಮೇಶ್‌ನ ಪತ್ನಿ ಸರಸ್ವತಿ ನನ್ನ ಗಂಡನನ್ನು ಕೊಲೆ ಮಾಡಿರುವ ಸ್ವಾಮಿ ಪುಟ್ಟಬುದ್ಧಿ ಮತ್ತು ಇವರ ಹೆಂಡತಿ ನಾಗಮ್ಮರವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಈ ಸಂಬಂಧ ಸರಸ್ವತಿ ನೀಡಿರುವ ದೂರಿನ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 254 / 2025 ಬಿಎನ್‌ಎಸ್ 2023 ಯುಎಸ್ 126(2), 354, 03(3) ರೆ/ವಿ 3(5) ರಡಿ ಪ್ರಕರಣ ದಾಖಲಿಸಿಕೊಂಡಿರುವ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿ ಜೈಲಿಗೆ ಬಿಟ್ಟುಬಂದಿದ್ದು, ಸಿಪಿಐ ಶಿವಮಾದಯ್ಯ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜುರವರ ಮಾರ್ಗದರ್ಶನದಲ್ಲಿ ಪ್ರಕರಣದ ತನಿಖೆ ಕೈಗೊಂಡಿದ್ದಾರೆ.

☯

13 ☜

ಹೋಟೆಲ್‌ಗಳಲ್ಲಿ ಸರ್ವರ್ ಆಗಿದ್ದನು. ಹಣ ಬೇಕಾದರೆ ನೇರವಾಗಿ ಹೋಟೆಲಿಗೆ ನುಗ್ಗಿ ಬಾಯಿಗೆ ಬಂದಂತೆ ಬಯ್ದು, ಹಣ ಕಿತ್ತುಕೊಂಡು ಬಂದು ಕುಡಿದು ಬಿದ್ದಿರುತ್ತಿದ್ದನು. ಮನೆಯಲ್ಲಿ ತಾಯಿಯ ಹತ್ತಿರ ಹಣಕ್ಕಾಗಿ ಇನ್ನಿಲ್ಲದಂತೆ ಜಗಳ ಕಾಯ್ದು ಅಶ್ಲೀಲವಾಗಿ ಬೈಯುವುದಲ್ಲದೇ ಥಳಿಸುತ್ತಿದ್ದನು. ಇತ್ತೀಚಿಗೆ ತನ್ನ ಮನೆಗೆ ತಾನೇ ಬೆಂಕಿ ಹಚ್ಚುವುದು, ತಂದೆ-ತಾಯಿಗಳನ್ನು ಕೊಲೆ ಮಾಡುತ್ತೇನೆಂದು ಕಲ್ಲು ಚಪ್ಪಡಿ ಎತ್ತುವುದು ಮಾಡುತ್ತಿದ್ದನು. ಕಿರಣನ ವರ್ತನೆಯಿಂದ ತುಂಬಾ ಗಾಬರಿಗೊಂಡು ತಂದೆ-ತಾಯಿ ಮನೆಯಲ್ಲಿ ಮಲಗುವುದನ್ನೇ ನಿಲ್ಲಿಸಿಬಿಟ್ಟರು. ಸಂಬಂಧಿಕರ ಮತ್ತು ಸ್ನೇಹಿತರ ಬುದ್ಧಿಮಾತುಗಳನ್ನು ಕಿರಣನು ಕೇಳದೇ ಹೋದನು. ಇದೇ ರೀತಿ ಕಿರಣನ ಉಪಟಳ ಹೆಚ್ಚಾದಾಗ ತಂದೆ ನಿಜಗುಣಿ ರೋಸಿ ಹೋದನು. ಹೇಗಾದರೂ ಸರಿ ಕಿರಣನ ಕೊಲೆ ಮಾಡಬೇಕೆಂದು ಮನಸ್ಸಿನಲ್ಲಿ ಯೋಚನೆ ಮಾಡತೊಡಗಿದ್ದನು.

**ಅಂದು ದುಡ್ಡಿಗಾಗಿ ಜಗಳ ಕಾಯ್ದನು...**

ಅಂದು ದಿ. 05-01-2026 ಸೋಮವಾರವಾಗಿತ್ತು. ಕಿರಣ ದುಡ್ಡಿಲ್ಲದೇ ಪೂರ್ಣ ಕಂಗಾಲಾಗಿದ್ದನು. ಮಧ್ಯಾಹ್ನ ತಂದೆ ಕೆಲಸ ಮಾಡುತ್ತಿದ್ದ ಅಜಂತಾ ಹೋಟೆಲಿಗೆ ಹೋಗಿ ನನಗೆ ದುಡ್ಡು ಬೇಕು ಎಂದು ಜಗಳ ಕಾಯ್ದನು. ಕಿರಣನಿಗೂ ತಂದೆ ನಿಜಗುಣಿಗೂ ಬಾಯಿಗೆ ಬಾಯಿ ಬೆಳೆದು ಜಗಳ ನಡೆಯಿತು. ರೋಸಿ ಹೋಗಿದ್ದ ನಿಜಗುಣಿ ಉರುವಲು ಕಟ್ಟಿಗೆ ತೆಗೆದುಕೊಂಡು ಕಿರಣನಿಗೆ ಬಲವಾಗಿ ಥಳಿಸಿದನು. ಕಿರಣ ಸ್ಥಳದಲ್ಲಿ ಮೂರ್ಛೆ ಬಂದು ಬಿದ್ದು ಬಿಟ್ಟನು. ಆಗ ಅಜಂತಾ ಹೋಟೆಲ್ ಮಾಲಿಕ ಉಸ್ಮಾನ್ ಮುಲ್ಲಾ ಮತ್ತು ಸರ್ವರ್ ವಿನಾಯಕ ಇಬ್ಬರೂ ಬಂದು ವಿಚಾರಿಸಲಾಗಿ ನಿಜಗುಣಿ ಕಿರಣನ ಉಪಟಳ ಹೇಳಿ ಅತ್ತುಬಿಟ್ಟನು. ಹೇಗಾದರೂ ಮಾಡಿ ಕಿರಣನ ಹಿಂಸೆ ತಪ್ಪಿಸಲು ನೆರವಾಗಬೇಕೆಂದು ವಿನಂತಿಸಿದನು. ಜತೆಗೆ ಏನೇ ಬಂದರೂ ನಾನೇ ನಿಭಾಯಿಸುತ್ತೇನೆಂದು ಹೇಳಿದನು. ಈ ಭರವಸೆಗೆ ನೆರವು ನೀಡಲು ಅವರು ಒಪ್ಪಿದರು.


ಕೊಲೆಯ ರಹಸ್ಯ ಬಯಲಿಗೆಳೆದ ಕಿರಣನ ಸ್ನೇಹಿತರಾದ ಜೀವನ ಮಾಂಜರೇಕರ, ಉದಯ ವಾಘಮೋರೆ

**ನಿರ್ಜನ ಪ್ರದೇಶದಲ್ಲಿ ಕತ್ತು ಬಿಗಿದು ಕೊಲೆ...**

ನಿಜಗುಣಿ ಮತ್ತು ಮಾಲೀಕ ಉಸ್ಮಾನ್ ಮುಲ್ಲಾ ಹಾಗೂ ಸರ್ವರ್ ವಿನಾಯಕ ಸೇರಿಕೊಂಡು, ಪ್ರಜ್ಞೆ ತಪ್ಪಿ ಬಿದ್ದಿದ್ದ ಕಿರಣನನ್ನು ಎತ್ತಿ ಕಾರಿನಲ್ಲಿ ಹಾಕಿಕೊಂಡು ಕೇಳಿದವರಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಆಸ್ಪತ್ರೆಗೆ ಕರೆದೊಯ್ಯುತ್ತೇವೆ ಎಂದು ಹೇಳಿದರು. ಉಮರಾಣಿ ಮಾರ್ಗವಾಗಿ ಕಾರು ಹೊನ್ನಗುಡ್ಡ ಲಕ್ಷ್ಮಿ ದೇವಸ್ಥಾನದ ನಿರ್ಜನ ಪ್ರದೇಶದಲ್ಲಿ ಹೋದಾಗ ಇದೇ ಸೂಕ್ತ ಸಮಯವೆಂದು ಕುಟುಕು ಜೀವ ಹಿಡಿದು ಬಿದ್ದಿದ್ದ ಮಗ ಕಿರಣನನ ಕುತ್ತಿಗೆಗೆ ತಾನು ತಂದಿದ್ದ ವೈರ್‌ನಿಂದ ಬಿಗಿದು ಕಣ್ಣು ಮುಚ್ಚಿ ಜಗ್ಗಿದ ನಿಜಗುಣಿ. ಕ್ಷಣಾರ್ಧದಲ್ಲಿ ಕಿರಣ ಸತ್ತು ಹೋದನು.

**ಹೃದಯಾಘಾತದ ನಾಟಕ...**

ಇನ್ನೂ ಪ್ರಕರಣ ಮುಚ್ಚಿ ಹಾಕಲು ಮೂವರು ಒಂದೆಡೆ ಕುಳಿತು ತಣ್ಣಗೆ ಸ್ಕೇಚ್ ಹಾಕಿದರು. ಹೃದಯಾಘಾತವೆಂದು ಬಿಂಬಿಸಲು ಬಿಳಿ ಬಟ್ಟೆ ತಂದು ಉಸ್ಮಾನ್ ಮುಲ್ಲಾ ಆಸ್ಪತ್ರೆಯಲ್ಲಿ ಶವ ಪ್ಯಾಕ್ ಮಾಡಿದ ರೀತಿಯಲ್ಲಿ ಕಿರಣನ ಶವ ಪ್ಯಾಕ್ ಮಾಡಿದನು. ರಾತ್ರಿ 10 ಗಂಟೆಯ ಸುಮಾರಿಗೆ ನಿಜಗುಣಿ ತನ್ನ ಹೆಂಡತಿ ಮಹಾದೇವಿಗೆ ಫೋನ್ ಕರೆ ಮಾಡಿ 'ಕಿರಣ ಹಾರ್ಟ್ ಅಟ್ಯಾಕ್‌ನಿಂದ ಸತ್ತಿದ್ದಾನೆ. ಮನೆಗೆ ತರುತ್ತಿದ್ದೇವೆ. ನೀನು ಎಲ್ಲರಿಗೂ ಹೇಳು ಬೇಗ ಎಲ್ಲವನ್ನು ಮುಗಿಸಿಬಿಡೋಣ' ಎಂದು ಹೇಳಿದನು. ಅದರಂತೆ ರಾತ್ರಿ 10 ಗಂಟೆಯ ಸುಮಾರಿಗೆ ಅಳುತ್ತ ಮನೆಗೆ ಬಂದಿದ್ದ ಮಹಾದೇವಿ ಮಗನ ಶವ ಕಂಡು ಎದೆ... ಎದೆ ಬಡಿದುಕೊಂಡು ರೋಧಿಸಿದ್ದಳು. ನಿಜಗುಣಿ ಆಲೂರೆ ಕಿರಣನ ಸ್ನೇಹಿತರು ಹಾಗೂ ಸಾಮಾಜಿಕ ಕಾರ್ಯಕರ್ತರಾಗಿದ್ದ ಇಂದಿರಾನಗರದ ಜೀವನ ಮಾಂಜರೇಕರ, ಉದಯ ವಾಘಮೋರೆ ಅವರನ್ನು ಕೂಡಾ ಯಾಮಾರಿಸಿದ್ದನು. ಆದರೆ ತಮ್ಮ ಸ್ನೇಹಿತ ಕಿರಣನಿಗೆ ಹೃದಯಾಘಾತವಾಗಿಲ್ಲ ಇದರಲ್ಲಿ ಏನೋ ಷಡ್ಯಂತ್ರ ನಡೆದಿದೆ ಎಂಬ ಸಂಶಯ ಬಂದಿತ್ತು.

**ತರಾತುರಿಯಲ್ಲಿ ಅಂತ್ಯಕ್ರಿಯೆ...**

ನಿಜಗುಣಿ ಆಲೂರೆ ಅವಸರ ಇಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸಿತ್ತು. ಆತನ ಮುಖದಲ್ಲಿ ಏನೋ ಆತಂಕ, ತಪ್ಪಿತಸ್ಥ ಭಾವನೆ ಎದ್ದು ಕಾಣುತ್ತಿತ್ತು. ಕಿರಣ ಇನ್ನೂ ಅವಿವಾಹಿತನಾಗಿದ್ದು ಕೆಲವೊಂದು ವಿಧಿ-ವಿಧಾನಗಳನ್ನು ಅಂತ್ಯಕ್ರಿಯೆ ಸಂದರ್ಭದಲ್ಲಿ ಮಾಡಬೇಕಾಗಿತ್ತು. ಆದರೆ ಅದ್ಯಾವುದನ್ನೂ ಮಾಡದೇ ಹಂತಕ ಲಗು-ಬಗೆಯಿಂದ ಶವ ಸುಡುವ ವ್ಯವಸ್ಥೆ ಮಾಡತೊಡಗಿದ್ದನು. ಲಿಂಗಾಯತ ಸಮುದಾಯದಲ್ಲಿ ಶವ ಹೂಳುತ್ತಾರೆ. ಆದರೆ ಇಲ್ಲಿ ಕಿರಣನ ಶವ ಸುಡುವ ವ್ಯವಸ್ಥೆ ಮಾಡಲಾಗಿತ್ತು. ಅವರ ಸಂಬಂಧಿಕರು ಆದದ್ದಾಗಿದೆ. ನಾಳೆ ಅಂಗಾರಕ ಸಂಕಷ್ಟಿ ಇದೆ. ಬೇಗ ಅಂತ್ಯಕ್ರಿಯೆ ಮಾಡಬೇಕು ಎಂದು ಶವ ಸುಟ್ಟುಬಿಟ್ಟರು. ಆಗ 6ನೇ ತಾರೀಖು ಬೆಳಗಿನ 3 ಗಂಟೆ ಆಗಿತ್ತು.


ಕಿರಣನ ಶವವನ್ನು ಸುಟ್ಟ ಸ್ಥಳ ತೋರಿಸುತ್ತಿರುವ ಹಂತಕ ನಿಜಗುಣಿ ಆಲೂರೆ

**ಕೊಲೆ ರಹಸ್ಯ ಬಯಲಿಗೆ...**

ಕೊಲೆಯಾದ ಕಿರಣ ಆಲೂರೆಯ ಅತ್ಯಂತ ಆತ್ಮೀಯ ಸ್ನೇಹಿತರು ಹಾಗೂ ಸಾಮಾಜಿಕ ಸಂಘಟನೆಯ ಯುವ ನಾಯಕರಾಗಿದ್ದ ಜೀವನ ಮಾಂಜರೇಕರ, ಉದಯ ವಾಘಮೋರೆ ಮುಂತಾದವರು ಸೇರಿಕೊಂಡು ಕಿರಣನ ಸಾವು ಆಕಸ್ಮಿಕವಲ್ಲ. ಇದೊಂದು ಪೂರ್ವ ನಿಯೋಜಿತ ಕೊಲೆ ಎಂದು ಬಲವಾಗಿ ಸಂಶಯ ವ್ಯಕ್ತಪಡಿಸಿ ದಿ. 07-01-2026ರಂದು ಕಿರಣನ ಸುಟ್ಟ ಸ್ಥಳದಲ್ಲಿ ಹಾಲು-ತುಪ್ಪ ಕಾರ್ಯಕ್ರಮ ಮುಗಿಸಿದ ನಂತರ ಅದೇ ಸ್ಮಶಾನದಲ್ಲಿ ಕಿರಣನ ತಂದೆ ನಿಜಗುಣಿ ಆಲೂರೆಯನ್ನು ಕರೆಯಿಸಿ ಸಮಾಧಾನದಿಂದ ಕಿರಣ ಹೇಗೆ ಸತ್ತ ನಿಜ ಹೇಳು...? ಎಂದಾಗ ಇನ್ನಿಲ್ಲದಂತೆ ಕಾಗಕ್ಕ-ಗುಬ್ಬಕ್ಕನ ಕಥೆ ಹೇಳಿದನು. ಒಂದಕ್ಕೊಂದು ಹೇಳಿಕೆಗಳು ತಾಳೆಯಾಗದ ಕಾರಣ ಸ್ನೇಹಿತರ ಸಂಶಯಕ್ಕೆ ಮತ್ತಷ್ಟು ಪುಷ್ಟಿ ದೊರಕಿತ್ತು. ಸಿಟ್ಟಿಗೆದ್ದ ಸ್ನೇಹಿತರು ಒಂದೆರಡು ಏಟು ನೀಡಿದಾಗ ನಿಜಗುಣಿ ನಿಜ ಬಣ್ಣ ಬಯಲಾಗಿತ್ತು. ಹೆತ್ತ ಮಗನ ಕಾಟ ತಡೆಯಲಾರದೇ ಕೊಲೆ ಮಾಡಿದ್ದನ್ನು ವಿವರವಾಗಿ ಒಪ್ಪಿಕೊಂಡನು. ಅದರಂತೆ ನಿಜಗುಣಿ ಮಾಲೀಕ ಉಸ್ಮಾನ ಮುಲ್ಲಾ ಹಾಗೂ ವಿನಾಯಕ ಮಹಾಂತೇಶ ಅವರಿಬ್ಬರೂ ತಮ್ಮ ಕೃತ್ಯ ಒಪ್ಪಿಕೊಂಡು ಪಿನ್ ಟು ಪಿನ್ ನಡೆದ ಸಂಗತಿ ಬಾಯಿ ಬಿಟ್ಟರು. ಮಗನ ಕೊಲೆ ಮಾಡಿದ್ದು ಅವರಪ್ಪ ನಿಜಗುಣಿ ಎಂಬುದು ಗೊತ್ತಾಗಿ ತಾಯಿ ಮಹಾದೇವಿ, ತಂಗಿ ಗೀತಾ ಆಕಾಶ ಬಿರಿಯುವಂತೆ ಅತ್ತಿದ್ದರು. ಸುದ್ದಿ ಕೇಳಿದ ಚಿಕ್ಕೋಡಿ ಜನತೆ ಹೌಹಾರಿದ್ದರು. ನಿಜವಾಗಿಯೂ ತಮ್ಮ ಸ್ನೇಹಿತ ಕಿರಣನ ಕೊಲೆಯ ರಹಸ್ಯ ಬಯಲಿಗೆಳೆದ ಸ್ನೇಹಿತರ ಕಾರ್ಯ ಶಹಭಾಶ್ ಎನ್ನುವಂತಾಗಿದೆ.

**ಹಂತಕ ತಂದೆ ಮತ್ತು ಸಂಗಡಿಗರ ಬಂಧನ**

ತನ್ನ ಮಗ ಕಿರಣನನ್ನು ಅತ್ಯಂತ ನಿರ್ಧಯವಾಗಿ ಹತ್ಯೆ ಮಾಡಿದ ತನ್ನ ಗಂಡ ನಿಜಗುಣಿ ಆತನ ಮಾಲೀಕ ಉಸ್ಮಾನ್ ಮುಲ್ಲಾ, ಸರ್ವರ್ ವಿನಾಯಕ ಮೇಲೆ ಮಹಾದೇವಿ ಪೊಲೀಸ್ ಠಾಣೆಗೆ ದೂರನ್ನು ನೀಡಿದಳು. ಪ್ರಕರಣದ ಗಂಭೀರತೆ ಅರಿತುಕೊಂಡು ಪಿಎಸ್‌ಐ ಬಸಗೌಡ ನೇರ್ಲಿ ತಕ್ಷಣ ವಿಷಯವನ್ನು ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಕೆ. ರಾಮರಾಜನ್ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಇಳಿದರು.

ಸಿಪಿಐ ವಿಶ್ವನಾಥ ಚೌಗಲಾ ಮತ್ತು ಪಿಎಸ್‌ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳಾದ ಎಸ್.ಜೆ. ಬಡಿಗೇರ, ಜಿ.ಎಸ್. ಕಾಂಬಳೆ, ಎಸ್.ಪಿ. ಗಲಗಲಿ, ರಾಮು ಕುಳ್ಳೊಳ್ಳಿ, ವಿಜಯ ಪಾಟೀಲ, ಎಸ್.ಪಿ. ಕುಂಬಾರ ಜತೆಗೆ ಖಚಿತ ಮಾಹಿತಿ ಆಧರಿಸಿ ಹಂತಕ ತಂದೆ ನಿಜಗುಣಿ ಸೇರಿದಂತೆ ಉಸ್ಮಾನ್ ಮುಲ್ಲಾ, ವಿನಾಯಕರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸಿದಾಗ ಹಂತಕರೆಲ್ಲರೂ ನಿಜಸಂಗತಿ ಒಪ್ಪಿಕೊಂಡು ಎಲ್ಲವನ್ನು ತಿಳಿಸಿದರು. ಎಸ್ಪಿ ಕೆ. ರಾಮರಾಜನ್, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ನಿರ್ದೇಶನದಂತೆ ಹಂತಕರ ಮೇಲೆ ದೋಷಾರೋಪಣಾ ಪಟ್ಟಿ ಸಮೇತ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರು ಹಂತಕರನ್ನು ಜೈಲಿಗಟ್ಟಲು ಆದೇಶ ಮಾಡಿದ್ದಾರೆ. ಮಾಡಿದ ತಪ್ಪಿಗೆ ಜೈಲು ಸೇರಿ ಜೈಲಿನಲ್ಲಿ ಹಂತಕ ತಂದೆ ಮತ್ತು ಸಹಚರರು ಮುದ್ದೆ ಮುರಿಯುತ್ತಿದ್ದಾರೆ.

☯

# ರೌಡಿ ಶೀಟರ್ ನಿಂದಲೇ ರೌಡಿಯ ಕಿಡ್ನಾಪ್ - ಮರ್ಮಾಂಗ ಸ್ಕ್ರಾಪ್!

5 ☜

ಲಕ್ಷಾಂತರ ರೂಪಾಯಿ ಹಣವನ್ನು ತರಿಸಿಕೊಂಡು ಗುಟ್ಕಾ ಮಾಲನ್ನು ಬಿಟ್ಟು ಕಳುಹಿಸುತ್ತಿದ್ದ ಬ್ಲಾಕ್‌ಮೇಲ್ ಕ್ರಿಮಿನಲ್ ಗ್ಯಾಂಗ್ ಗಳಿವೆ ಆನೇಕಲ್ ಭಾಗದಲ್ಲಿ! ಮಾಮೂಲಿ ಹಣ ಕೊಡದಿದ್ದರೆ ಕೋಟ್ಯಾಂತರ ರೂಪಾಯಿಯ ನಿಷೇಧಿತ ಗುಟ್ಕಾ ಪಾನ್ ಮಸಾಲವನ್ನು ಕಳ್ಳತನ ಮಾಡಿ ಮಾರಿಕೊಳ್ಳಲು ಹೇಸದ ವರಿದ್ದಾರೆ ಇಲ್ಲಿ!! ವಾಹನಗಳಿಗೆ ಮಿನಿ ಮ್ಯಾಗ್ನಟಿಕ್ ಜಿಪಿಎಸ್ ಅಳವಡಿಸಿ ಟ್ರಾಕ್ ಮಾಡಿ ಜಿಪಿಎಸ್ ಲೋಕೇಷನ್ ಮೂಲಕ ಕಾರು ಹಿಂಬಾಲಿಸಿ ಪಕ್ಕಾ ಪ್ಲಾನ್ ಮಾಡಿ ಕಾರು ಸಮೇತ ಕಿಡ್ನಾಪ್ ಮಾಡುತ್ತಿದ್ದ ಖತರ್ನಾಕ್ ಗ್ಯಾಂಗ್‌ಗಳು ಟೆಕ್ನಿಕಲಿ ಅಡ್ವಾನ್ಸ್ಡ್ ಕಿಡ್ನಾಪರ್ಸ್ ಅಂಡ್ ರಾಬರ್ಸ್ ಗ್ಯಾಂಗ್‌ಗಳು ಆನೇಕಲ್ ನಲ್ಲಿದ್ದಾವೆ!!!

ಆನೇಕಲ್ ತಾಲೂಕಿನ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರ ಓಪನ್ ಸ್ಟೇಟ್‌ಮೆಂಟ್‌ನಂತೆ, ಇಲ್ಲಿನ ಠಾಣೆಗಳ ಸೀಟುಗಳು ಕೆಲವು ಲಕ್ಷ ರೂ. ಕೋಟಿ ರೂಗಳ ಲೆಕ್ಕದಲ್ಲಿ ಬಿಕರಿಗಿವೆಯಂತೆ!! ಇನ್ನೂ ನ್ಯಾಯ ಪಾಲನೆ ಕನಸಿನ ಮಾತೆ?! ದುರಂತ ಏನಂದ್ರೆ, ಠಾಣೆಗೊಬ್ಬ ಇಬ್ಬರಾದರೂ ಭ್ರಷ್ಟ ಪೊಲೀಸರಿದ್ದು, ತಮ್ಮ ಲಾಭಕ್ಕಾಗಿ ರೌಡಿಗಳ ಜೊತೆಗೆ ಸೇರಿಕೊಂಡು ಕೇಡಿಗಳಿಗೆ ಇನ್ ಫಾರ್ಮರ್ ಆಗಿ, ಕೊಲೆ ಸುಲಿಗೆ, ಕಳ್ಳತನ, ಗಾಂಜಾ ಮಾರಾಟಕ್ಕೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಹಗಲು ರಾತ್ರಿ ಎನ್ನದೆ ಕೆಲಸ ಮಾಡ್ತಾರೆ! ಪರಿಸ್ಥಿತಿ ಹೀಗಿರುವಾಗ...?!?


ಆಸ್ಪತ್ರೆಯಲ್ಲಿ ಚಿಂತಾಜನಕ ಪರಿಸ್ಥಿತಿಯಲ್ಲಿ ಕಾರ್ತಿಕ್

ಒಂದಂತೂ ಸತ್ಯ, ಅನೇಕಲ್ಲಿಗೆ ಸಿಸಿಬಿ ಬಂದ್ರೂ ಸರಿಹೋಗುವ ಲಕ್ಷಣಗಳಿಲ್ಲ!! ಹಾಗಂತ ಇಲ್ಲಿ ಪ್ರಾಮಾಣಿಕ ಪೊಲೀಸ್ ಇಲ್ಲಾ ಅಂತಲ್ಲ. ಹತ್ತಕ್ಕೆ ಎಂಟು ಮಂದಿ ಇದ್ದೇ ಇದ್ದಾರೆ. ಆದರೆ,ಈ ಪೊಲೀಸರು ಎಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡಿದರೂ ಒಬ್ಬಿಬ್ಬರು ಭ್ರಷ್ಟರು ಮಾಡುವ ಕಿತಾಪತಿಯಿಂದ ಎಲ್ಲವೂ ಉಲ್ಟಾ ಆಗುತ್ತದೆ! ಇದರಿಂದ ಒಳ್ಳೆ ಅಧಿಕಾರಿಗೂ ಕಳಂಕ ಕಟ್ಟಿಟ್ಟಬುತ್ತಿ!! ಆನೇಕಲ್ ಇವೊತ್ತು ಕ್ರಿಮಿನಲ್‌ಗಳ ಕೊಂಪೆ ಏಕಾಗುತ್ತಿದೆ? 700 ರೌಡಿ ಶೀಟರ್‌ಗಳು ಎಲ್ಲಿಂದ ಹುಟ್ಟಿ ಬಂದರು?? ಇಷ್ಟೆಲ್ಲಾ ಕ್ರಿಮಿನಲ್ ಚಟುವಟಿಕೆಗಳಿಗೆ ಭ್ರಷ್ಟ ಪೊಲೀಸರ ಕೃಪಾಕಟಾಕ್ಷ ಇಲ್ಲವೇ ಇಲ್ಲ ಎಂದು ಹೇಳಲು ಸಾಧ್ಯವೇ?

ಕ್ರೈಂ ಕ್ಯಾಪಿಟಲ್ ಆಗುತ್ತಿರುವ ಆನೇಕಲ್ಲಿಗೆ ಅರ್ಜೆಂಟ್ ಆಗಿ ಮೇಜರ್ ಸರ್ಜರಿ ಮಾಡಲು ಖಡಕ್ ಪೊಲೀಸ್ ಆಫೀಸರಸ್‌ಗಳ ಆಗಮನವಾಗಬೇಕಿದೆ! ಆನೇಕಲ್ ತಾಲ್ಲೂಕು ಕೂಡ ಫೆರಿಫೆರಲ್ ರಿಂಗ್ ರೋಡು, ಅಪಾರ್ಟ್‌ಮೆಂಟ್, ವಿಲ್ಲಾ, ಲೇಔಟ್, ಬಿಸಿನೆಸ್ ಕಾರಿಡಾರ್, ಹೊಸೂರು ಏರ್‌ಪೋರ್ಟ್, ಹೊಸದಾಗಿ 100 ಎಕರೆಯ ಇಂಡಸ್ಟ್ರಿಯಲ್ ಟೌನ್‌ಶಿಪ್ ನಿರ್ಮಾಣ, ಸೂರ್ಯ ಸಿಟಿ ನಂತರ ಹೊಸ ಹೊಸ ಬಿಡಿಎ ಬಡಾವಣೆಗಳ ಸ್ಥಾಪನೆ, ಇವೆಲ್ಲಾ ಅಭಿವೃದ್ಧಿಯ ಹೆಸರಿನಲ್ಲಿ ಕ್ರಿಮಿನಲ್‌ಗಳಿಗೆ ಹಣದ ಖಜಾನೆಯಂತೆ ಭಾಸವಾಗುತ್ತಿದೆ... ಅದಕ್ಕಾಗಿಯೇ ಇಲ್ಲಿಗೆ ಹೊರಗಿನಿಂದಲೂ ಕ್ರಿಮಿನಲ್ ಗಳು ಬಂದು ತಮ್ಮ ಅಕ್ರಮ ಚಟುವಟಿಕೆಗಳನ್ನು ಆರಂಭಿಸಿದ್ದಾರೆ.

ಗಡಿನಾಡಹಳ್ಳಿಗಳೀಗ ಅಂಡರ್ ವರ್ಲ್ಡ್ ಮಾಫಿಯಾ ರೌಡಿಗಳ ಅಡಗುತಾಣಗಳಂತೆ ಆಗುತ್ತಿವೆ! ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಕಾನೂನು ಸುವ್ಯವಸ್ಥೆ ಕಾಪಾಡಲು, ಆನೇಕಲ್ ತಾಲೂಕಿನ ನಾಗರೀಕ ನೆಮ್ಮದಿ ಕಾಪಾಡಲು ಬೆಂಗಳೂರು ಸಿಸಿಬಿ ಪೊಲೀಸರೇ ಇಲ್ಲಿಗೆ ಬರಬೇಕಾದ ತುರ್ತು ಪರಿಸ್ಥಿತಿ ಬಂದೊದಗಬಹುದು! ಸದ್ಯ, ಬೆಂಗಳೂರಿನ ಗ್ರಾಮಾಂತರ ಎಸ್ಪಿ ಸಿ.ಕೆ.ಬಾಬಾ ಮತ್ತು ಡಿವೈಎಸ್ಪಿ ಮೋಹನ್‌ಕುಮಾರ್ ಅವರ ಮೇಲೆಯೇ ಈಗ ಹೆಚ್ಚಿನ ಒತ್ತಡ, ಜವಾಬ್ದಾರಿ ಜಾಸ್ತಿಯಾಗಿದೆ ಎನ್ನಬಹುದು...

☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 11.1.2026

# ಜಯಮಾಲಾ, ಸಾ ರಾ ಗೋವಿಂದ್‌ಗೆ ಡಾ. ರಾಜ್‌ಕುಮಾರ್ ಪ್ರಶಸ್ತಿ...



ರಾಜ್ಯ ಸರ್ಕಾರ 2020 ಮತ್ತು 2021ನೇ ಸಾಲಿನ ಡಾ. ರಾಜ್‌ಕುಮಾರ್, ಪುಟ್ಟಣ್ಣ ಕಣಗಾಲ್ ಹಾಗೂ ಡಾ. ವಿಷ್ಣುವರ್ಧನ್ ಪ್ರಶಸ್ತಿಗಳನ್ನು ಗುರುವಾರ ಪ್ರಕಟಿಸಿದೆ. 2020ನೇ ಸಾಲಿನ ಡಾ.ರಾಜ್‌ಕುಮಾರ್ ಪ್ರಶಸ್ತಿಯನ್ನು ಹಿರಿಯ ನಟಿ ಡಾ. ಜಯಮಾಲಾ ಅವರಿಗೆ ಹಾಗೂ 2021ನೇ ಸಾಲಿನ ಡಾ.ರಾಜ್‌ಕುಮಾರ್ ಪ್ರಶಸ್ತಿಗೆ ಹಿರಿಯ ನಿರ್ಮಾಪಕ ಸಾ.ರಾ. ಗೋವಿಂದ್ ಅವರಿಗೆ ಘೋಷಿಸಿಸಲಾಗಿದೆ. 2020ರ ಸಾಲಿನ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ಹಿರಿಯ ನಿರ್ದೇಶಕ ಹಾಗೂ ರಂಗಭೂಮಿ ಕಲಾವಿದ ಎಂಎಸ್ ಸತ್ಯು ಅವರಿಗೆ ನೀಡಲಾಗಿದ್ದರೆ, 2021ರ ಸಾಲಿನ ಈ ಪ್ರಶಸ್ತಿಗೆ ನಿರ್ದೇಶಕ ಶಿವರುದ್ರಯ್ಯ ಅವರು ಭಾಜನರಾಗಿದ್ದಾರೆ.

ಇನ್ನು ಜೀವಮಾನದ ಸಾಧನೆಗಾಗಿ ರಾಜ್ಯ ಸರ್ಕಾರ ನೀಡುವ ಡಾ. ವಿಷ್ಣುವರ್ಧನ್ ಪ್ರಶಸ್ತಿಯನ್ನು 2020ನೇ ಸಾಲಿನಲ್ಲಿ ಪ್ರಗತಿ ಅಶ್ವಥ್ ನಾರಾಯಣ್ ಅವರಿಗೆ ನೀಡಲಾಗಿದ್ದರೆ, 2021ರ ಸಾಲಿನ ಈ ಪ್ರಶಸ್ತಿನ್ನು ಹಿರಿಯ ನಟ ಎಂ.ಕೆ. ಸುಂದರ್ ರಾಜ್ ಅವರಿಗೆ ನೀಡಲಾಗಿದೆ. ಡಾ. ರಾಜ್ ಕುಮಾರ್ ಪ್ರಶಸ್ತಿ, ಡಾ. ವಿಷ್ಣುವರ್ಧನ್ ಪ್ರಶಸ್ತಿ ಹಾಗೂ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ವಿಜೇತರಿಗೆ ತಲಾ 5 ಲಕ್ಷ ರೂ. ನಗದು ಹಾಗೂ 50 ಗ್ರಾಂ. ಚಿನ್ನದ ಪದಕವನ್ನು ನೀಡಿ ಗೌರವಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ☯

# ಬಕ್ಕ ಬಾರಲು ಬಿದ್ದ ರಾಜಾಸಾಬ್!



'ಸಲಾರ್' ಮತ್ತು 'ಕಲ್ಕಿ' ಚಿತ್ರಗಳ ಬಳಿಕ 'ರಾಜಾಸಾಬ್' ಆಗಿ ಪ್ರಭಾಸ್ ಪ್ರೇಕ್ಷಕರ ಮುಂದೆ ಬಂದಿದ್ದಾರೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ 5 ಭಾಷೆಗಳಲ್ಲಿ ಸಿನಿಮಾ ತೆರೆಗಪ್ಪಳಿಸಿದೆ. ಮಾರುತಿ ನಿರ್ದೇಶನದ ಈ ಹಾರರ್/ ಕಾಮಿಡಿ ಥ್ರಿಲ್ಲರ್ ಚಿತ್ರಕ್ಕೆ ಭಾರೀ ಓಪನಿಂಗ್ ಸಿಕ್ಕಿದೆ. ಪ್ರಭಾಸ್ ಹಿಂದಿನ ಸಿನಿಮಾಗಳಿಗೆ ಹೋಲಿಸಿದ್ದರೆ ಈ ಚಿತ್ರದ ಬಗ್ಗೆ ಹೆಚ್ಚಿನ ಕ್ರೇಜ್ ಏನೂ ಇರಲಿಲ್ಲ. ಹೊಸಬ ಮಾರುತಿ ನಿರ್ದೇಶನದ ಹಾರರ್ ಕಾಮಿಡಿ ಜಾನರ್ ಸಿನಿಮಾ ಎನ್ನುವುದೇ ಇದಕ್ಕೆ ಮುಖ್ಯ ಕಾರಣ. ಇಷ್ಟಕ್ಕೂ 'ದಿ ರಾಜಾಸಾಬ್' ಕಥೆಯೇನು? ಸಿನಿಮಾ ಹೇಗಿದೆ?

ರಾಜು ಅಲಿಯಾಸ್ ರಾಜಾ ಸಾಬ್ (ಪ್ರಭಾಸ್) ಜಮೀನ್ದಾರನ ಮೊಮ್ಮಗನಾದರೂ ತನ್ನ ಅಜ್ಜಿ(ಜರೀನಾ ವಹಾಬ್) ಜೊತೆ ಸಾಧಾರಣ ಜೀವನ ನಡೆಸುತ್ತಿರುತ್ತಾನೆ. ಅಲ್‌ಝೈಮರ್(ಮರೆವಿನ ರೋಗ) ಸಮಸ್ಯೆಯಿಂದ ಬಳಲುತ್ತಿರುವ ಅಜ್ಜಿ, ಆಸ್ತಿಪಾಸ್ತಿ ಕೊಳ್ಳೆ ಹೊಡೆದುಕೊಂಡು ಎಂದೋ ಕೈಕೊಟ್ಟು ಹೋದ ತನ್ನ ಪತಿ ಕನಕರಾಜು (ಸಂಜಯ್ ದತ್)ಗಾಗಿ ಕಾಯುತ್ತಿರುತ್ತಾಳೆ. ಯಾವುದೇ ವಿಷಯ ಮರೆತರೂ ಪತಿಯನ್ನು ಮಾತ್ರ ಆಕೆ ಮರೆತ್ತಿರುವುದಿಲ್ಲ! ರಾಜುಗೆ ಆಕಸ್ಮಿಕವಾಗಿ ತಾತನ ಫೋಟೊ ಸಿಗುತ್ತದೆ. ಆತ ತಾತನನ್ನು ಹುಡುಕಿಕೊಂಡು ಹೈದರಾಬಾದ್‌ಗೆ ಬರ್ತಾನೆ. ಈ ಹಾದಿಯಲ್ಲಿ ಬೆಸ್ಸಿ (ನಿಧಿ ಅಗರ್‌ವಾಲ್) ಹಾಗೂ ಭೈರವಿ (ಮಾಳವಿಕಾ ಮೋಹನನ್) ಸಿಕ್ಕಿ ಅವರ ಜೊತೆ ಲವ್ ಟ್ರ್ಯಾಕ್ ನಡೆಯುತ್ತದೆ!



ಹೈದರಾಬಾದ್‌ಗೆ ಬಂದ ರಾಜುಗೆ ತನ್ನ ತಾತ ಅಷ್ಟು ಸುಲಭವಾಗಿ ಸಿಕ್ತಾನಾ? ಅಜ್ಜಿ ಹಾಗೂ ರಾಜು ನರಸಾಪುರದ ಕಾಡಿನ ರಾಜಮಹಲ್ ಬಂಗಲೆಗೆ ಬರೋದು ಯಾಕೆ? ಅಲ್ಲಿ ಆತನಿಗೆ ಎದುರಾಗುವ ಸಮಸ್ಯೆಗಳೇನು? ಕನಕರಾಜು ಹಾಗೂ ಗಂಗರಾಜು (ಸಮುದ್ರಖನಿ) ನಡುವಿನ ಕಿರಿಕ್ ಯಾಕೆ? ಅದನ್ನೆಲ್ಲಾ ರಾಜು ಹೇಗೆ ಬಗೆಹರಿಸುತ್ತಾನೆ? ಕನಕರಾಜು ಹಿನ್ನೆಲೆ ಏನು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ತೆರೆಯ ಮೇಲೆ ಸಿಗುತ್ತದೆ ನಿಮಗೆ...!! ಒಂದಂತೂ ನಿಜ, ಪ್ರಭಾಸ್ ತನ್ನ ಅಭಿಮಾನಿಗಳನ್ನು ತೃಪ್ತಿಪಡಿಸಲು ಯತ್ನಿಸಿ,

ಅತ್ತ ಹಾರರ್ ಕಾಮಿಡಿ ಸಿನಿಮಾದಲ್ಲಿ ಮನಸ್ಪೂರ್ವಕ ನಟನೆ ಮಾಡಲು ಆಗದೆ ಒದ್ದಾಡಿರುವುದು ಎದ್ದು ಕಾಣುತ್ತದೆ!! ಹೊಸಬ ಮಾರುತಿ ಎರಡು ದೋಣಿ ಮೇಲೆ ಕಾಲಿಟ್ಟು ಕನ್‌ಕ್ಲೂಶನ್‌ಗೆ ಬರಲಾಗದೆ ಭಾರಿ ಕಷ್ಟಪಟ್ಟಿರುವುದು ಸಿನಿಮಾ ನೋಡಿದರೆ ಅರ್ಥವಾಗುತ್ತದೆ. ಕೆಲ ಸನ್ನಿವೇಶಗಳು ಬಹಳ ಸೊಗಸಾಗಿದೆ. ಆದರೆ ಕೆಲವೆಡೆ ಬೇಸರ ಮೂಡಿಸುತ್ತದೆ.

ಬಹುತೇಕ ಹಾರರ್/ ಥ್ರಿಲ್ಲರ್ ಕಥೆಗಳಲ್ಲಿ ಇರುವಂತೆ ಇಲ್ಲಿಯೂ ಕೂಡ ಒಂದು ಭೂತ ಬಂಗಲೆ ಇದೆ. ಅದರ ಸುತ್ತಾ ಕಥೆ ಸಾಗುತ್ತದೆ. ಪತ್ನಿಗೆ ಮೋಸ ಮಾಡಿ ಓಡಿ ಹೋಗಿದ್ದ ಕನಕರಾಜು ಅನಂತರ ಸತ್ತು ಹೋಗಿ, ಆತನ ಆತ್ಮ ಮೊಮ್ಮೊಗ ರಾಜನಿಗೆ ಕೊಡುವ ಕ್ವಾಟ್ಲೆ ಮಜಾ ಕೊಡುತ್ತದೆ! ಮೂಲ ಕಥೆ ಚೆನ್ನಾಗಿದೆ. ಆದರೆ ಅದರ ಸುತ್ತಾ ಬರೆದುಕೊಂಡ ಚಿತ್ರಕಥೆ ಹಾಗೂ ಅದನ್ನೆಲ್ಲಾ ತೆರೆಗೆ ತಂದಿರುವ ರೀತಿ ಸರಿಯಾಗಿಲ್ಲ!! ಈ ವಿಚಾರದಲ್ಲಿ ಸ್ವಲ್ಪ ಗಮನ ಹರಿಸಿದ್ರೆ ಪ್ರಭಾಸ್ ಮತ್ತೊಂದು ಬಿಗ್ ಹಿಟ್ ಕೊಡಬಹುದಿತ್ತು!!! ☯

# ಗೀತಾ ಗೋವಿಂದ ಮ್ಯಾರೇಜ್ ಫಿಕ್ಸ್!



'ನ್ಯಾಷನಲ್ ಕ್ರಶ್' ಎಂದೇ ಖ್ಯಾತಳಾಗಿರುವ ರಶ್ಮಿಕಾ ಮಂದಣ್ಣ ಸದಾ ಒಂದಲ್ಲಾ ಒಂದು ಸುದ್ದಿಯಲ್ಲಿರುತ್ತಾರೆ. ಕೊಡಗಿನ ಈ ಬೆಡಗಿ ರಕ್ಷಿತ್ ಶೆಟ್ಟಿ ರಿಷಬ್ ಶೆಟ್ಟಿ ಆಶೀರ್ವಾದ ದಿಂದ 'ಕಿರಿಕ್ ಪಾರ್ಟಿ' ಮೂಲಕ ಬೆಳ್ಳಿತೆರೆ ಏರಿದ್ದ ವಾಸ್ತವ ಕಣ್ಮುಂದೆಯೇ ಇದೆ. ಅದಾಗ್ಯೂ ಮಾಧ್ಯಮಗಳ ಮುಂದೆ ಸ್ವೀಟ್ ಆಗಿ ನಗುತ್ತಾ ಧೈರ್ಯವಾಗಿ 'ನಾನು ಹೈದ್ರಾಬಾದ್ ಗರ್ಲ್' ಅನ್ನುತ್ತಾಳೆ! ತಮಿಳು ನಾಡಿಗೆ ಹೋದಾಗ ತಮಿಳಲ್ಲೇ ಮಾತನಾಡುತ್ತಾ, ಪಬ್ಲಿಕ್ ನತ್ತ ಫ್ಲೈಯಿಂಗ್ ಕಿಸ್ ಎಸೆದು, 'ಎನಕ್ಕು ಚೆನ್ನೈ ರುಂಬಾ ಇಷ್ಟ...ಪಸಂಗಳ್ ಕೂಡ... ಚಾನ್ಸ್ ಕಡಕ್ಕೋ ಇಂಗೇ ಸೆಟ್ಲ್ ಆವುಡುವೇ.... ಓಕೆ ವಾ....' ಎನ್ನುತ್ತಾಳೆ!!

ಒಟ್ಟಾರೆ, ಬದುಕುವ ಕಲೆ ಬಹಳ ಚನ್ನಾಗಿ ಕಲಿತಿದ್ದಾಳೆ ಕ್ರಷ್ಮಿಕಾ.... ಕೆಲ ದಿನಗಳ ಹಿಂದೆ ತನ್ನ ಮೊದಲ ಪ್ರೇಮ ವೈಫಲ್ಯದ ಬಗ್ಗೆ ರಶ್ಮಿಕಾ ಒಂದು ಹೇಳಿಕೆ ನೀಡಿದ್ದು, ಅದು ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಸಂಚಲನವನ್ನೇ ಸೃಷ್ಟಿಸಿತ್ತು. ಆ ನೋವಿನಿಂದ ಇನ್ನೂ ಹೊರಬಂದಿಲ್ಲ... ಮರೆಯೋಕೆ ಆಗ್ತಾನೆ ಇಲ್ಲ... ಅಂದಿದ್ದಳು, ಗೀತಕ್ಕ ರಶ್ಮಿಕಾ ಮಂದಣ್ಣ.

ಈಗ ನೋಡಿದ್ರೆ, ಗೋವಿಂದನ ವರಿಸಲು ಸಜ್ಜಾಗಿದ್ದಾಳೆ! ಮುಂಬರುವ ಫೆಬ್ರವರಿಯಲ್ಲಿ ರಾಜಸ್ತಾನ್ ಉದಯಪುರದಲ್ಲಿ ಮದುವೆ!! ಗೋವಿಂದ ಅಂದ್ರೆ, ಗೊತ್ತಲ್ಲಾ, ವಿಜಯ್ ದೇವರ ಕೊಂಡ. ಇವರಿಬ್ಬರೂ ನಟಿಸಿದ್ದ ಮೊದಲ ಸಿನಿಮಾ 'ಗೀತ ಗೋವಿಂದಂ'. ಅದು ಬ್ಲಾಕ್ ಬಸ್ಟರ್ ಆಗಿದ್ದಲ್ಲದೆ ಇಬ್ಬರನ್ನೂ ದೊಡ್ಡ ಸ್ಟಾರ್ ಮಾಡಿತ್ತು. ಈಗ ಪತಿ ಪತ್ನಿ ಮಾಡುತ್ತಿದೆ ನೋಡ್ರಿ. ಒಂದು ಸಿನಿಮಾದ ತಾಖತ್ತು ಅಂದ್ರೆ ಇದೇ ಇರಬಹುದು. ಕಳೆದ ತಿಂಗಳು ರಶ್ಮಿಕಾ ವಿಜಯ್ ಎಂಗೇಜ್ಮೆಂಟ್ ನಡೆಯಿತು ಅಂತ ಗ್ಯಾಸ್ಸಿಪ್ ಎದ್ದಿತ್ತು. ಅದು ಸುಳ್ಳು ಅಂದುಕೊಂಡಿದ್ದರು ಜನ. ಈ ಪೇಪರ್ರು ಟಿವಿಯವರಿಗೆ ಇನ್ನೇನ್ ಕೆಲ್ಸ.... ಬರೀ ಇಂಥವೇ ಗ್ಯಾಸ್ಸಿಪ್ ಹಬ್ಬಿಸ್ತಾರೆ ಅಂತ ಬೈದವರೆಷ್ಟೋ.



ಈಗ ನೋಡಿದ್ರೆ,ಬರೋ ಫೆಬ್ರವರಿಯಲ್ಲಿ ರಶ್ಮಿಕಾ ದೇವರಕೊಂಡ ಮದುವೆ ಅನ್ನೋ ಬ್ರೇಕಿಂಗ್ ನ್ಯೂಸ್ ಮೊಳಗಿದೆ! ಫಸ್ಟ್ ಲವ್... ಬ್ರೇಕ್ ಅಪ್ ನೋವು ಮರಿ ಯೋಕೆ ಆಗ್ತಿಲ್ಲ ಅಂದಿದ್ದ ರಶ್ಮಿಕಾ, ಈಗ ವಿಜಯ್ ದೇವರ ಕೊಂಡನ ಮದುವೆಯಾಗು ತ್ತಿರುವುದು ಅದು ಹೇಗೋ ಕಾಣೆ! ಈ ಸಿನಿಮಾಗೂ ನಿಜ ಜೀವನಕ್ಕೂ ವ್ಯತ್ಯಾಸನೇ ಅರ್ಥವಾಗದು ಕಣ್ರೀ. ಈಗಿನ ಸಿನಿಮಾ ಮಂದಿ ಎರಡೂ ಒಂದೇ ಅನ್ನೋವಂಗೆ ಬದುಕುತ್ತಿದ್ದಾರೆ....

ಅಂದಹಾಗೆ, ರಶ್ಮಿಕಾ ಮಾಜಿ ಲವರ್ ರಕ್ಷಿತ್ ಶೆಟ್ಟಿ ಈಗ ವಿಪರೀತ ಸೈಲೆಂಟ್ ಆಗಿದ್ದಾರೆ. ಚಾರ್ಲಿ 777ಗೆ ರಾಜ್ಯ ಪ್ರಶಸ್ತಿ ಬಂದರೂ ಖುಷಿ ಹಂಚಿಕೊಂಡಿಲ್ಲ!! ರಿಷಬ್ ಶೆಟ್ಟಿ ಕಾಂತಾರ ಯಶಸ್ಸಿನ ಗುಂಗಿನಲ್ಲಿ ತೇಲುತ್ತಿದ್ದಾರೆ. ರಾಜ್ ಬಿ ಶೆಟ್ಟಿ 'ಸು ಫ್ರಮ್ ಸೋ' ನಿಂದ ಕೋಟಿ ಕೋಟಿ ಬಾಚಿಕೊಂಡು ಉಪ್ಪಿ ಶಿವಣ್ಣರ ಜೊತೆ 45 ಟಪ್ಪಂಗುಚ್ಚಿ ಕುಣಿತ ಹಾಕವ್ರೆ! ಆದ್ರೆ, ಶೆಟ್ಟಿ ಗ್ಯಾಂಗ್‌ನ ರಕ್ಷಿತ್ ಶೆಟ್ಟಿ ಮಾತ್ರ ಯಾರ ಕಣ್ಣಿಗೂ ಬೀಳದೆ ನಾಪತ್ತೆಯಾಗಿದ್ದಾರೆ!! ಗೋವಿಂದ... ಗೋವಿಂದ!!! ☯

Vol. 41 No. 32 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==